بِسۡمِ اللّٰہِ الرَّحۡمٰنِ الرَّحِیۡمِ نَحْمَدُهٗ وَنُصَلِّی عَلٰی رَسُوْلِهِ الْكَرِيْمِ وَعَلٰی عَبْدِهِ الْمَسِيْحِ الْمَوْعُوْد

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 01

ಸಂಚಿಕೆ: 34

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

03 ಸೆಪ್ಟೆಂಬರ್ 2020, 03 ತಬ್‌ಲೀಗ್ 1399 ಹಿಜರಿ ಶಮ್‌ಸಿ,
14 ಮುಹರ್ರಮ್ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِہٖ وَاَمْرِہٖ

## ಅಲ್ಲಾಹನ ಉಪದೇಶ

اَلَمۡ تَرَ اِلَی الَّذِیۡنَ یُزَکُّوۡنَ اَنۡفُسَہُمۡ ؕ بَلِ
اللّٰہُ یُزَکِّیۡ مَنۡ یَّشَآءُ وَلَا یُظۡلَمُوۡنَ فَتِیۡلًا ○

(ಅನ್ನಿಸಾಅ್:50)

ಅಂದರೆ: ತಾವು ಪರಿಶುದ್ಧರೆಂದು ಭಾವಿಸಿಕೊಳ್ಳುವವರನ್ನು ನೀನು ಕಂಡಿಲ್ಲವೇ? (ಅವರಿಗೆ ಅದರ ಅಧಿಕಾರವಿಲ್ಲ.)ಆದರೆ ಅಲ್ಲಾಹನು ತಾನು ಇಚ್ಛಿಸುವವರನ್ನು ಪರಿಶುದ್ಧರನ್ನಾಗಿ ಮಾಡುತ್ತಾನೆ. ಅವರೊಡನೆ ಲವಲೇಶವಾದರೂ ಅನ್ಯಾಯ ತೋರಿಸಲ್ಪಡದು.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಫಜ್ರ್ ಮತ್ತು ಇಶಾಅ ನಮಾಝಿನ ಪ್ರಾಮುಖ್ಯತೆ

ಕಪಟ ವಿಶ್ವಾಸಿಗಳ ಮೇಲೆ ಫಝ್ರ್ ಮತ್ತು ಇಶಾಅ ನಮಾಝಿಗಿಂತ ಅಧಿಕ ಭಾರವಾಗಿ ಯಾವ ನಮಾಝ್ ಇಲ್ಲ, ಅವರು ಇದರಲ್ಲಿ ಎಷ್ಟೊಂದು ಪುಣ್ಯವಿದೆ ಎಂದು ಅರಿಯುವವರಾದರೆ, ಅವರು ಈ ನಮಾಝುಗಳಲ್ಲಿ ಮೊಣಕಾಲೂರಿಯಾದರೂ ಸರಿ ಬರುತ್ತಿದ್ದರು. ನನ್ನ ಮನಸ್ಸಿನಲ್ಲಿ ಬಂದಿದೇನಂದರೆ ನಾನು ಮುಆಜಿನ್‌ಗೆ ನಮಾಝ್ ಮಾಡಲು ಇಖಾಮತಿನ ತಕ್ಬೀರ್ ಹೇಳಲು ಆಜ್ಞಾಪಿಸಿ. ಯಾರನ್ನಾದರು ಇಮಾಮತ್ ಮಾಡಲು ಆಜ್ಞಪಿಸಿ. ನಾನು ಬೆಂಕಿಯನ್ನು ಪಡೆದು ನಮಾಝಿಗೆ ಬರದವರ ಮನೆಗಳಿಗೆ ಬೆಂಕಿ ಹಾಕಬೇಕು ಎಂದು ನನ್ನ ಮನಸ್ಸಿನಲ್ಲಿ ಬರುತ್ತದೆ. **(ಸಹೀಹ್ ಬುಖಾರಿ ಫಝ್ಲುಲ್ ಇಶಾಎ ಫಿಲ್ ಜಮಾಅತ್)**

ಹಝ್‌ರತ್ ಅಬೂ ಹುರೈರ[ರ] ವರದಿ ಮಾಡುತ್ತಾರೆ. ರಸೂಲುಲ್ಲಾಹ್[ಸ] ಹೇಳಿದರು.

ಮಲಾಯಿಕ (ದೇವದೂತರು) ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಅವರು ಜಾನಿಮಾಝಿನ (ನಮಾಝ್ ನಿರ್ವಹಿಸುವ ಚಾಪೆ) ಮೇಲೆ ಇರುವ ತನಕ ಅವರಿಗಾಗಿ ಅನುಗ್ರಹ ಕೋರುತ್ತ ದುಆ ಮಾಡುತ್ತಿದ್ದಾರೆ. ಅವರ ವುಝು ಹೋಗುವವರೆಗೆ, (ದೇವದೂತರು ಹೇಳುತ್ತಾರೆ) ಓ ಅಲ್ಲಾಹನೇ! ಅವರಿಗೆ ಕ್ಷಮೆ ನೀಡು, ಓ ಅಲ್ಲಾಹ್! ಅವರ ಮೇಲೆ ಕರುಣೆದೋರು. ನಮಾಝ್ ನಿಯತ್ತಿನಿಂದಾಗಿ ನಿಲ್ಲುವವರೆಗೆ ಆ ವ್ಯಕ್ತಿ ನಮಾಝ್ ನಿರ್ವಹಿಸಿದಂತೆಯೇ ಸರಿ. ನಮಾಝ್ ದೆಸೆಯಿಂದ ತನ್ನ ಮನೆಯತ್ತ ಹೋಗದಿರುವವರೆಗೂ ನಮಾಝ್ ನಿರ್ವಹಿಸಿದಂತೆಯೇ ಸರಿ. **(ಸಹೀಹ್ ಬುಖಾರಿ, ಬಾಬ್ ಮನ್‌ಜಲಸ ಫಿಲ್ ಮಸ್ಜಿದ್ ಯನ್ತಝಿರ್ ಅಸ್ಸಲಾತ್ ವಲ್ ಮಸ್ಜಿದ್)**

**ಮಾನವನ ಹೃದಯವು “ಹಜ್ರೆ ಅಸ್ವದ್” (ಕಅಬದಲ್ಲಿರುವ ಕಪ್ಪು ಕಲ್ಲು) ತರಹವಿದೆ. ಅವರ ಎದೆಗೂಡು ಬೈತುಲ್ಲಾಹ್ (ಕಅಬ) ವನ್ನು ಹೋಲುತ್ತದೆ.**

**ನಮ್ಮ ನಬಿ ಕರೀಮ್[ಸ] ಹತ್ತು ಸಾವಿರ ‘ಖುದ್ದೂಸಿಯರ’ (ಪವಿತ್ರ ಆತ್ಮಗಳ) ಜೊತೆ ವಿಜಯಿಯಾಗಿ ಮಕ್ಕಕ್ಕೆ ಪಾದಾರ್ಪಣೆ ಮಾಡಿದಾಗ ಆ ವಿಗ್ರಹಗಳು ನಾಶವಾದವು.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಈ ಮಾತನ್ನು ಮನಃ ಪೂರ್ವಕವಾಗಿ ನೆನಪಿಡಿರಿ. ಯಾವ ರೀತಿ ಬೈತುಲ್ಲಾಹ್ (ಕಅಬ) ದಲ್ಲಿ ಹಜ್ರೆ ಅಸ್ವದ್ (ಕಪ್ಪು ಕಲ್ಲು) ಬಿದ್ದುಕೊಂಡಿದೆಯೋ ಅದೇ ರೀತಿ ಹೃದಯವು ಎದೆಗೂಡಿನಲ್ಲಿ ಸ್ಥಾಪಿತವಾಗಿದೆ. ಬೈತುಲ್ಲಾಹ್ (ಕಅಬ) ಮೇಲೂ ಒಂದು ಕಾಲ ಬಂದಿತ್ತು. ಅವಿಶ್ವಾಸಿಗಳು ಅಲ್ಲಿ ವಿಗ್ರಹಗಳನ್ನು ಸ್ಥಾಪಿಸಿದರು. ಬೈತುಲ್ಲಾಹ್ ಮೇಲೆ ಆ ಕಾಲ ಬಾರದಿರಬಹುದಾಗಿತ್ತು. ಆದರೆ ಅಲ್ಲಿ, ಅಲ್ಲಾಹನು ಅದನ್ನು ಒಂದು ಮಾದರಿಯ ರೂಪವಾಗಿ ಇಟ್ಟಿದ್ದಾನೆ. ಮಾನವನ ಹೃದಯವು ಸಹ “ಹಜ್ರೆ ಅಸ್ವದ್ (ಕಪ್ಪು ಕಲ್ಲು) ತರಹವಿದೆ. ಮತ್ತು ಅದರ ಎದೆಗೂಡು ಬೈತುಲ್ಲಾಹ್ (ಕಅಬ) ವನ್ನು ಹೋಲುತ್ತದೆ. ಅಲ್ಲಾಹನ ಹೊರತಾದ ಭಾವನೆಗಳು ಕಅಬದಲ್ಲಿ ಇಟ್ಟಿರುವ ಆ ವಿಗ್ರಹಗಳಾಗಿವೆ. ನಮ್ಮ ನಬಿ ಕರೀಮ್[ಸ] ಹತ್ತು ಸಾವಿರ ‘ಖುದ್ದೂಸಿಯರ’ (ಪವಿತ್ರ ಆತ್ಮಗಳ) ಜೊತೆ ವಿಜಯಿಯಾಗಿ ಮಕ್ಕಕ್ಕೆ ಪಾದಾರ್ಪಣೆ ಮಾಡಿದಾಗ ಆ ವಿಗ್ರಹಗಳು ನಾಶವಾದವು. ಆ ಹತ್ತು ಸಾವಿರ ಸಹಾಬರನ್ನು ಪೂರ್ವ ಗ್ರಂಥಗಳಲ್ಲಿ ‘ಮಲಾಯಿಕ’ (ದೇವದೂತರು) ಎಂದು ಬರೆಯಲಾಗಿದೆ. ವಾಸ್ತವವಾಗಿ ಅವರ ಘನತೆ, ಗೌರವ ದೇವದೂತರಂತೆಯೇ ಆಗಿವೆ. ಮನುಷ್ಯನ ಗುಣಶಕ್ತಿಗಳು ಸಹ ಒಂದು ರೀತಿಯಲ್ಲಿ ದೇವದೂತರ ಸ್ಥಾನ ಹೊಂದಿದಂತಿವೆ. ಏಕೆಂದರೆ ದೇವದೂತರ ವಿಶೇಷ ಗುಣವೆಂದರೆ **“ಯಫ್‌ಅಲೂನ ಮಾ ಯುಮರೂನ್”** (ಅನ್ನಹ್ಲ್–51) ಅದೇ ರೀತಿ ಮನುಷ್ಯನ ಗುಣ ಶಕ್ತಿಗಳು ಪಡೆದ ಆದೇಶಗಳನ್ನು ಪಾಲಿಸುವ ಸಾಮರ್ಥ್ಯ ಹೊಂದಿರುತ್ತವೆ. ಅದೇ ರೀತಿ ಎಲ್ಲ ಶಕ್ತಿಗಳು ಮತ್ತು ಆಗುಹೋಗುಗಳು ಮನುಷ್ಯ ಆದೇಶಗಳ ಅಧೀನದಲ್ಲಿವೆ. ಆದುದರಿಂದ ಅಲ್ಲಾಹನ ಹೊರತಾಗಿ ವಿಗ್ರಹಗಳ ಸೋಲು ಮತ್ತು ನಾಶಕ್ಕಾಗಿ ಅವಶ್ಯವಾಗಿರುವುದೇನೆಂದರೆ ಅದೇ ರೀತಿಯಲ್ಲಿ ಆಕ್ರಮಿಸಬಹುದಾಗಿದೆ. ಈ ಸೈನ್ಯವು ಆತ್ಮಶುದ್ಧಿಯಿಂದ ತಯಾರಿಸಲ್ಪಡುತ್ತದೆ ಮತ್ತು ಅಂತಹವರನ್ನೇ ವಿಜಯ ಪ್ರಾಪ್ತವಾಗುತ್ತದೆ. ಆದ ಕಾರಣ ಪವಿತ್ರ ಖುರ್‌ಆನ್‌ನಲ್ಲಿ ಪ್ರಸ್ತಾಪಿಸಲಾಯಿತು. **“ಖದ್ ಅಫಲಾಹ ಮನ್‌ಝುಕ್ಕಾಹ”** (ಅಶ್ಶಮ್ಸ್–10) ಹದೀಸಿನಲ್ಲಿ ಬರುತ್ತದೆ. ಹೃದಯ ಶುದ್ಧವಾದರೆ ಎಲ್ಲ ಶರೀರವೂ ಶುದ್ಧಗೊಂಡಂತೆ, ಇದು ಎಂತಹ ಮಾತಾಗಿದೆ. ಕಣ್ಣು, ಕಿವಿ, ಕೈ, ಕಾಲುಗಳು, ನಾಲಿಗೆ ಇತ್ಯಾದಿ ಎಷ್ಟೆಲ್ಲ ಅಂಗಗಳಿವೆಯೋ ಅವು ವಾಸ್ತವವಾಗಿ ಹೃದಯ ಹೇಳಿದಂತೆಯೇ ನಡೆದುಕೊಳ್ಳುತ್ತವೆ. ಒಂದು ಭಾವ ಬರುತ್ತಲೇ ಅದು ಯಾವ ಅಂಗಕ್ಕೆ ಸಂಬಂಧಿಸಿದೆಯೋ ತಕ್ಷಣ ಅದು ಕಾರ್ಯಪ್ರವೃತ್ತವಾಗುತ್ತದೆ.

**(ಮಲ್ಫೂಝೂತ್ ಸಂಪುಟ–1, ಪುಟ 172 ಖಾದಿಯಾನ್ –2018)**

## ನನಗೆ ಈ ವಿಷಯದ ಮೇಲೆ ಸದಾ ಆಶ್ಚರ್ಯವಾಗುತಿತ್ತು. ಒಬ್ಬ ಮುಸ್ಲಿಮನಾಗಿಯೂ ಗೋರಿಯ ಮೇಲೆ ಸಾಷ್ಟಾಂಗ ಎರಗಬಹುದೇ?

**“ವ ಇಝೂ ಆಖಝ್‌ನಾ ಮೀಸಾಖ ಬನೀ ಇಸ್ರಾಈಲ ಲಾ ತಅಬುದೂನ ಇಲ್ಲಲ್ಲಾಹ್”** (ಅಲ್–ಬಖರ–84)ರ ತಫ್ಸೀರಿನ (ವ್ಯಾಖ್ಯಾನದಲ್ಲಿ) ಸಯ್ಯದುನಾ ಹಝ್‌ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್ಹು ಹೇಳುತ್ತಾರೆ.

ಇಂತಹ ಆಜ್ಞೆ ಇದ್ದಾಗಲೂ ಯಹೂದ್ಯರು ಪರಿಗಣಿಸುತ್ತಿರಲಿಲ್ಲ. ಮತ್ತು ಅವರ ವರ್ತನೆಗಳು ತಮ್ಮವರೊಡನೆಯೂ, ಇತರರೊಡನೆಯೂ ಹಳಸಿ ಹೋಗುತ್ತಿದ್ದವು. ಎಲ್ಲಿಯವರೆಗೆ ಎಂದರೆ ಅವರಲ್ಲಿ ಕೆಲವರು ಹಝ್‌ರತ್ ಅಝೀಝ್ ಅವರನ್ನು ದೇವಪುತ್ರ ಎಂದು ಕರೆಯುತ್ತಿದ್ದರು. ಯಹೂದಿಯರ ಸದೂಖಿ ಪಂಥವು ಅದು ಯಮನ್‌ನ ಕಡೆ ವಾಸಿಸುತ್ತಿದ್ದರು. ಈ ಬಹುದೇವರಾಧನೆಯಲ್ಲಿ ತೊಡಗಿಸಿಕೊಂಡಿದ್ದರು. ಮತ್ತು ಕೆಲವರು ತಮ್ಮ ಮತಪಂಡಿತರ ಪ್ರತಿಯೊಂದು ಆಜ್ಞೆಯನ್ನು ದೇವವಾಣಿಯಂತೆ ಮನಗಂಡು ತಮ್ಮ ಗ್ರಂಥದ ಆಜ್ಞೆಗಳನ್ನು ಧಿಕ್ಕರಿಸುತ್ತಿದ್ದರು. ಅನಾಥರ ಮತ್ತು ನಿರ್ಗತಿಕರೊಡನೆ ಕೆಟ್ಟದಾಗಿ ವರ್ತಿಸುತ್ತಿದ್ದರು. ಮನುಕುಲದೊಂದಿಗೆ ಅವರಿಗೆ ಕಿಂಚಿತ್ತು ದಯೆ ಇರಲಿಲ್ಲ. ಆರಾಧನೆಯಲ್ಲೂ ಆಲಸಿತನ ಮತ್ತು ಝಕಾತ್ (ದಾನ) ಕೊಡಲು ಹಿಂಜರಿಯುತ್ತಿದ್ದರು. ಇಂದಿನ ಮುಸಲ್ಮಾನರಂತೆ, ಒಂದೆಡೆ ಅವರು ತಮ್ಮನ್ನು

*(ಪುಟ ಸಂಖೆ 14 ರಲ್ಲಿ ಮುಂದುವರಿಸಲಾಗಿದೆ)*

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ۞ شَرَّ السُّمُوْمِ عَدَاوَةُ الصُّلَحَاءِ

## ಮಾಸ್ಟರ್ ಮುರಳಿಧರ ಸಾಹೇಬರಿಗೆ ಇನ್ನೊಂದು ಬಹುಮಾನದ ಪಂಥಾಹ್ವಾನ ಆತ್ಮಕ್ಕೆ ಸಂಬಂಧಿಸಿದ ಜ್ಞಾನ ಪವಿತ್ರ ಖುರ್‌ಆನ್‌ನಲ್ಲಿ ಅಧಿಕವಿದೆಯೇ ಅಥವಾ ವೇದಗಳಲ್ಲಿ?

ಆರ್ಯರ ವಿಶ್ವಾಸವೇನೆಂದರೆ ಆತ್ಮಗಳು ಮತ್ತು ಶರೀರಗಳು ಸ್ವಯಂ ಅಸ್ತಿತ್ವ ಪಡೆದಿವೆ ಮತ್ತು ಅನಾದಿಯಾಗಿದೆ. ಅಲ್ಲಾಹನು ಅವುಗಳ ಸೃಷ್ಟಿಕರ್ತನಲ್ಲ. ಈ ವಿಶ್ವಾಸವು ದೇವನ ಏಕತ್ವ ಮತ್ತು ಅವನ ಘನತೆ ಗೌರವ ಮತ್ತು ಅವನ ಆದಿ ಅನಾದಿ ಹಾಗೂ ಅದಿಪತ್ಯಕ್ಕೆ ವಿರುದ್ಧವಾಗಿದೆ. ಆದುದರಿಂದ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಈ ವಿಶ್ವಾಸವನ್ನು ಪೂರ್ಣ ಉತ್ಸಾಹದಿಂದ ಪೂರ್ಣ ಶಕ್ತಿಯಿಂದ ಮತ್ತು ಅಭೂತಪೂರ್ವ ಪುರಾವೆಗಳೊಂದಿಗೆ ಅದರ ಮಿಥ್ಯತ್ವವನ್ನು ಸಾಬೀತುಪಡಿಸಿದರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅಲ್ಲಾಹನು, ಆತ್ಮಗಳ ಮತ್ತು ಶರೀರಗಳ ಸೃಷ್ಟಿಕರ್ತ ಅಲ್ಲವಾದರೆ ಅವನು ಅದರ ಮಾಲೀಕನಾಗಲು ಸಾಧ್ಯವಿಲ್ಲ. ದೇವನು ಆತ್ಮಗಳನ್ನು ಮತ್ತು ಶರೀರಗಳನ್ನು ಕೇವಲ ಜೋಡಿಸುವ ಕೆಲಸ ಮಾಡುವುದಾದರೆ ಅವನು ಒಬ್ಬ ನಿರ್ಮಾಪಕ ಎನ್ನಬಹುದಷ್ಟೇ. ಅದಕ್ಕಿಂತ ಹೆಚ್ಚು ಇನ್ನೇನೂ ಅಲ್ಲ. ಆತ್ಮಗಳು ಮತ್ತು ಶರೀರಗಳು ಸ್ವಯಂ ಅಸ್ತಿತ್ವಕ್ಕೆ ಬಂದವು. ಅದು ದೇವನ ಸಮಾನವೇ ಸರಿ. ಏಕೆಂದರೆ ಅವು ಸ್ವಯಂ ಅಸ್ತಿತ್ವಕ್ಕೆ ಬಂದಿವೆ. ಅಲ್ಲಾಹನು ಆತ್ಮಗಳ ಮತ್ತು ಶರೀರಗಳ ಸೃಷ್ಟಿಕರ್ತ ಅಲ್ಲವಾದರೆ ಅವನಿಗೆ ಆತ್ಮಗಳ ಮತ್ತು ಶರೀರಗಳ ಬಗ್ಗೆಯೂ ಪೂರ್ಣರೂಪದ ಜ್ಞಾನವಿಲ್ಲ ಎಂದೇ ಅರ್ಥವಾಯಿತು. ಏಕೆಂದರೆ ಸೃಷ್ಟಿಕರ್ತನಿಗೆ ಮಾತ್ರ ತನ್ನ ಸೃಷ್ಟಿಯ ವಿಶೇಷತೆಗಳ ಬಗ್ಗೆ ಹಾಗೂ ಗುಣಗಳ ಬಗ್ಗೆ ಸಂಪೂಪೂರ್ಣ ಜ್ಞಾನವಿರುತ್ತದೆ, ಸೃಷ್ಟಿ ಮಾಡದವನಿಗೆ ಗೊತ್ತಿರುವುದಿಲ್ಲ. ಅಂತೆಯೇ ದೇವನು ಆತ್ಮಗಳ ಮತ್ತು ಶರೀರಗಳ ಸೃಷ್ಟಿಕರ್ತನಲ್ಲವಾದರೆ ಆತ್ಮಗಳ ಮತ್ತು ಶರೀರಗಳ ಮೇಲೆ ನಿಯಂತ್ರಣ ಸಾಧಿಸುವ ಅವನಿಗೆ ಯಾವ ಹಕ್ಕೂ ಇರುವುದಿಲ್ಲ. ಅದು ಧರ್ಮಬದ್ಧವಲ್ಲ. ಹೀಗಿದ್ದರೆ ಆರ್ಯರ ಪರಮೇಶ್ವರನ ಉದಾಹರಣೆಯು ಬಲಾತ್ಕಾರದಿಂದ ಒಂದು ದೇಶವನ್ನು ಆಕ್ರಮಿಸಿಕೊಂಡ ರಾಜನಂತಾಯಿತು. ದೇವನು ಆತ್ಮಗಳ ಮತ್ತು ಶರೀರಗಳ ಸೃಷ್ಟಿಕರ್ತನಲ್ಲವಾದರೆ ಹಾಗೂ ಮಾಲಿಕನಲ್ಲವಾದರೆ, ಯಾವ ಕಾರಣದಿಂದ ಅವನು ಸಾವಿರಾರು ಲಕ್ಷೋಪ ಆತ್ಮಗಳಿಗೆ ಪುನರ್ಜನ್ಮದ ಶಿಕ್ಷೆ ನೀಡುತ್ತಾನೆ? ಅವನಿಗೆ ಏನು ಹಕ್ಕಿದೆ? ದೇವನು ಅವರಿಗೆ ಶಾಶ್ವತವಾದ ಮುಕ್ತಿ ಏಕೆ ನೀಡುವುದಿಲ್ಲ? ಅದರ ಕಾರಣವೇನೆಂದರೆ ಆರ್ಯರ ಪರಮೇಶ್ವರನು ಆತ್ಮಗಳಿಗೆ ಶಾಶ್ವತವಾದ ಮುಕ್ತಿ ನೀಡಿದರೆ ಒಂದು ಸಮಯ ಬರುವುದು. ಎಲ್ಲ ಆತ್ಮಗಳಿಗೆ ಮುಕ್ತಿ ದೊರೆಯಬಹುದು. ಹೀಗೆ ಪರಮೇಶ್ವರನ ಕೈಯಲ್ಲಿ ಒಂದೂ ಆತ್ಮ ಉಳಿಯಲಿಕ್ಕಿಲ್ಲ. ಏಕೆಂದರೆ ಆರ್ಯರ ಪರಮೇಶ್ವರನ ಕಥೆಯನ್ವಯ ಅವನು ಯಾವೊಂದು ಆತ್ಮಕ್ಕೂ ಜನ್ಮ ನೀಡಲು ಸಾಧ್ಯವಿಲ್ಲ. ಹಾಗಿರುವಾಗ ಎಲ್ಲ ಆತ್ಮಗಳು ಮುಕ್ತಿ ಪಡೆದುಕೊಂಡರೆ ಅವನು ಕಂಗಾಲಾಗುವನು. ಅವನ ಪರಮೇಶ್ವರತ್ವ ಅಂತ್ಯಗೊಳ್ಳುವುದು. ಆ ಕಾರಣದಿಂದ ಆರ್ಯರ ಪರಮೇಶ್ವರನು ತಂತ್ರ ಹೂಡುವುದೇನೆಂದರೆ ಅವನು ಆತ್ಮಗಳನ್ನು ಸ್ವರ್ಗಕ್ಕೆ ದಾಖಲು ಮಾಡುವಾಗ ಅವರ ಒಂದಲ್ಲ ಒಂದು ಪಾಪ ತನ್ನ ಬಳಿಯಲ್ಲಿ ಬಚ್ಚಿಟ್ಟುಕೊಳ್ಳುತ್ತಾನೆ. ಅದೇ ಪಾಪದ ಫಲವಾಗಿ ಅವನನ್ನು ಸ್ವರ್ಗದಿಂದ ತೆಗೆದು ಮತ್ತೆ ಲೋಕಕ್ಕೆ ಕಳುಹಿಸುವನು. ಹಝ್ರತ್ ಮಸೀಹ್ ಮೌಊದ್(ಅ) ಈ ಆಕ್ಷೇಪಣೆಗಳ ಮೇಲೆ ಬರೆದುದರ ಭಾವಾರ್ಥ ನಾವು ಇಲ್ಲಿ ವಿವರಿಸಿದೆವು. ಮಾಸ್ಟರ್ ಮುರಳಿಧರ ಸಾಹಿಬ ಬರೆದರು.

"ಅದರ ಉತ್ತರವೇನೆಂದರೆ ಇಂತಹ ಮಾತನಾಡುವವರಿಗೆ ಆತ್ಮದ ಸ್ಥಿತಿಯ ಕುರಿತು ಏನೂ ಗೊತ್ತಿಲ್ಲ. ಅಂತೆಯೇ ಭೌತಿಕ ಸ್ಥಿತಿ ಕುರಿತು ಏನೂ ಗೊತ್ತಿಲ್ಲ." (ಸುರ್ಮಾ ಚಶ್ಮ ಆರ್ಯ, ರೂಹಾನಿ ಖಝಾಯೀನ್ ಸಂಪುಟ 2, ಪುಟ 162)

ಆಗ ಹಝ್ರತ್ ಮಸೀಹ್ ಮೌಊದ್(ಅ) ಬರೆದರು. ವಾಹ್! ಏನು ಉತ್ತಮವಾದ ಉತ್ತರ ನೀಡಿದ್ದೀರಿ. ಮಾಸ್ಟರ್ ಸಾಹಿಬ್ ಯಾವುದಾದರು ನ್ಯಾಯಾಲಯದ ನ್ಯಾಯಾಧೀಶರಾದರೆ ಒಳ್ಳೆಯ ನಿರ್ಣಯ ಕೊಡುವರು" (ಸುರ್ಮಾ ಚಶ್ಮ ಆರ್ಯ, ರೂಹಾನಿ ಖಝಾಯೀನ್ ಸಂಪುಟ 2, ಪುಟ 162)

"ಓ ಮೂಡರೇ ಮತ್ತು ಬುದ್ಧಿಮಾಂದ್ಯರೇ ದೇವನ ಪರಿಪೂರ್ಣತೆ ಮತ್ತು ಸಂಪೂರ್ಣ ಅರ್ಹತೆ ಯಾರಲ್ಲಿದೆ? ಅವನು ತಾನಾಗಿ ಏನು ಮಾಡದವನಾಗುವುದರಲ್ಲಿ ಮತ್ತು ಅವನ ಎಲ್ಲಾ ಮಾಡುವ ಸಾಮರ್ಥ್ಯ ಹೊಂದಿದವನಾಗಿ ಅವನ ಅಪರಿಮಿತ ಶಕ್ತಿ ಎಲ್ಲವೂ ನಡೆಸುವವನಾಗುವುದರಲ್ಲಿದೆ. ನೀವೇ ಸ್ವಲ್ಪ ಒಂಟಿಯಾಗಿ ಕುಳಿತು ಯೋಚಿಸಿರಿ? (ಸುರ್ಮಾ ಚಶ್ಮ ಆರ್ಯ, ರೂಹಾನಿ ಖಝಾಯೀನ್ ಸಂಪುಟ 2, ಪುಟ 162)

ಅವರು ಅಲ್ಲಾಹನು ಸೃಷ್ಟಿಕರ್ತನು, ಮಾಲೀಕನು ಮತ್ತು ಸಾರ್ವಭೌಮ ಆಗಿರುವನು ಎಂದು ಒಂದು ಜ್ಞಾನಪೂರ್ಣ, ಅರ್ಥಗರ್ಭಿತ ಭಾಷಣ ಮಾಡಿದರು. ಅಂತೆಯೇ ಆತ್ಮಗಳ ಅಸ್ತಿತ್ವ ಮತ್ತು ಅದು ಸೃಷ್ಟಿ ಎಂಬುದನ್ನು ಸಾಬೀತುಪಡಿಸಿದರು. ನಾವು ತೋರಿಸಿಕೊಟ್ಟಂತೆ ಮಾಸ್ಟರ್ ಮುರಳಿಧರ್ ಸಾಹಿಬ್ ಇಡೀ ಚರ್ಚೆಯಲ್ಲಿ ಅರ್ಥವಿಲ್ಲದ ಮಾತುಗಳು ಮತ್ತು ಅರ್ಥವಿಲ್ಲದ ಆಕ್ಷೇಪಣೆ ಹೊರತು ಏನೂ ಸಾಧಿಸಲಾಗಲಿಲ್ಲ. ಯಾವ ಜ್ಞಾನ ಪರವಾದ ಮಾತನಾಡಲಿಲ್ಲ. ಅಲ್ಲದೇ ಹಝ್ರತ್ ಮಸೀಹ್ ಮೌಊದ್(ಅ) ಎತ್ತಿದ ಆಕ್ಷೇಪಗಳಿಗೆ ಉತ್ತರ ನೀಡಲು ಸಾಧ್ಯವಾಗಿಲ್ಲ. ಅಂತೂ ತನ್ನ ಧರ್ಮ ಹಾಗೂ ವಿಶ್ವಾಸಿಗಳ ಮೇಲೆ ಮಾಡಿದ ಆಕ್ಷೇಪಗಳಿಗೆ ಕಿಂಚಿತ್ತಾದರೂ ರಕ್ಷಿಸಿಕೊಳ್ಳಲು ಆಗಲಿಲ್ಲ. ಹಝ್ರತ್ ಮಸೀಹ್ ಮೌಊದ್(ಅ) ರವರ ಸುಜ್ಞಾನದಿಂದ ತುಂಬಿದ ಭಾಷಣ ಎದುರಿನಲ್ಲಿ ಅರ್ಥವಿಲ್ಲದ ಆಕ್ಷೇಪಗಳನ್ನು ಮಾಡಿ ಪಲಾಯನ ಮಾಡಿದರು. ಅವರು ಬರೆಯುತ್ತಾರೆ. ಮಿರ್ಝಾ ಸಾಹಿಬ್ ಮತ್ತು ಇಸ್ಲಾಮ್ ಧರ್ಮೀಯರು (ಮುಹಮ್ಮದ್(ಸ)) ಅವರಲ್ಲಿ ಕೇಳುತ್ತಾರೆ. ಆತ್ಮವೆಂದರೇನು. ಆಗ ಅವರಿಗೆ ಏನೂ ಹೇಳಲಾಗಲಿಲ್ಲ. ಮತ್ತು ಆಗ ಅವರ ಮೇಲೆ ಈ ವಚನ ಅವತರಿಸಿತು. ಓ ಮುಹಮ್ಮದ್ ಹೇಳು "ಆತ್ಮವು ನನ್ನ ಪ್ರಭುವಿನ ಆಜ್ಞೆಗೆ ಅನುಗುಣವಾಗಿದೆ." ಅಂದರೆ ಮುಸಲ್ಮಾನರಿಗೆ ಏನೂ ತಿಳಿದಿತ್ತು. ಅಲ್ಲಾಹನು ಅವರ ಮಾರ್ಗದರ್ಶನದ ಮೇಲೆಯೂ ಆತ್ಮದ ಕುರಿತು ಪೂರ್ಣ ಜ್ಞಾನ ನೀಡಲಿಲ್ಲ. ದೇವನ ಉತ್ತರವಾದರೂ ನೋಡಿ ಎಷ್ಟು ಉತ್ತಮವಾಗಿದೆ.

ಆತ್ಮವು ನನ್ನ ಪ್ರಭುವಿನ ಆಜ್ಞೆಗೆ ಅನುಗುಣವಾಗಿದೆ. ಹಾಗಾದರೆ ಇತರ ವಸ್ತುಗಳು ಪ್ರಭುವಿನ ಆಜ್ಞೆಗೆ ಅನುಗುಣ ಇಲ್ಲವೇ." (ಸುರ್ಮಾ ಚಶ್ಮ ಆರ್ಯ, ರೂಹಾನಿ ಖಝಾಯೀನ್ ಸಂಪುಟ 2, ಪುಟ 171)

ಲಾಲಾ ಸಾಹೇಬರ ಇಂಗಿತ ಈ ವಚನದತ್ತ ಇತ್ತು.

**ವ ಎಸ್‌ಅಲೂನಕ ಅನಿರ್ರೂಹ್, ಖುಲಿರ್ರೂಹು ಮಿನ್ ಅಮರಿ ರಬ್ಬಿ ವಮಾ ಯೂತೀತುಮ್ ಮಿನಲ್ ಇಲ್ಮಿ ಇಲ್ಲಾ ಖಲೀಲಾ.** (ಬನೀ ಇಸ್ರಾಈಲ್–86) ಅಲ್ಲಾಹನು ಹಝ್ರತ್ ರಸೂಲುಲ್ಲಾಹ್(ಸ) ಅವರಿಗೆ ಹೇಳಿದನು. ಅವರು ನನ್ನೊಡನೆ ಆತ್ಮದ ಬಗ್ಗೆ ಕೇಳುತ್ತಾರೆ. ಹೇಳು. "ಆತ್ಮವು ನನ್ನ ಪ್ರಭುವಿನ ಆಜ್ಞೆಗೆ ಅನುಗುಣವಾಗಿದೆ. (ಅದಕ್ಕೆ ಸಂಬಂಧಿಸಿದ) ಜ್ಞಾನದಿಂದ ನಮಗೆ ಸ್ವಲ್ಪ ಮಾತ್ರವೇ ನೀಡಲಾಗಿದೆ." ಅದರಲ್ಲಿ ಸ್ವಲ್ಪ ಜ್ಞಾನದ ಸಂಬೋಧನೆ ಅವಿಶ್ವಾಸಿಗಳ ಕುರಿತಾಗಿ ಹೊರತು ಹಝ್ರತ್ ರಸೂಲುಲ್ಲಾಹ್(ಸ) ರವರ ಕುರಿತು ಅಲ್ಲ. ಮಾಸ್ಟರ್ ಮುರಳಿಧರ ಸಾಹಿಬರ ಈ ಆಕ್ಷೇಪದ ಉತ್ತರವಾಗಿ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಈ ಸಮಯ ಮಾಸ್ಟರ್ ಸಾಹಿಬರ ಜ್ಞಾನ ಮತ್ತು ಅವಸರ ವಾದ ನೋಡಿ. ಒಂದು ಕಥೆ ನೆನಪಿಗೆ ಬಂತು. ಇಂತಹ ಒಬ್ಬ ವ್ಯಕ್ತಿ ಒಂದು ನಗರದಲ್ಲಿ ವಾಸಿಸುತ್ತಿದ್ದ. ಅವನು ಮೌನದಾರಣೆ ಮಾಡಿಕೊಂಡಿದ್ದ. ಅವನ ಈ ಮೌನದಿಂದಾಗಿ ಜನರು ಭಾವಿಸಿದರು. ಇವನೊಬ್ಬ ದೊಡ್ಡ ಜ್ಞಾನ ಅಥವಾ ಬುದ್ಧಿವಂತನಾಗಿರಬೇಕು. ಅದೇ ಭಾವನೆಯಿಂದ ದೊಡ್ಡ ಸಂಖ್ಯೆಯಲ್ಲಿ ಜನರು ಅವನ ಸೇವೆಗೆ ಬರತೊಡಗಿದರು. ಒಂದು ದಿನ ಆ ವ್ಯಕ್ತಿ ಮನದಲ್ಲಿ ಯೋಚಿಸಿಕೊಂಡ. ನನಗೆ ತನ್ನ ಬುದ್ಧಿವಂತಿಕೆ ಬಹಿರಂಗಗೊಳಿಸಲು ಏನಾದರೂ ಹೇಳಬೇಕಾಗಿದೆ. ಅವನು ಒಂದೆರಡೇ ಮಾತನಾಡಿದಾಗ ಜನರು ತಿಳಿದುಕೊಂಡರು. ಇವನಿಗಿಂತ ಮೂರ್ಖ ನಮ್ಮ ನಗರದಲ್ಲಿ ಯಾರೂ ಸಹ ಇರಲಿಕ್ಕಿಲ್ಲ. ಆಗ ಅವನ ಅಕ್ಕಪಕ್ಕದಿಂದ ಎಲ್ಲ ಜನರು ಚದುರಿಹೋದರು. ಅವನು ಒಬ್ಬಂಟಿಯಗಿ ಬಹಳ ದುಃಖಿಸಿದನು. ಬಹಳ ಕಷ್ಟಪಟ್ಟು ಒಂದು ರಾತ್ರಿ ಕಳೆದನು. ಬೆಳಿಗ್ಗೆ ಆಗುತ್ತಲೇ ಈ ನಗರದಿಂದ ಎಲ್ಲೋ ಹೋಗಿಬಿಟ್ಟನು. ಹೋಗುವ ಸಮಯದಲ್ಲಿ ಒಂದು ಗೋಡೆಯ ಮೇಲೆ ಬರೆದು ಹೋದನು. ನಾನು ಮೊದಲನೇ ನನ್ನ ಮುಖ ಕನ್ನಡಿಯಲ್ಲಿ ನೋಡಿಕೊಳ್ಳುವವನಾಗುತ್ತಿದ್ದರೆ ರಹಸ್ಯ ಬಯಲಾಗುತ್ತಿರಲಿಲ್ಲ. (ಸುರ್ಮಾ ಚಶ್ಮ ಆರ್ಯ, ರೂಹಾನಿ ಖಝಾಯೀನ್ ಸಂಪುಟ 2, ಪುಟ 171)

ಹೇಳಿದರು. ಅದೇ ರೀತಿ ಮಾಸ್ಟರ್ ಸಾಹಿಬರಿಗೆ ಏನೂ ತಿಳಿಯದೆ ಜ್ಞಾನ ಹೋದ ಅರಿವಿಲ್ಲದೇ, ಅಜ್ಞಾನತೆಯಿಂದ ಆಕ್ಷೇಪ ಮಾಡಲು ನಾಲಿಗೆ ಹೊರ ಹಾಕಿದ್ದಾರೆ. ಲಾಲಾ ಸಾಹೇಬರೇ ಎಲ್ಲಿಯವರೆಗೆ ತಮ್ಮ ತಪ್ಪುಗಳನ್ನು ನಾನು ಸುಧಾರಿಸಲಿ, ಇದು ಮುಸಲ್ಮಾನರ ವಿಶ್ವಾಸವಾಗಿದೆಯೆಂದು ನೀವು ಯಾರಿಂದ ಕೇಳಿಕೊಂಡಿರುವಿರಿ. ಎಂದರೆ ಹಝ್ರತ್ ರಸೂಲುಲಾಹ್(ಸ)

*(ಪುಟ ಸಂಖೆ 14 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಪೈಗಂಬರರು ಹಝ್ರ್‌ರತ್ ಸಅದರೊಂದಿಗೆ ಉಹದ್ ಯುದ್ಧ ವೇಳೆಯಲ್ಲಿ ಹೀಗೆ ಹೇಳಿದ್ದರು: ನನ್ನ ತಾಯಿತಂದೆ ನಿನ್ನ ಮೇಲೆ ಅರ್ಪಣವಾಗಲಿ, ಬಾಣ ಹೂಡುತ್ತಾ ಹೋಗು, ಹೇ ಅತ್ಯಂತ ಶಕ್ತಿಶಾಲಿ ಯುವಕ, ಬಾಣ ಹೂಡುತ್ತಾ ಹೋಗು.**

**ಮೊಟ್ಟಮೊದಲು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ಜನರಲ್ಲಿ, ಮಕ್ಕದಲ್ಲಿ ಹಿಂಸೆಗಳನ್ನು ಅನುಭವಿಸಿದ, ಪ್ರವಾದಿ ಮುಹಮ್ಮದ್(ಸ)ರವರಿಗೆ ಕಾವಲು ನೀಡಿದ, ಇಸ್ಲಾಮ್ ಹಾಗೂ ಖಿಲಾಫತ್‌ನೊಂದಿಗೆ ನಿಷ್ಠೆಯ ಸಂಬಂಧ ಹೋಂದಿದ ಬದರಿ ಸಹಾಬಿಯಾದ ಸಅದ್ ಬಿನ್ ಅಬಿ ವಖ್ಖಾಸ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

**ಇತ್ತೀಚೆಗೆ ನಿಧನ ಹೊಂದಿದ ಪಾಕಿಸ್ತಾನಿನ ಸನ್ಮಾನ್ಯ ಮುಹಮ್ಮದ್ ಅಕ್ರಮ್ ಬಾಜ್‌ವ ಸಾಹಿಬ್ ನಾಝಿರ್ ತಾಲೀಮುಲ್ ಖುರ್‌ಆನ್ ವಖ್‌ಫೆ ಆರ್‌ಝಿಯ ಪತ್ನಿಯಾದ ದಿವಂಗತ ಬುಶ್‌ರ ಅಕ್ರಮ್ ಸಾಹಿಬ, ದಿವಂಗತ ಇಖ್ಬಾಲ್ ಅಹ್ಮದ್ ನಾಸಿರ್ ಪೀರ್‌ಕೋಟಿ ಸಾಹಿಬ್, ಗ್ಹುಲಾಂ ಫಾತಿಮ ಫಹ್ಮೀದ ಸಾಹಿಬ, ದಿವಂಗತ ಮುಹಮ್ಮದ್ ಅನ್ವರ್ ಸಾಹಿಬ್ ಹೈದರಾಬಾದ್, ದಿವಂಗತ ಸಲೀಮ್ ಹಸನುಲ್ ಜಾಬಿ ಸಾಹಿಬ್ ಆಫ್ ಸಿರಿಯಾ ಅವರೆಲ್ಲರ ಸದ್ಗುಣಗಳ ಬಗ್ಗೆ ಪ್ರಸ್ತಾವನೆ ಮತ್ತು ಅವರೆಲ್ಲರ ನಮಾಝೆ ಜನಾಝ ಗಾಯಿಬ್ ನಿರ್ವಹಣೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **24–07–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರ್‌ರತ್ ಸಅದ್ ಬಿನ್ ಅಬೀ ವಖಾಸ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿತ್ತು. ಹಝ್ರ್‌ರತ್ ಸಅದ್(ರ) ಬದರ್, ಉಹದ್, ಖಂದಕ್, ಖೈಬರ್ ಸಮೇತ ಎಲ್ಲ ಯುದ್ಧಗಳಲ್ಲಿ, ಹುದೈಬಿಯಾ ಸಂಧಿ ವೇಳೆಯಲ್ಲಿ ಮತ್ತು ಮಕ್ಕಾ ವಿಜಯದ ಸಂದರ್ಭದಲ್ಲಿ ಪೈಗಂಬರರೊಂದಿಗೆ(ಸ) ಭಾಗಿಯಾಗಿದ್ದರು. ಅವರು ಪೈಗಂಬರರ(ಸ) ನುರಿತ ಬಿಲ್ಲುಗಾರರಾಗಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–03, ಪುಟ–105, ಸಅದ್ ಬಿನ್ ಅಬೀ ವಖಾಸ್, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹಝ್ರ್‌ರತ್ ಸಅದ್(ರ) ಬಗ್ಗೆ ಒಂದು ವರದಿಯಲ್ಲಿ ಹೀಗೆ ವಿವರಿಸಲಾಗಿದೆ: ಪೈಗಂಬರ್(ಸ) ಮಾಡಿದ ಯುದ್ಧಗಳಲ್ಲಿ ಒಂದು ಸನ್ನಿವೇಶದಲ್ಲಿ ಪೈಗಂಬರರೊಂದಿಗೆ(ಸ) ಹಝ್ರ್‌ರತ್ ತಲ್‌ಹಾ ಮತ್ತು ಹಝ್ರ್‌ರತ್ ಸಅದ್(ರ) ಹೊರತು ಬೇರೆ ಯಾರೂ ಇರಲಿಲ್ಲ. (ಸ಼ಹೀಹ್ ಮುಸ್ಲಿಮ್, ಕಿತಾಬ್ ಫಝಾಎಲುಸ್ಸಹಾಬ, ಬಾಬ್ ಫಝಾಎಲ್ ತಲ್‌ಹ ವ ಝುಬೈರ್ 2415)

ಪೈಗಂಬರರೊಂದಿಗೆ ಯುದ್ಧಗಳಿಗಾಗಿ ಹೊರಡುವುದರ ಅವಸ್ಥೆಯ ಬಗ್ಗೆ ವಿವರಿಸುತ್ತಾ ಹಝ್ರ್‌ರತ್ ಸಅದ್(ರ) ಹೇಳುತ್ತಾರೆ: "ನಾವು ಪೈಗಂಬರರೊಂದಿಗೆ(ಸ) ಯುದ್ಧಗಳಿಗೆ ಹೊರಡುತ್ತಿದ್ದೆವು. ನಮ್ಮ ಸ್ಥಿತಿ ಏನಾಗಿತ್ತೆಂದರೆ, ನಮ್ಮ ಬಳಿ ಮರಗಳ ಎಲೆಗಳ ಹೊರತು ತಿನ್ನಲಿಕ್ಕೆ ಏನೂ ಇರುತ್ತಿರಲಿಲ್ಲ. ನಮ್ಮ ಪರಿಸ್ಥಿತಿ ಏನಾಗಿತ್ತೆಂದರೆ, ನಮ್ಮಲ್ಲಿ ಪ್ರತಿಯೊಬ್ಬರು ಆಡುಗಳ ಹಾಗೆ ಅಥವಾ ಒಂಟೆಗಳ ಹಿಕ್ಕೆಯ ರೀತಿಯ ಮಲ ವಿಸರ್ಜನೆ ಮಾಡುತ್ತಿದ್ದವು. ಎಂದರೆ, ಒಣಗಿದ, ತೇವವಿಲ್ಲದ. ಇನ್ನೊಂದು ವರದಿಯಲ್ಲಿ ಹೀಗೆ ಬಂದಿದೆ. ಅವರು ಹೇಳುತ್ತಾರೆ: ಈ ದಿವಸಗಳಲ್ಲಿ ನಮ್ಮ ಆಹಾರ ಬಬೂಲ್ ಎಂಬ ಮುಳ್ಳು ಮರದ ಎಂದರೆ, ಕರೀಜಾಲಿ ಮರದ ಕೊಂಬೆಗಳಾಗಿದ್ದವು. (ಸಹೀಹ್ ಬುಖಾರಿ, ಕಿತಾಬ್ ಫಝಾಎಲ್ ಅಸ್ಹಾಬುನ್ನಬಿ(ಸ), ಹದೀಸ್–3728) (ಜಾಮಿ ತಿರ್ಮಿಝಿ, ಅಬ್ವಾಬುಝ್ಝುಹದ್, ಹದೀಸ್–2366)

ಅಲ್ಲಾಹನ ಮಾರ್ಗದಲ್ಲಿ ರಕ್ತ ಹರಿಸಿದ ಮೊದಲ ವ್ಯಕ್ತಿ ಹಝ್ರ್‌ರತ್ ಸಅದ್(ರ) ಆಗಿದ್ದರು. ಅವರು ಅಲ್ಲಾಹನ ಮಾರ್ಗದಲ್ಲಿ ಬಾಣ ಹೂಡಿದ ಮೊದಲ ವ್ಯಕ್ತಿಯಾಗಿದ್ದರು. ಈ ಘಟನೆ ಉಬೈದ ಬಿನ್ ಹಾರಿಸರ ದಂಡಯಾತ್ರೆಯದ್ದಾಗಿದೆ. (ಸನನ್ ಇಬ್ನೆ ಮಾಜ ಕಿತಾಬುಸ್ಸನ, ಹದೀಸ್–131) (ಅಲ್‌ಇಸ್ತಿಯಾಬ್ ಫೀ ಮಾಡಿಫತಿಲ್ ಅಸ್‌ಹಾಬ್, ಭಾಗ–2, ಪುಟ–607, ದಾರುಲ್ ಜೀಲ್ ಬೈರೂತ್) (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಭಾಗ–2, ಪುಟ–453, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್, 2003)

ಅದರ ವಿಶದ ವಿವರಣೆ ಹೀಗಿದೆ. ಹಿಜರೀ ರಬೀಉಲ್ ಅವ್ವಲ್ 2ರಲ್ಲಿ ಒಂದು ದಂಡಯಾತ್ರೆ ನಡೆಯಿತು. ಅದನ್ನು ಉಬೈದ ಬಿನ್ ಹಾರಿಸಿನ ದಂಡಯಾತ್ರೆ ಎಂದು ಕರೆಯಲಾಗುತ್ತದೆ. ಇದರ ಬಗ್ಗೆ ಪ್ರಸ್ತಾಪಿಸುತ್ತಾ ಸೀರತ್ ಖಾತಮುನ್ನಬಿಯ್ಯೀನಿನಲ್ಲಿ ಹಝ್ರ್‌ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು(ರ) ಬರೆದಿರುವರು. ಇದರ ಕೆಲವು ಭಾಗಗಳು ನಾನು ಮುಂಚೆಯು ವಿವರಿಸಿದ್ದೇನೆ. ಪೂರ್ಣವಾಗಿಯೇ ವಿವರಿಸಿದ್ದೇನೆ ಎಂದು ನನಗೆ ಅನಿಸುತ್ತಿದೆ. ಹೇಗಿದ್ದರೂ ಈಗ ಅದಕ್ಕೆ ಸಂಬಂಧಿಸಿ ಪುನಃ ಹೇಳುತ್ತೇನೆ:

"ರಬೀಉಲ್ ಅವ್ವಲಿನ ಆರಂಭದಲ್ಲಿ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ತಮ್ಮ ಓರ್ವ ನಿಕಟ ಸಂಬಂಧಿಯಾದ ಹಝ್ರ್‌ರತ್ ಉಬೈದ ಬಿನ್ ಹಾರಿಸ್(ರ) ನೇತೃತ್ವದಲ್ಲಿ 60 ಒಂಟೆಸವಾರಿಯರಾದ ಮುಹಾಜಿರುಗಳ ಒಂದು ಸೈನ್ಯದ ಸಂಘವನ್ನು ಕಳುಹಿಸಿದರು. ಈ ಸೈನ್ಯದ ಉದ್ದೇಶ ಖುರೈಶಿಗಳ ಆಕ್ರಮಣವನ್ನು ತಡೆಯುವುದಾಗಿತ್ತು. ಹೀಗೆ ಉಬೈದ ಬಿನ್ ಹಾರಿಸ್ ಮತ್ತು ಅವರ ಸಂಗಡಿಗರು ಸ್ವಲ್ಪ ದೂರ ಯಾತ್ರೆ ಮಾಡಿ ಮಕ್ಕದಿಂದ ಮದೀನದ ಮಾರ್ಗ ಮಧ್ಯೆ ಇರುವ **ಸನಿಯತುಲ್ ಮಿರ್‌ಅತ್** ಎಂಬ ಸ್ಥಳದ ಸಮೀಪ ತಲುಪಿದಾಗ – ಪೈಗಂಬರ್(ಸ) ಹಿಜ್‌ರತ್ ಮಾಡುವಾಗ ಈ ಸ್ಥಳದಿಂದ ದಾಟಿ ಹೋಗಿದ್ದರು – ಹೇಗಿದ್ದರು ಈ ಸ್ಥಳದ ಸಮೀಪಕ್ಕೆ ತಲುಪಿದಾಗ ಅಚಾನಕ್ಕಾಗಿ ಖುರೈಶಿನ ಆಯುಧಧಾರಿಗಳಾದ ಎರಡು ಯುವಕರು ಇಕ್ರಿಮ ಬಿನ್ ಅಬೂಜಹಲಿನ ನೇತೃತ್ವದಲ್ಲಿ ಡೇರೆ ಹಾಕಿ ಇದ್ದರು. ಎರಡು ಪಕ್ಷದವರು ಮುಖಾಮುಖಿಯಾದರು. ಪರಸ್ಪರ ಬಾಣ ಹೂಡಿಕೆ ಸಹ ನಡೆಯಿತು. ಆದರೆ ಮುಸ್ಲಿಮರ ಈ ಸಂಘದ ಹಿಂದೆ ಬೇರೆ ಸಹಾಯಕ ಸಂಘ ರಹಸ್ಯವಾಗಿ ಇರಬಹುದು ಎಂದು ಭಯಪಟ್ಟು ಹೋರಾಡುವುದರಿಂದ ಹಿಂದೆ ಸರಿದರು. ಮುಸ್ಲಿಮರು ಸಹ ಅವರನ್ನು ಬೆನ್ನಟ್ಟಲಿಲ್ಲ. ಆದರೆ ಮುಶ್ರಿಕರ ಸೈನ್ಯದಿಂದ ಎರಡು ವ್ಯಕ್ತಿಗಳಾದ ಮಿಖ್‌ದಾರ್ ಬಿನ್ ಅಮ್ರ್ ಮತ್ತು ಉತ್‌ಬ ಬಿನ್ ಗ಼ಝ್ರ್‌ವಾನ್ ಎಂಬವರು ಇಕ್ರಿಮ ಬಿನ್ ಅಬೂಜಹಲಿನ ನೇತೃತ್ವದಿಂದ ಸ್ವತಃ ಓಡಿಹೋಗಿ ಮುಸ್ಲಿಮರೊಂದಿಗೆ ಸೇರಿದರು. ಸಂದರ್ಭ ನೋಡಿ ಮುಸ್ಲಿಮರೊಂದಿಗೆ ಸೇರುವ ಉದ್ದೇಶದಿಂದಲೇ ಅವರು ಖುರೈಶಿಗಳೊಂದಿಗೆ ಬಂದಿದ್ದರು. ಏಕೆಂದರೆ, ಅವರು ಒಳಗಿಂದ ಮುಸ್ಲಿಮರಾಗಿದ್ದರು. ಆದರೆ ತಮ್ಮ ದೌರ್ಬಲ್ಯದ ಕಾರಣ ಖುರೈಶಿಗಳಿಗೆ ಹೆದರಿ ವಲಸೆ ಹೋಗುತ್ತಿರಲಿಲ್ಲ. (ಮುಜಮುಲ್‌ಬಲದಾಬ್, ಸಂಪುಟ–2, ಪುಟ–99–100, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಸೀರತ್ ಖಾತುಮುನ್ನಬೀಯೀನ್, ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–328)

ಹಿಜರಿ ಶಕ 2ನೇ ಜಮಾದಿಲ್ ಊಲ ತಿಂಗಳಲ್ಲಿ ಪೈಗಂಬರ್(ಸ) ಸಅದ್ ಬಿನ್ ಅಬೀ ವಖಾಸರಿಗೆ ಎಂಟು ಮುಹಾಜಿರುಗಳ ಒಂದು ಸಂಘದ ಅಮೀರನ್ನಾಗಿ ಮಾಡಿ ಖುರೈಶಿಗಳ ಬಗ್ಗೆ ತಿಳಿಯಲು ಖ಼ರಾರ್ ಎಂಬ ಸ್ಥಳಕ್ಕೆ ಕಳುಹಿಸಿದ್ದರು. ಖ಼ರಾರ್ ಸಹ ಹಿಜಾಝ಼್‌ನಲ್ಲಿ ಜುಹ್‌ಫ ಸಮೀಪದ ಒಂದು ಪ್ರದೇಶವಾಗಿದೆ. ಹೇಗಿದ್ದರೂ ಈ ಸಂಘದ ಜನರು ಅಲ್ಲಿಗೆ ಹೋದರು. ಆದರೆ ಶತ್ರುಗಳನ್ನು ಎದುರಿಸ ಬೇಕಾಗಿ ಬರಲಿಲ್ಲ.
(ಮುಜಮುಲ್‌ಬಲದಾಬ್, ಸಂಪುಟ–2, ಪುಟ–400, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಸೀರತ್ ಖಾತುಮುನ್ನಬೀಯೀನ್, ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–329–330)

ಅನಂತರ ಅಬ್ದುಲ್ಲಾಹ್ ಬಿನ್ ಜಹಶ್‌ರ ದಂಡಯಾತ್ರೆಯ ಪ್ರಸ್ತಾಪವಿದೆ. ಅದು ಹಿಜರೀ ಜಮಾದಿಯುಲ್ ಆಖ಼ಿರ್ 2ರಲ್ಲಿ ನಡೆದಿತ್ತು. ಈ ಸಮರದಲ್ಲಿ ಹಝ಼್ರತ್ ಸಅದ್ ಸಹ ಭಾಗವಹಿಸಿದ್ದರು. ಇದರ ಬಗ್ಗೆ ಮುಂಚೆ ಒಂದು ಬಾರಿ ಹೇಳಿದ್ದೆ. ಆದರೆ ಸೀರತ್ ಖ಼ಾತಮುನ್ನಬಿಯ್ಯೀನ್ ಎಂಬ ಗ್ರಂಥದಿಂದ ಉಲ್ಲೇಖಿಸುತ್ತಾ ಇಲ್ಲಿ ಹ್ರಸ್ವವಾಗಿ ವಿವರಿಸುತ್ತೇನೆ:

ಮದೀನ ಎಲ್ಲ ರೀತಿಯ ಅಚಾನಕ್ಕಾದ ಆಕ್ರಮಣದಿಂದ ಸುರಕ್ಷಿತವಾಗಿರಲಿಕ್ಕಾಗಿ ಖುರೈಶಿಗಳ ಬಗ್ಗೆ ಎಲ್ಲ ರೀತಿಯ ಆವಶ್ಯಕ ವಿವರಗಳು ಲಭಿಸುವಂತೆ ಅವರ ಚಲವವಲನಗಳನ್ನು ಹೆಚ್ಚು ಸಮೀಪದಿಂದ ಅರಿಯಲು ಪೈಗಂಬರರು(ಸ) ಉದ್ದೇಶಿಸಿದ್ದರು. ಆದ್ದರಿಂದ ಈ ಉದ್ದೇಶಕ್ಕಾಗಿ ಪೈಗಂಬರರು(ಸ) ಎಂಟು ಮುಹಾಜಿರುಗಳ ಒಂದು ಸಂಘವನ್ನು ತಯಾರುಮಾಡಿದರು. ಖುರೈಶಿಗಳ ರಹಸ್ಯವಾದ ಉದ್ದೇಶವನ್ನು ಸುಲಭವಾಗಿ ಅರಿಯಲು ಈ ಪಾರ್ಟಿಯಲ್ಲಿ ಖುರೈಶಿಗಳ ವಿವಿಧ ಗೋತ್ರಗಳಿಗೆ ಸಂಬಂಧಿಸಿದ ವ್ಯಕ್ತಿಗಳನ್ನು ಸೇರಿಸಿದರು. ಈ ಪಾರ್ಟಿಯಲ್ಲಿ ಪೈಗಂಬರರು ತನ್ನ ಚಿಕ್ಕಮ್ಮನ ಮಗನಾದ ಹಝ಼್ರತ್ ಅಬ್ದುಲ್ಲಾಹ್ ಬಿನ್ ಜಹಶ್‌ರನ್ನು ಅಮೀರನ್ನಾಗಿ ನಿಶ್ಚಯಿಸಿದರು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಈ ಸಮರ ಸಂಘವನ್ನು ರವಾನಿಸುವಾಗ ಅವರನ್ನು ಎಲ್ಲಿಗೆ ಮತ್ತು ಯಾವ ಉದ್ದೇಶದಿಂದ ಕಳುಹಿಸಲಾಗುತ್ತಿದೆ ಎಂದು ಈ ಸಂಘದ ಅಮೀರಿಗೆ ಸಹ ತಿಳಿಸಲಿಲ್ಲ. ಬದಲಿಗೆ, ಅವರ ಕೈಯಲ್ಲಿ ಮುಚ್ಚಿದ ಪತ್ರವನ್ನು ಕೊಟ್ಟು ಹೀಗೆ ಹೇಳಿದರು: ಈ ಪತ್ರದಲ್ಲಿ ನಿಮಗಿರುವ ನಿರ್ದೇಶನಗಳನ್ನು ನಮೂದಿಸಲಾಗಿದೆ. ನೀವು ಮದೀನದಿಂದ ಎರಡು ದಿನದ ಪ್ರಯಾಣ ಮಾಡಿದ ನಂತರ ಈ ಪತ್ರವನ್ನು ತೆರೆದು, ಅದರಲ್ಲಿರುವ ನಿರ್ದೇಶನಗಳ ಪ್ರಕಾರ ಕಾರ್ಯಚರಣೆ ನಡೆಸಿರಿ. ಹೇಗಿದ್ದರೂ ಎರಡು ದಿನಗಳ ಯಾತ್ರೆಯ ನಂತರ ಈ ಪತ್ರವನ್ನು ತೆರೆದು ನೋಡಿದಾಗ, ಅದರಲ್ಲಿ ಹೀಗೆ ಬರೆಯಲಾಗಿತ್ತು: ನೀವು ಮಕ್ಕ ಮತ್ತು ತಾಇಫಿನ ನಡುವೆ ಇರುವ ನಖ್‌ಲ ಕಣಿವೆಗೆ ಹೋಗಿ, ಅಲ್ಲಿಂದ ಖುರೈಶಿಗಳ ಸ್ಥಿತಿಗತಿಗಳನ್ನು ಅರಿತು ನಮಗೆ ತಿಳಿಸಿರಿ. ಪೈಗಂಬರರು(ಸ) ಪತ್ರದ ಕೆಳಗಿನ ಭಾಗದಲ್ಲಿ ಹೀಗೆಯೂ ನಿರ್ದೇಶಿಸಿದ್ದರು: ಈ ಉದ್ದೇಶವನ್ನು ಅರಿತ ನಂತರ ನಿಮ್ಮೊಂದಿಗಿರುವ ಯಾರಾದರೂ ಸಂಘದಿಂದ ಹಿಂಜರಿಯುವುದಾದರೆ, ವಾಪಸ್ಸು ಹೋಗಲು ಇಚ್ಛಿಸುವುದಾದರೆ, ಅವರಿಗೆ ಮರಳಿಹೋಗಲು ಅನುಮತಿಯನ್ನು ನೀಡಿರಿ. ಹಝ಼್ರತ್ ಅಬ್ದುಲ್ಲಾಹ್‌ರು(ರ) ಈ ನಿರ್ದೇಶನವನ್ನು ತನ್ನ ಸಂಗಡಿಗರಿಗೆ ನೀಡಿದರು. "ನಾವು ಈ ಸೇವೆಗಾಗಿ ಹಾಜರಿರುವೆವು, ನಮ್ಮಲ್ಲಿ ಯಾರೂ ಮರಳಿ ಹೋಗಲಿಕ್ಕಿಲ್ಲ ಎಂದು ಎಲ್ಲರೂ ಒಂದೇ ಸ್ವರದಲ್ಲಿ ಹೇಳಿದರು. ಅನಂತರ ಈ ಸಂಘ ನಖ಼್‌ಲ ಕಣಿವೆ ಕಡೆಗೆ ಹೊರಟರು.

ಮಾರ್ಗ ಮಧ್ಯೆ ಸಅದ್ ಬಿನ್ ಅಬೀ ವಖಾಸ್(ರ) ಮತ್ತು ಉತ್‌ಬ ಬಿನ್ ಗ಼ಸ್‌ವಾನರ ಒಂಟೆ ಕಳೆದುಹೋಯಿತು. ಅವರು ಅದನ್ನು ಹುಡುಕುತ್ತಾ ತಮ್ಮ ಸಂಗಡಿಗರಿಂದ ಬೇರ್ಪಟ್ಟರು. ಒಂಟೆಗಳನ್ನು ಹುಡುಕಿಯೂ ಅವು ಅವರಿಗೆ ಮರಳಿ ಸಿಗಲಿಲ್ಲ. ಹೀಗೆ ಎಂಟು ಜನರ ಈ ಸಂಘದಲ್ಲಿ ಕೇವಲ ಆರು ಬಾಕಿಯಾಯಿತು. ಆ ಸಂಘ ಮುಂದಕ್ಕೆ ಸಾಗಿತು.ಈ ಕುರಿತು ಹಝ಼್ರತ್ ಮಿರ್ಝ಼ಾ ಬಶೀರ್ ಅಹ್ಮದ್ ಸಾಹಿಬರು ಒಬ್ಬ ಪಾಶ್ಚಾತ್ಯ ಬರಹಗಾರ ಮಾರ್ಗೋಲೀಸ್ ಬಗ್ಗೆ ಪ್ರಸ್ತಾಪಿಸಿರುವರು. ಅವರು ತಮ್ಮ ವಿವರಣೆಯಲ್ಲಿ ಹಝ಼್ರತ್ ಸಅದ್ ಬಿನ್ ಅಬೀ ವಖಾಸ್(ರ) ಮತ್ತು ಅವರ ಸಹಚರನ ಬಗ್ಗೆ ಸಂಶಯಗಳನ್ನು ಉಂಟುಮಾಡಲಿಕ್ಕಾಗಿ ಬರೆಯುತ್ತಾರೆ:

ಸಅದ್ ಬಿನ್ ಅಬೀ ವಖಾಸ್(ರ) ಮತ್ತು ಉತ್‌ಬ ಉದ್ದೇಶಪೂರ್ವಕವಾಗಿ ತಮ್ಮ ಒಂಟೆಗಳನ್ನು ಬಿಟ್ಟಿದ್ದರು. ಈ ನೆಪವನ್ನು ಹೇಳಿ ಅವರು ಹಿಂದುಳಿದರು. ಯಾರ ಜೀವಿತದ ಪ್ರತಿಯೊಂದು ಘಟನೆ ಅವರ ಧೈರ್ಯ ಮತ್ತು ಸಮರ್ಪಣೆ ಭಾವದ ಸಾಕ್ಷಿಯಾಗಿದೆಯೋ ಅಂತಹ ಇಸ್ಲಾಮಿನ ತ್ಯಾಗಶೀಲರ ಬಗ್ಗೆ ಸಂಶಯಿಸುವುದು, ಅದು ಸಹ ತಮ್ಮ ಭಾವನೆಯ ಅಡಿಪಾಯದಲ್ಲಿ. ಈ ಎರಡು ಸಹಾಬಿವರ್ಯರಲ್ಲಿ ಒಬ್ಬರು ಬಿಅ್‌ರೇ ಮಊನ ಯುದ್ಧದಲ್ಲಿ ಮುಶ್ರಿಕರ ಕೈಯಿಂದ ಶಹೀದಾದರು ಮತು ಎರಡನೇ ಸಹಾಬಿ ಹಲವು ಅಪಾಯಕಾರಿ ಯುದ್ಧಗಳಲ್ಲಿ ವಿಶೇಷವಾಗಿ ಭಾಗವಹಿಸಿದರು ಮತ್ತು ಕೊನೆಗೆ ಇರಾಕನ್ನೂ ಜಯಿಸಿದರು. ಇಂತಹವರ ಬಗ್ಗೆ ಸಂಶಯ ಪ್ರಕಟಿಸುವುದು ಮಿಸ್ಟರ್ ಮಾರ್ಗೋಲಿಸಿಗೆ ಮಾತ್ರ ಸಾಧ್ಯ. ರಸಕರವಾದ ಸಂಗತಿಯೇನೆಂದರೆ, "ನಾನು ಈ ಪುಸ್ತಕವನ್ನು ಯಾವುದೇ ರೀತಿಯ ಪೂರ್ವಾಗ್ರಹಕ್ಕೆ ಒಳಪಡದೇ, ಪಕ್ಷಪಾತ ಮಾಡದೇ ಬರೆದಿರುವೆನು" ಎಂದು ಮಿಸ್ಟರ್ ಮಾರ್ಗೋಲಿಸ್ ತನ್ನ ಪುಸ್ತಕದಲ್ಲಿ ವಾದಿಸುತ್ತಾರೆ.

ಹೇಗಿದ್ದರೂ ಮುಸ್ಲಿಮರ ಈ ಸಣ್ಣ ಸಂಘ ನಖ್‌ಲ ಕಣಿವೆಗೆ ತಲುಪಿದರು ಮತ್ತು ತಮ್ಮ ಕೆಲಸದಲ್ಲಿ ಮಗ್ನರಾದರು.ಮಾಹಿತಿಗಳನ್ನು ಪಡೆಯಲಿಕ್ಕಾಗಿ ಅವರಲ್ಲಿ ಕೆಲವರು ರಹಸ್ಯವನ್ನು ಕಾಪಾಡುವ ಉದ್ದೇಶದಿಂದ ತಮ್ಮ ತಲೆಗಳನ್ನು ಮುಂಡನ ಮಾಡಿದರು. ಇವರನ್ನು ಉಮ್ರ ಮಾಡಲು ಬಂದ ಜನರು ಎಂದು ದಾರಿಹೋಕರು ಭಾವಿಸಲಿಕ್ಕಾಗಿ ಹೀಗೆ ಮಾಡಿದ್ದರು. ಆದರೆ ಅವರು ಅಲ್ಲಿಗೆ ತಲುಪಿ ಅಧಿಕ ಸಮಯವಾಗಿರಲಿಲ್ಲ. ಅಚಾನಕ್ಕಾಗಿ ಖುರೈಶಿನ ಒಂದು ಸಣ್ಣ ಯಾತ್ರಾ ಸಂಘ ಅಲ್ಲಿಗೆ ತಲುಪಿತು. ಅವರು ತಾಯಿಫಿನಿಂದ ಮಕ್ಕದ ಕಡೆಗೆ ಹೋಗುತ್ತಿದ್ದರು. ಈ ಎರಡು ಪಕ್ಷಗಳು ಮುಖಾಮುಖಿಯಾದರು. ಸ್ಥಿತಿಗತಿಗಳ ಕಾರಣ ಮುಸ್ಲಿಮರು ತಮ್ಮದೇ ಇಷ್ಟಕ್ಕೆ ವಿರುದ್ಧವಾಗಿ ಖುರೈಶಿಗಳ ಯಾತ್ರಾ ಸಂಘದ ಮೇಲೆ ಆಕ್ರಮಣ ಮಾಡಿ ಅವರನ್ನು ಬಂಧಿಸಲು ಅಥವಾ ಅವರನ್ನು ಕೊಲ್ಲಲು ತೀರ್ಮಾನಿಸಿದರು. ಆಕ್ರಮಣ ನಡೆಸುವ ನಿರ್ದೇಶನ ಪೈಗಂಬರರು(ಸ) ನೀಡಿರಲಿಲ್ಲ. ಆದರೆ ಸ್ಥಿತಿಗತಿಗಳ ಕಾರಣ ಅವರು ಅಲ್ಲಾಹನ ಹೆಸರು ಉಚ್ಚರಿಸಿ ಆಕ್ರಮಣ ನಡೆಸಿದಾಗ ಸತ್ಯನಿಷೇಧಿ ಸಂಘದ ಒಬ್ಬರು ಕೊಲ್ಲಲ್ಪಟ್ಟರು ಮತ್ತು ಇಬ್ಬರನ್ನು ಬಂಧಿಸಲಾಯಿತು. ಆದರೆ, ದೌರ್ಭಾಗ್ಯದಿಂದ ನಾಲ್ಕನೇ ವ್ಯಕ್ತಿ ಓಡಿ ಕಣ್ಮರೆಯಾದನು. ಅವನನ್ನು ಮುಸ್ಲಿಮರಿಗೆ ಹಿಡಿಯಲು ಸಾಧ್ಯವಾಗಲಿಲ್ಲ. ಹೀಗೆ ಅವರ ಈ ತೀರ್ಮಾನ ವಿಜಯಿಸಲಿಲ್ಲ. ಹೇಗಿದ್ದರೂ ಅದರ ನಂತರ ಮುಸ್ಲಿಮರು ಯಾತ್ರಾ ಸಂಘದ ಸಾಮಾನುಗಳನ್ನು ವಶಪಡಿಸಿದರು. ಹೀಗೆ ಕೈದಿಗಳನ್ನು ಮತ್ತು ಸಾಮಾನುಗಳನ್ನು ತೆಗೆದುಕೊಂಡು ಬೇಗಬೇಗನೆ ಮದೀನದ ಕಡೆಗೆ ಮರಳಿ ಹೋದರು. ಸಹಾಬಿವರ್ಯರು ಯಾತ್ರಾ ಸಂಘದ ಮೇಲೆ ಹಲ್ಲೆ ನಡೆಸಿತು ಎಂಬ ವಿವರ ಪೈಗಂಬರಿಗೆ(ಸ) ಲಭಿಸಿದಾಗ, ಅವರು ಬಹಳ ಅತೃಪ್ತಿಯನ್ನು ಸೂಚಿಸಿ ಹೀಗೆ ಹೇಳಿದರು: **"ಮಾ ಅಮರ್‌ತುಕುಮ್ ಬಿಕಿತಾಲಿ ಫಿಶ್ಶಹರಿಲ್ ಹರಾಮ್,"** ಎಂದರೆ, ನಾನು ನಿಮಗೆ ಪವಿತ್ರ ತಿಂಗಳಲ್ಲಿ ಯುದ್ಧ ಮಾಡಲು ಅನುಮತಿ ನೀಡಿರಲಿಲ್ಲ. ಪೈಗಂಬರ್(ಸ) ಯುದ್ಧ ಸಂಪತ್ತನ್ನು ಸ್ವೀಕರಿಸಲಿಲ್ಲ. ಇನ್ನೊಂದು ಕಡೆ, "ಮುಸ್ಲಿಮರು ಪವಿತ್ರ ತಿಂಗಳ ಪಾವಿತ್ರ್ಯವನ್ನು ಮುರಿದ್ದಾರೆ ಎಂದು ಖುರೈಶಿಗಳು ಹೇಳತೊಡಗಿದ್ದರು. ಇದು ವರ್ಧಿಸಲು ಕಾರಣ ಕೊಲ್ಲಲ್ಪಟ್ಟ ವ್ಯಕ್ತಿ ಉಮರ್ ಬಿನ್ ಹಝ್‌ರಮಿ ಎಂಬ ಹೆಸರಿನ ಒಬ್ಬ ದೊಡ್ಡ ಸರದಾರನಾಗಿದ್ದನು. ಹೇಗಿದ್ದರೂ ಈ ನಡುವೆ ಸತ್ಯನಿಷೇಧಿಗಳಿಂದ ಕೆಲವು ವ್ಯಕ್ತಿಗಳು ತಮ್ಮ ಸೆರೆಯಾಳುಗಳನ್ನು ಬಿಡುಗಡೆಗೊಳಿಸಲು ಮದೀನಕ್ಕೆ ಬಂದರು. ಆದರೆ ಹಝ಼್ರತ್ ಸಅದ್ ಬಿನ್ ಅಬೀ ವಖಾಸ್ ಮತ್ತು ಹಝ್‌ರತ್ ಉತ್‌ಬ ಬಿನ್ ಗ಼ಝ಼್‌ವಾನ್ ಮರಳಿ ಬಂದಿರಲಿಲ್ಲ. ಖುರೈಶಿಗಳ ಕೈಗಳಿಗೆ ಇವರು ಸಿಕ್ಕರೆ ಇಬ್ಬರನ್ನು ಜೀವಂತ ಬಿಡಲಿಕ್ಕಿಲ್ಲ ಎಂಬುದರ ಬಗ್ಗೆ ಪೈಗಂಬರರು ಚಿಂತಿತರಾಗಿದ್ದರು. ಆದ್ದರಿಂದ ಅವರು ಮರಳಿ ಬರುವ ವರೆಗೆ ಸೆರೆಯಾಳುಗಳನ್ನು ಬಿಡುಗಡೆಗೊಳಿಸುವುದನ್ನು ನಿರಾಕರಿಸಿದರು. ಪೈಗಂಬರ್ ಹೇಳಿದರು: ನನ್ನ ಜನರು ಕ್ಷೇಮವಾಗಿ ಮದೀನ ತಲುಪಿದ ನಂತರ ನಿಮ್ಮ ಜನರನ್ನು ಬಿಡುಗಡೆಗೊಳಿಸಲಾಗುವುದು. ಹೀಗೆ ಅವರಿಬ್ಬರು ಮದೀನ ತಲುಪಿದಾಗ ಪೈಗಂಬರರು ಸೆರೆಯಾಳುಗಳನ್ನು ಮುಕ್ತಿಗೊಳಿಸಿದರು. ಇಬ್ಬರು ಸೆರೆಯಾಳುಗಳಲ್ಲಿ ಒಬ್ಬರು ಮದೀನ ವಾಸದಿಂದ ಪ್ರಭಾವಿತರಾಗಿ ಮುಸ್ಲಿಮಾದರು ಮತ್ತು ಬಿಅ್‌ರೆ ಮಊನ ಯುದ್ಧ ಸಂದರ್ಭದಲ್ಲಿ ಶಹೀದಾದರು. (ಸೀರತ್ ಖಾತುಮುನ್ನಬೀಯೀನ್, ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್, ಎಂ.ಎ, ಪುಟ–330–334)

ಬದರ್ ಯುದ್ಧಕ್ಕೆ ಮುಂಚಿನ ಸ್ಥಿತಿಗತಿಗಳನ್ನು ವಿವರಿಸುತ್ತಾ ಹಝ಼್‌ರತ್ ಮಿರ್ಝ಼ಾ ಬಶೀರ್ ಅಹ್ಮದ್ ಸಾಹಿಬರು ಸೀರತ್ ಖ಼ಾತಮುನ್ನಬಿಯ್ಯೀನಿನಲ್ಲಿ ಬರೆಯುತ್ತಾರೆ: ಪೈಗಂಬರರು ಬೇಗಬೇಗನೆ ಬದರ್ ಎಂಬ ಪ್ರದೇಶದ ಕಡೆಗೆ ಹೋಗಲು ಶುರುಮಾಡಿದರು. ಪೈಗಂಬರರು ಬದರ್ ಸಮೀಪ ತಲುಪಿದಾಗ ಯಾವುದೋ ಕಾರಣದಿಂದ, ಅದರ ಬಗ್ಗೆ ಹದೀಸುಗಳಲ್ಲಿ ಪ್ರಸ್ತಾಪಿಸಲಾಗಿಲ್ಲ. ಅಬೂಬಕ್ಕರನ್ನು(ರ) ತಮ್ಮ ಸವಾರಿ ಮೃಗದಲ್ಲಿ ತಮ್ಮ ಹಿಂದೆ ಕುಳ್ಳಿರಿಸಿ ಮುಸ್ಲಿಮರ ಸೈನ್ಯದ ಸ್ವಲ್ಪ ಮುಂದಕ್ಕೆ ಹೋದರು. ಆ ಸಂದರ್ಭದಲ್ಲಿ ಮಾರ್ಗ ಮಧ್ಯೆ ಪೈಗಂಬರರು ಒಬ್ಬ ವೃದ್ಧ ಬದವಿಯನ್ನು ಭೇಟಿಯಾದರು.ಈಗಾಗಲೇ ಖುರೈಶಿನ ಸೈನ್ಯ ಬದರ್ ಪ್ರದೇಶದ ಸಮೀಪಕ್ಕೆ ತಲುಪಿರುವರು ಎಂದು ಆ ವೃದ್ಧ ವ್ಯಕ್ತಿಯಿಂದ ಪೈಗಂಬರಿಗೆ ತಿಳಿಯಿತು.ಈ ವಾರ್ತೆ ಕೇಳಿ ಪೈಗಂಬರರು ಮರಳಿ ಹೋಗಿ ಹಝ಼್ರತ್ ಅಲಿ, ಹಝ್‌ರತ್ ಝ಼ುಬೈರ್ ಬಿನ್ ಅವಾಮ್ ಮತ್ತು ಸಅದ್ ಬಿನ್ ವಖಾಸರನ್ನು ಸ್ಥಿತಿಗತಿಗಳನ್ನು ಅರಿಯಲು ಮುಂದಕ್ಕೆ ಕಳುಹಿಸಿದರು. ಈ ಜನರು ಬದರಿನ ಕಣಿವೆಗೆ ಹೋದಾಗ, ಅಲ್ಲಿ ಮಕ್ಕದ ಕೆಲವು ಜನರು ಚಿಲುಮೆಯಿಂದ ನೀರನ್ನು ತುಂಬುತ್ತಿರುವುದನ್ನು ಕಂಡರು. ಈ ಸಹಾಬಿವರ್ಯರು ಈ ಸಂಘದ ಮೇಲೆ ಹಲ್ಲೆ ನಡೆಸಿ ಅವರ

ಒಬ್ಬ ಹಬಶಿ ಗುಲಾಮನನ್ನು ಸೆರೆಹಿಡಿದು ಪೈಗಂಬರರ ಬಳಿ ಕರೆತಂದರು. ಸೈನ್ಯ ಈಗ ಎಲ್ಲಿದೆ ಎಂದು ಆ ಗುಲಾಮನೊಡನೆ ಪೈಗಂಬರರು ಸೌಮ್ಯವಾಗಿ ಕೇಳಿದರು. ಅವನು ಹೇಳಿದನು: ಆ ಮುಂದಿರುವ ಬಂಡೆಕಲ್ಲಿನ ಹಿಂದೆ ಇದೆ ಎಂದು. ಪೈಗಂಬರರು ಕೇಳಿದರು: ಸೈನ್ಯದಲ್ಲಿ ಎಷ್ಟು ಜನರಿದ್ದಾರೆ? ಅವನು ಉತ್ತರಿಸಿದನು: ತುಂಬ ಇದೆ. ಆದರೆ ನನಗೆ ಎಷ್ಟು ಜನರಿದ್ದಾರೆ ಎಂದು ಗೊತ್ತಿಲ್ಲ. ಪೈಗಂಬರರು ಕೇಳಿದರು: ಸರಿ, ಅವರಿಗಾಗಿ ಪ್ರತಿದಿನ ಎಷ್ಟು ಒಂಟೆಗಳನ್ನು ಕೊಯ್ಯಲಾಗುತ್ತದೆ? ಹತ್ತು ಒಂಟೆಗಳು ಎಂದು ಅವನು ಹೇಳಿದನು. ಪೈಗಂಬರರು ಸಹಾಬರೊಡನೆ ಹೇಳಿದರು: ಒಂದು ಸಾವಿರ ಜನರಿದ್ದಾರೆ ಎಂದು ತೋರುತ್ತದೆ. ಆ ಸೈನ್ಯದಲ್ಲಿ ಯಥಾರ್ಥದಲ್ಲಿ ಅಷ್ಟೇ ಜನರಿದ್ದರು.

(ಸೀರತ್ ಖಾತುಮುನ್ನಬೀಯೀನ್, ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್, ಎಂ.ಎ, ಪುಟ-355-356)

ಈ ಭಾಗ ಸಹ ಬಹುಶಃ ನಾನು ಮುಂಚೆ ವಿವರಿಸಿದ್ದೇನೆ. ಬದರ್ ಯುದ್ಧ ವೇಳೆಯಲ್ಲಿ ಹಝ್ರತ್ ಸಅದ್[ರ] ಕಾಲ್ನಡಿಗೆಯಲ್ಲಿದ್ದೂ ನುರಿತ ಕುದುರೆ ಸವಾರರಂತೆ ಕೆಚ್ಚೆದೆಯೊಂದಿಗೆ ಹೋರಾಡಿದ್ದರು ಎಂದು ಅವರ ಶೌರ್ಯದ ಬಗ್ಗೆ ವರದಿ ಇದೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-104, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಇದೇ ಕಾರಣದಿಂದ ಅವರು ಫಾರಿಸುಲ್‌ಇಸ್ಲಾಂ ಎಂದು ಪ್ರಸಿದ್ಧರಾದರು. ಎಂದರೆ, ಇಸ್ಲಾಮಿನ ನುರಿತ ಕುದುರೆ ಸವಾರ.

(ಉಮ್ದತುಲ್ ಖಾರಿ, ಶರಹ್ ಸಹೀಹ್ ಬುಖಾರಿ, ಸಂಪುಟ-1, ಪುಟ-305, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಉಹದ್ ಯುದ್ಧ ವೇಳೆಯ ಗೊಂದಲಾವಸ್ಥೆಯಲ್ಲೂ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ದೃಢಚಿತ್ತತೆಯಿಂದ ನಿಂತ ಕೆಲವೇ ಜನರಲ್ಲಿ ಸಅದ್ ಬಿನ್ ವಖಾಸ್[ರ] ಸಹ ಸೇರುತ್ತಾರೆ.

(ಖುತ್‌ಬಾತರ ತಾಹಿರ್, (ತಖಾರೀರ್ ಜಲ್ಸ ಸಾಲಾನ ಖಬಲ್ ಅಝ್ ಖಿಲಾಫತ್) ತಖ್ರೀರ್ ಜಲ್ಸ ಸಾಲಾನ 1979, ಪುಟ-337)

ಉಹದ್ ಯುದ್ಧ ವೇಳೆಯಲ್ಲಿ ಹಝ್ರತ್ ಸಅದ್ ಬಿನ್ ಅಬೀ ವಖಾಸರ[ರ] ಸೋದರ ಉತ್‌ಬ ಬಿನ್ ಅಬೀ ವಖಾಸ್ ಮುಶ್ರಿಕರ ಪಕ್ಷದಿಂದ ಯುದ್ಧದಲ್ಲಿ ಭಾಗವಹಿಸಿದ್ದನು. ಅವನು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಹಲ್ಲೆ ಸಹ ನಡೆಸಿದ್ದನು. ಈ ಘಟನೆಯನ್ನು ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹ್ಮಹುಲ್ಲಾಹ್ ವಿವರಿಸಿದ್ದರು. ಅವರು ಹೀಗೆ ವಿವರಿಸಿದ್ದರು: ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ತೀವ್ರ ಹಲ್ಲೆ ಮಾಡಿ ಪೈಗಂಬರರ ಎರಡು ಕೆಳಗಿನ ಹಲ್ಲುಗಳನ್ನು ಮುರಿದನು ಮತ್ತು ಅವರ ಬಾಯಿಯನ್ನು ತೀವ್ರವಾಗಿ ಗಾಯಗೊಳಿಸಿದ ದುರದೃಷ್ಟ ವ್ಯಕ್ತಿಯಾಗಿದ್ದಾನೆ ಉತ್‌ಬ. ಮುಸ್ಲಿಮರ ಪಕ್ಷದಲ್ಲಿ ಯುದ್ಧ ಮಾಡುತ್ತಿದ್ದ ಉತ್‌ಬಾನ ಸಹೋದರನಾದ ಹಝ್ರತ್ ಸಅದ್ ಬಿನ್ ಅಬೀ ವಖಾಸರಿಗೆ[ರ] ಈ ದುರದೃಷ್ಟದ ಅರಿವಾದಾಗ ಪ್ರತಿಕಾರ ಮಾಡುವ ಆವೇಶದಿಂದ ಅವರ ಎದೆ ಕುದಿಯಲು ತೊಡಗಿತು. ಸಅದ್[ರ] ಹೇಳುತ್ತಾರೆ: ನಾನು ನನ್ನ ಸೋದರರನ್ನು ಕೊಲ್ಲಲು ಎಷ್ಟು ಉತ್ಸುಕನಾಗಿದ್ದೆನೆಂದರೆ, ಅಷ್ಟು ತೀವ್ರವಾದ ಅಭಿಲಾಷೆ ನನಗೆ ಯಾವುದೇ ಸಂಗತಿಯಲ್ಲಿ ಎಂದೂ ಉಂಟಾಗಿರಲಿಲ್ಲ. ಎರಡು ಸಲ ಆ ದುಷ್ಟನನ್ನು ಹುಡುಕುತ್ತಾ ಶತ್ರು ಸೈನ್ಯದ ಪಂಕ್ತಿಯನ್ನು ದಾಟಿದೆ. ಅವನನ್ನು ತುಂಡುತುಂಡಾಗಿ ಮಾಡಿ ನನ್ನ ಎದೆಯನ್ನು ತಂಪುಗೊಳಿಸಲು ಇಚ್ಛಿಸಿದೆ. ಆದರೆ ಅವನು ಪ್ರತಿಸಲ ನನ್ನನ್ನು ನೋಡಿ ನರಿಯಂತೆ ಅಡಗಿ ಕಣ್ಮರೆಯಾಗುತ್ತಿದ್ದ. ಕೊನೆಗೆ ನಾನು ಮೂರನೇ ಬಾರಿ ಹೀಗೆ ಶತ್ರು ಸೈನ್ಯದ ಒಳಗೆ ನುಗ್ಗಲು ಉದ್ದೇಶಿಸಿದಾಗ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನನ್ನೊಡನೆ ಸಹಾನುಭೂತಿಯಿಂದ ಕೇಳಿದರು: ಹೇ ದೇವನ ದಾಸ, ನೀನು ಜೀವತ್ಯಜಿಸಲು ಉದ್ದೇಶಿಸಿರುವಿಯಾ? ಹೀಗೆ ನಾನು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಡೆದ ಕಾರಣ ಈ ಉದ್ದೇಶವನ್ನು ಕೈಬಿಟ್ಟೆ. (ಖುತ್‌ಬಾತರ ತಾಹಿರ್, (ತಖಾರೀರ್ ಜಲ್ಸ ಸಾಲಾನ ಖಬಲ್ ಅಝ್ ಖಿಲಾಫತ್) ತಖ್ರೀರ್ ಜಲ್ಸ ಸಾಲಾನ 1979, ಪುಟ-346)

ಉಹದ್ ಯುದ್ಧ ವೇಳೆಯಲ್ಲಿ ಪೈಗಂಬರರ ಬಳಿ ಕೆಲವೇ ಸ್ಥಿರಚಿತ್ತರಾದ ಸಹಾಬಿವರ್ಯರು ಬಾಕಿಯಾಗಿದ್ದರು. ಹಝ್ರತ್ ಸಅದ್ ಬಿನ್ ಅಬೀ ವಖಾಸರ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು(ರ) ಹೀಗೆ ಬರೆದಿರುವರು: "ಹಝ್ರತ್ ಸಅದ್ ಬಿನ್ ಅಬೀ ವಖಾಸರಿಗೆ[ರ] ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ವತಃ ಬಾಣಗಳನ್ನು ಕೊಡುತ್ತಾ ಹೋಗುತ್ತಿದ್ದರು. ಹಝ್ರತ್ ಸಅದ್[ರ] ವ್ಯಾಪಕವಾಗಿ ಬಾಣ ಹೂಡುತ್ತಾ ಹೋಗುತ್ತಿದ್ದರು. ಒಂದು ಸಲ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಸಅದರೊಂದಿಗೆ[ರ] ಹೇಳಿದರು: ನಿನ್ನ ಮೇಲೆ ನನ್ನ ತಂದೆ ತಾಯಿ ಅರ್ಪಣವಾಗಲಿ, ನೀನು ನಿರಂತರವಾಗಿ ಬಾಣ ಹೂಡುತ್ತಾ ಹೋಗು. ಸಅದ್[ರ] ತನ್ನ ಕೊನೆಯುಸಿರು ವರೆಗೆ ಪೈಗಂಬರರ[ಸ] ಈ ಮಾತುಗಳನ್ನು ಹೆಮ್ಮೆಯಿಂದ ಪ್ರಸ್ತಾಪಿಸುತ್ತಿದ್ದರು."

(ಸೀರತ್ ಖಾತುಮುನ್ನಬೀಯೀನ್, ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್, ಎಂ.ಎ, ಪುಟ-495)

ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಹೇಳುತ್ತಾರೆ: ಪೈಗಂಬರರು[ಸ] ಉಹದ್ ಯುದ್ಧದ ದಿವಸ ತನ್ನ ಬತ್ತಳಿಕೆಯಿಂದ ಬಾಣಗಳನ್ನು ತೆಗೆದು ನನಗೆ ನೀಡಿ ಹೀಗೆ ಹೇಳಿದರು: ಬಾಣಗಳನ್ನು ಹೂಡು, ನಿನ್ನ ಮೇಲೆ ನನ್ನ ತಂದೆ ತಾಯಿ ಅರ್ಪಣವಾಗಲಿ. (ಸಹೀಹ್ ಬುಖಾರಿ ಕಿತಾಬುಲ್ ಮಗಾಝಿ, ಹದೀಸ್-4055)

ಹಝ್ರತ್ ಅಲಿ ಹೇಳುತ್ತಾರೆ: ಹಝ್ರತ್ ಸಅದ್ ಬಿನ್ ಅಬೀ ವಖಾಸರಿಗೆ ಹೊರತು ಬೇರೆ ಯಾರಿಗಾಗಿಯೂ ನನ್ನ ತಂದೆ ತಾಯಿ ನಿನ್ನ ಮೇಲೆ ಅರ್ಪಣವಾಗಲಿ ಎಂದು ಪೈಗಂಬರರು ದುಆ ಮಾಡಿದ್ದಾಗಿ ನಾನು ಕೇಳಿಲ್ಲ. ಪೈಗಂಬರರು ಹಝ್ರತ್ ಸಅದರೊಂದಿಗೆ ಉಹದ್ ಯುದ್ಧ ವೇಳೆಯಲ್ಲಿ ಹೀಗೆ ಹೇಳಿದ್ದರು: ನನ್ನ ತಾಯಿತಂದೆ ನಿನ್ನ ಮೇಲೆ ಅರ್ಪಣವಾಗಲಿ, ಬಾಣ ಹೂಡುತ್ತಾ ಹೋಗು, ಹೇ ಅತ್ಯಂತ ಶಕ್ತಿಶಾಲಿ ಯುವಕ, ಬಾಣ ಹೂಡುತ್ತಾ ಹೋಗು. (ಜಾಮಿ ತಿರ್ಮಿಝಿ, ಕಿತಾಬುಲ್ ಮುನಾಖಿಬ್,ಹದೀಸ್-3753)

ಇಲ್ಲಿ ಒಂದು ಸಂಗತಿ ಪ್ರಸ್ತಾಪಿಸಬೇಕಾಗಿದೆ. ಇದರ ಟಿಪ್ಪಣಿ ಸಹ ಇದೆ. ಅದೇನೆಂದರೆ, ಹಝ್ರತ್ ಸಅದ್ ಅಲ್ಲದೆ, ಹಝ್ರತ್ ಝುಬೈರ್ ಬಿನ್ ಅವಾಮಿನ ಹೆಸರು ಸಹ ಚರಿತ್ರೆಯಲ್ಲಿ ಬರುತ್ತದೆ. ಅವರೊಡನೆಯೂ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದರು: **ಫಿದಾಕ ಅಬೀ ವ ಉಮ್ಮಿ** ಎಂದರೆ, ನನ್ನ ತಂದೆ ತಾಯಿ ನಿನ್ನ ಮೇಲೆ ಅರ್ಪಣವಾಗಲಿ, ಇದು ಬುಖ್ಖಾರಿಯ ವರದಿಯಾಗಿದೆ. (ಸಹೀಹ್ ಬಿಖಾರಿ, ಕಿತಾಬ್ ಫಝಾಇಲುಸ್ಸಹಾಬ, ಹದೀಸ್-3720)

ಉಹದ್ ಯುದ್ಧದ ಘಟನೆಯನ್ನು ವಿವರಿಸುತ್ತಾ ಹಝ್ರತ್ ಸಅದ್ ಹೇಳುತ್ತಾರೆ: ಉಹದ್ ದಿವಸ ಪೈಗಂಬರರು ಅವರಿಗಾಗಿ ತಮ್ಮ ತಂದೆತಾಯಿಯನ್ನು ಒಟ್ಟು ಸೇರಿಸಿದರು. ಅವರು ಹೇಳುತ್ತಾರೆ, ಬಹುದೇವವಿಶ್ವಾಸಿಗಳ ಎಡೆಯಲ್ಲಿ ಒಬ್ಬ ವ್ಯಕ್ತಿ ಇದ್ದನು. ಅವರು ಮುಸ್ಲಿಮರ ವಿರುದ್ಧ ಗಲಭೆ ಎಬ್ಬಿಸಿದ್ದನು. ಪೈಗಂಬರರು ನನ್ನೊಡನೆ ಹೇಳಿದರು: ಎಂದರೆ, ಸಅದರೊಡನೆ, ಬಾಣ ಹೂಡು, ನಿನ್ನ ಮೇಲೆ ನನ್ನ ತಂದೆ ತಾಯಿ ಅರ್ಪಣವಾಗಲಿ. ಹಝ್ರತ್ ಸಅದ್ ಹೇಳುತ್ತಾರೆ: ನಾನು ಅಂಚಿಲ್ಲದ ಬಾಣವನ್ನು ಅವನ ಮೇಲೆ ಹೂಡಿದೆ. ಅದರ ಕಾರಣ ಅವನು ಸಾವನ್ನಪ್ಪಿದನು. ಅವನ ವಸ್ತ್ರ ಕಳಚಿಹೋದಾಗ ಪೈಗಂಬರರು ಸಂತೋಷದಿಂದ ಮುಗುಳ್ನಕ್ಕಿದ್ದನ್ನು ನಾನು ಕಂಡೆ. ಒಂದು ವರದಿಯಲ್ಲಿ ಈ ಘಟನೆ ಹೀಗೆ ವಿವರಿಸಗಾಗಿದೆ: ಆ ಮುಶ್ರಿಕ್ ಒಂದು ಬಾಣ ಹೂಡಿದನು. ಚರಿತ್ರೆಯ ಪುಸ್ತಕಗಳಲ್ಲಿ ಅವನ ಹೆಸರು ಹಬ್ಬಾನ್ ಎಂದು ಬರೆಯಲಾಗಿದೆ. ಅವನು ಹೂಡಿದ ಬಾಣ ಗಾಯಾಳುಗಳಿಗೆ ನೀರು ಕುಡಿಸುತ್ತಿದ್ದ ಹಝ್ರತ್ ಉಮ್ಮೇ ಐಮನಿನ ವಸ್ತ್ರಕ್ಕೆ ತಗುಲಿತು. ಅದನ್ನು ನೋಡಿ ಹಬ್ಬಾನ್ ನಗಲು ತೊಡಗಿದ. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಸಅದರಿಗೆ[ರ] ಹಬ್ಬಾನ್ ಮೇಲೆ ಹೂಡಲಿಕ್ಕಾಗಿ ಒಂದು ಬಾಣವನ್ನು ಕೊಟ್ಟರು. ಆ ಬಾಣ ಹಬ್ಬಾನಿನ ಗಂಟಲಿಗೆ ತಗುಲಿ ಅವನು ಹಿಂದಕ್ಕೆ ಬಿದ್ದ. ಅದರಿಂದ ಅವನ ವಸ್ತ್ರ ಕಳಚಿಹೋಯಿತು. ಅದನ್ನು ನೋಡಿ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಗುಳ್ನಕ್ಕರು.

(ಅಲ್‌ಅಸಾಬ, ಸಂಪುಟ-3, ಪುಟ-64, ಸಅದ್ ಬಿನ್ ಮಾಲಿಕ್. ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1995)

ಸಹೀಹ್ ಮುಸ್ಲಿಮಿನಲ್ಲಿ ಈ ಹದೀಸ್ ವರದಿಯಾಗಿದೆ. ನಮ್ಮ ನೂರ್ ಫೌಂಡೇಶನ್ ಮಾಡಿರುವ ತರ್ಜುಮೆಯಲ್ಲಿ ಈಗ ಇದರ ಕುರಿತು ಒಂದು ಟಿಪ್ಪಣಿ ಕೊಡಲಾಗಿದೆ. ಅದು ತುಂಬ ಒಳ್ಳೆಯ ಟಿಪ್ಪಣಿಯಾಗಿದೆ. ಅದರಲ್ಲಿ ಹೀಗೆ ಬರೆಯಲಾಗಿದೆ: ಅಂಚು ಕೂಡ ಇಲ್ಲದ ಒಂದು ಬಾಣದಿಂದ ಒಬ್ಬ ಅಪಾಯಕಾರಿ ಶತ್ರುವನ್ನು ಮಾರ್ಗದಿಂದ ಪಕ್ಕಕ್ಕೆ ಸರಿಸಲಿಕ್ಕಾಗಿ ಅಲ್ಲಾಹನು ತೋರಿಸಿದ ಔದಾರ್ಯದ ಕಾರಣದಿಂದ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಂತೋಷಗೊಂಡಿದ್ದರು ಎಂದು ಅದರಲ್ಲಿ ಟಿಪ್ಪಣಿ ಕೊಡಲಾಗಿದೆ. (ಸಹೀಹ್ ಮುಸ್ಲಿಮ್ ಸಂಪುಟ-19, ಪುಟ-41, ನೂರ್ ಫೌಂಡೇಶನ್)

ಹಝ್ರತ್ ಸಅದ್[ರ] ಉಹದ್ ಯುದ್ಧ ವೇಳೆಯಲ್ಲಿ ಒಂದು ಸಾವಿರ ಬಾಣಗಳನ್ನು ಹೂಡಿದ್ದರು ಎಂದು ಒಂದು ವರದಿಯಲ್ಲಿ ಬಂದಿದೆ. (ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್, ಸಂಪುಟ-2, ಪುಟ-71)

ಹುದೈಬಿಯಾ ಸಂಧಿಯ ವೇಳೆ ಒಪ್ಪಂದ ಪತ್ರದಲ್ಲಿ ಸಾಕ್ಷಿಯಾಗಿ ಸಹಿ ಮಾಡಿದ ಸಹಾಬಿವರ್ಯರಲ್ಲಿ ಹಝ್ರತ್ ಸಅದ್ ಬಿನ್

ಅಬೀ ವಖಾಸ್(ರ) ಸಹ ಒಬ್ಬರಾಗಿರುವರು. (ಸೀರತ್ ಖಾತುಮುನ್ನಬೀಯೀನ್, ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್, ಎಂ.ಎ, ಪುಟ-769)

ಮಕ್ಕಾ ವಿಜಯದ ಸಂದರ್ಭದಲ್ಲಿ ಮುಹಾಜಿರುಗಳ ಮೂರು ಧ್ವಜಗಳಲ್ಲಿ ಒಂದು ಧ್ವಜ ಹಝ್ರತ್ ಸಅದ್ ಬಿನ್ ಅಬೀ ವಖಾಸರ(ರ) ಬಳಿಯಿತ್ತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಬಾಗ-3, ಪುಟ-105, ದಾರುಲ್ ಕುತುಬ್ ಇಲ್ಮಿಯ ಬೈರೂತ್ ಲೆಬನಾನ್ 1990)

ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿದಾಯದ ಹಜ್ಜಿನ ಸಂದರ್ಭದಲ್ಲಿ ಹಝ್ರತ್ ಸಅದ್(ರ) ರೋಗಗ್ರಸ್ತರಾದರು. ಇದರ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಸಅದ್(ರ) ಹೇಳುತ್ತಾರೆ: "ನಾನು ಮಕ್ಕದಲ್ಲಿ ರೋಗಿಯಾಗಿ ಮರಣ ಸಮೀಪಿಸುವಂತೆ ಭಾಸವಾಯಿತು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನ ಕ್ಷೇಮ ವಿಚಾರಿಸಲು ನನ್ನ ಬಳಿ ಬಂದರು. ನಾನು ಹೇಳಿದೆ: ರಸೂಲುಲ್ಲಾಹ್, ನನ್ನ ಬಳಿ ಬಹಳ ಹೆಚ್ಚು ಸಂಪತ್ತಿದೆ. ನನಗೆ ವಾರಸುದಾರಳಾಗಿ ಒಬ್ಬಳು ಮಗಳು ಮಾತ್ರ ಇದ್ದಾಳೆ. ಹೀಗಿರುವಾಗ ನಾನು ನನ್ನ ಸಂಪತ್ತಿನ ಮೂರರಲ್ಲಿ ಎರಡು ಭಾಗವನ್ನು ದಾನ ಮಾಡಲೇ? ಬೇಡವೆಂದು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಉತ್ತರಿಸಿದರು. ಹಾಗಾದರೆ ಅರ್ಧ ಸಂಪತ್ತು ದಾನ ಮಾಡಲೇ? ಎಂದು ನಾನು ಕೇಳಿದೆ. ಬೇಡವೆಂದು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಉತ್ತರಿಸಿದರು. ಹಾಗಾದರೆ ಮೂರರಲ್ಲಿ ಒಂದು ಭಾಗವನ್ನು ದಾನ ಮಾಡಲೇ? ಎಂದು ನಾನು ಕೇಳಿದೆ. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಸರಿ, ಆದರೆ ಇದು ಕೂಡ ಬಹಳ ಅಧಿಕವಾಗಿದೆ. ನೀವು ನಿಮ್ಮ ಮಕ್ಕಳನ್ನು ಸಂಪನ್ನರನ್ನಾಗಿ ಬಿಟ್ಟುಹೋಗುವುದಾದರೆ, ಅದು ಅವರನ್ನು ದರಿದ್ರರನ್ನಾಗಿ ಮಾಡಿ ಜನರ ಮುಂದೆ ಕೈ ಚಾಚುವ ಸ್ಥಿತಿಯಲ್ಲಿ ಬಿಟ್ಟುಹೋಗುವುದಕ್ಕಿಂತ ಉತ್ತಮವಾಗಿದೆ. ನೀವು ಖರ್ಚು ಮಾಡುವುದರ ಪ್ರತಿಫಲ ನಿಮಗೆ ಸಿಗುವುದು. ನೀವು ನಿಮ್ಮ ಪತ್ನಿಯ ಬಾಯಿಗೆ ಹಾಕುವ ತುತ್ತಿಗೂ ಪ್ರತಿಫಲ ಸಿಗುವುದು. ನಾನು ಕೇಳಿದೆ: ಯಾ ರಸೂಲುಲ್ಲಾಹ್, ನಾನು ನನ್ನ ಹಿಜ್‌ರತಿನಲ್ಲಿ ಹಿಂದುಳಿಯುವನೇ? ಪೈಗಂಬರರು ಹೇಳಿದರು: ನೀನು ಹಿಂದುಳಿದರೂ ನೀನು ಅಲ್ಲಾಹನ ಸಂಪ್ರೀತಿಗಾಗಿ ಮಾಡುವ ಎಲ್ಲ ಕೆಲಸಗಳಿಂದ ನಿನ್ನ ಪದವಿ ಮತ್ತು ಸ್ಥಾನ ಮೇಲೇಳುವುದು ಮತ್ತು ನನ್ನ ನಂತರವೂ ನೀನು ಜೀವಿಸುವೆ ಎಂದು ನಾನು ನಿರೀಕ್ಷಿಸುತ್ತೇನೆ. ನಿನ್ನಿಂದ ಕೆಲವು ಸಮುದಾಯಗಳು ಪ್ರಯೋಜನ ಪಡೆಯುವ ಮತ್ತು ಕೆಲವು ಸಮುದಾಯಗಳಿಗೆ ನಷ್ಟ ಉಂಟಾಗುವ ವರೆಗೆ ನೀನು ಜೀವಂತವಾಗಿರುವೆ. (ಸಹೀಹ್ ಬುಖಾರಿ, ಕಿತಾಬುಲ್ ಫರಾಏಝ್, ಬಾಬ್ ಮೀರಾಸುಲ್ ಬನಾತ್, ಹದೀಸ್-6733)

ಇನ್ನೊಂದೆಡೆ ಪೈಗಂಬರರು ಹೀಗೆ ದುಆ ಮಾಡಿದ್ದಾಗಿ ವರದಿಯಾಗಿದೆ: ಹೇ ಅಲ್ಲಾಹ್, ನನ್ನ ಸಹಾಬಿವರ್ಯರಿಗೆ ಅವರ ಹಿಜ್‌ರತ್ ಪೂರ್ತಿ ಮಾಡು, ಅವರು ಮರಳಿ ಹೋಗುವಂತಾಗದಿರಲಿ. (ಸಹೀಹ್ ಬುಆಖರಿ ಕಿತಾಬುಲ್ ಜಾಏಝ್, ಬಾಬ್ ರಸಾಉನ್ನಬಿ(ಸ), ಹದೀಸ್-1295)

ಇನ್ನೊಂದು ಸ್ಥಳದಲ್ಲಿ ಹೀಗೆಯೂ ವರದಿಯಾಗಿದೆ: ಹಝ್ರತ್ ಸಅದ್ ಹೇಳುತ್ತಾರೆ: ನಾನು ರೋಗಿಯಾದಾಗ ಪೈಗಂಬರರು ನನ್ನನ್ನು ನೋಡಲು ಬಂದು ನನ್ನೊಡನೆ ಹೀಗೆ ಕೇಳಿದರು: ನೀನು ವಸಿಯ್ಯತ್ ಮಾಡಿದ್ದೀಯಾ? ಹೌದು ಎಂದು ನಾನು ಹೇಳಿದೆ. ಎಷ್ಟು ಎಂದು ಪೈಗಂಬರರು ಕೇಳಿದರು."ನನ್ನ ಎಲ್ಲ ಸಂಪತ್ತು ಅಲ್ಲಾಹನ ಮಾರ್ಗದಲ್ಲಿ" ಎಂದು ನಾನು ಹೇಳಿದೆ. "ನಿನ್ನ ಮಕ್ಕಳಿಗಾಗಿ ನೀನು ಏನನ್ನು ಬಿಟ್ಟಿದ್ದೀಯ ಎಂದು ಪೈಗಂಬರರು ಕೇಳಿದರು: ಅವರು ಧನಿಕರು ಎಂದು ನಾನು ಹೇಳಿದೆ. ಪೈಗಂಬರರು ಹೇಳಿದರು: ಹಾಗಾದರೆ, ಹತ್ತರಲ್ಲಿ ಒಂದು ಭಾಗವನ್ನು ವಸಿಯ್ಯತ್ ಮಾಡು. ನಾನು ನನ್ನ ಇಚ್ಛೆಯನ್ನು ಹೇಳುತ್ತಾ ಹೋದೆ. ಆದರೆ ಪೈಗಂಬರರು ಹಾಗೆಯೇ ಹೇಳುತ್ತಿದ್ದರು. ಎಂದರೆ, ಹಝ್ರತ್ ಸಅದ್ ಹೆಚ್ಚು ಸಂಪತ್ತನ್ನು ದಾನ ಮಾಡಲು, ಸದಖ ಮಾಡಲು ಇಚ್ಛಿಸುತ್ತಿದ್ದರು. ಆದರೆ ಪೈಗಂಬರರು ಅದನ್ನು ಕಡಿಮೆ ಮಾಡಲು ಉಪದೇಶಿಸುತ್ತಿದ್ದರು. ಎಲ್ಲಿಯವರೆಗೆ ಎಂದರೆ, ಕೊನೆಗೆ ಮೂರರಲ್ಲಿ ಒಂದು ಭಾಗವನ್ನು ವಸಿಯ್ಯತ್ ಮಾಡಲು ಹೇಳಿದರು. ಅದು ಕೂಡ ತುಂಬ ಹೆಚ್ಚು ಎಂದು ಹೇಳಿದರು. (ಸನನ್ ನಿಸಾಯಿ, ಕಿತಾಬುಲ್ ವಸಾಯ, ಬಾಬ್ ಅಲ್‌ವಸಾಯ ಬಿಸ್ಸುಲುಸ್ ಹದೀಸ್-3661)

ಹೇಗಿದ್ದರೂ ಮೂರರಲ್ಲಿ ಒಂದು ಭಾಗಗಿಂತ ಹೆಚ್ಚಿನ ಸಂಪತ್ತಿನ ವಸಿಯ್ಯತ್ ಮಾಡಬಾರದೆಂದು ಈ ವರದಿಯಿಂದ ಕರ್ಮಶಾಸ್ತ್ರ ಪಂಡಿತರು ಅನುಮಾನಿಸಿದ್ದಾರೆ. (ಜಾಮಿ ತಿರ್‌ಮಿಝೀ, ಅಬ್ವಾಬುಲ್ ವಸಾಯ, ಬಾಬ್ ಮಾಜಾಅ ಫಿಲ್ ವಸೀಯ ಬಿಸ್ಸುಲುಸ್, ಹದೀಸ್-2116)

ಇದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

"ತಮ್ಮ ಸ್ವಂತ ಖರ್ಚಿಗೆ ಬೇಕಾಗುವಷ್ಟು ಇರಿಸಿಕೊಂಡು ಉಳಿದ ಎಲ್ಲ ಸಂಪತ್ತನ್ನು ವಿತರಣೆ ಮಾಡಲು ಇಸ್ಲಾಮ್ ಆದೇಶಿಸುವುದಿಲ್ಲವೆಂದು ಹದೀಸುಗಳಿಂದಲೂ ತಿಳಿದುಬರುತ್ತದೆ. ಈ ಕುರಿತು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳುತ್ತಾರೆ: **"ಯಜೀಉ ಅಹದುಕುಮ್ ಬಿಮಾಲಿ ಕುಲ್ಲಿಹಿ ಯತಸದ್ದಕ ಬಿಹೀ ವಯಜ್‌ಲಿಸು ಯತಕಫ್ಫಫುನ್ನಾಸ. ಇನ್ನಮಸ್ಸದಖತ ಅನಿಝ್ಹ್‌ರಿ ಗನಿ."** ಎಂದರೆ, ನಿಮ್ಮಲ್ಲಿ ಕೆಲವರು ತಮ್ಮ ಸಕಲ ಸಂಪತ್ತನ್ನು ತೆಗೆದುಕೊಂಡು ದಾನ ಮಾಡಲು ಬರುತ್ತಾರೆ. ಅನಂತರ ಜನರ ಮುಂದೆ ಭಿಕ್ಷೆ ಬೇಡುತ್ತಾರೆ. ಸದಖ ಕೇವಲ ಹೆಚ್ಚಿನ ಸಂಪತ್ತಿನಿಂದ ಮಾಡಲಾಗುತ್ತದೆ. ಅದೇ ರೀತಿಯಲ್ಲಿ ಹೇಳುತ್ತಾರೆ: ನೀವು ನಿಮ್ಮ ವಾರಸುದಾರರನ್ನು ಸಂಪತ್ತಿನೊಂದಿಗೆ ಬಿಟ್ಟುಹೋಗುವುದಾದರೆ, ಅದು ಅವರನ್ನು ದರಿದ್ರರನ್ನಾಗಿ ಮಾಡಿ ಭಿಕ್ಷೆ ಬೇಡುವ ಸ್ಥಿತಿಯಲ್ಲಿ ಬಿಟ್ಟುಹೋಗುವುದಕ್ಕಿಂತ ಉತ್ತಮವಾಗಿದೆ. ಅದೇ ರೀತಿಯಲ್ಲಿ ಹದೀಸಿನಲ್ಲಿ ಬಂದಿದೆ: ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಪೈಗಂಬರರೊಡನೆ ತನ್ನ ಸಂಪತ್ತಿನ ಮೂರರಲ್ಲಿ ಎರಡು ಭಾಗ ವಿತರಣೆ ಮಾಡಲು ಅನುಮತಿ ಕೇಳಿದ್ದರು. ಆದರೆ ಪೈಗಂಬರರು ನಿರಾಕರಿಸಿದರು. ಅನಂತರ ಅವರು ಅರ್ಧ ಸಂಪತ್ತು ವಿತರಿಸಲು ಇಚ್ಛಿಸಿದರು. ಹಾಗೆ ಮಾಡುವುದರಿಂದಲೂ ಪೈಗಂಬರರು ತಡೆದರು. ಅನಂತರ ಮೂರನೇ ಭಾಗವನ್ನು ವಿತರಿಸಲು ಅನುಮತಿ ಕೇಳಿದರು. ಅದರ ಅನುಮತಿ ಪೈಗಂಬರರು ನೀಡಿದ್ದರು ಆದರೆ, ಮೂರನೇ ಭಾಗದ ವಸಿಯ್ಯತ್ ಕೂಡ ತುಂಬ ಹೆಚ್ಚು ಎಂದು ಹೇಳಿದರು. **ಅಸ್ಸುಲುಸ್ ವಸ್ಸುಲುಸ್ ಕಸೀರ್**..... ಒಟ್ಟಿನಲ್ಲಿ, ಅಧಿಕವಾಗಿ ಬರುವ ಸಂಪತ್ತನ್ನು ಪೂರ್ಣವಾಗಿ ವಿತರಣೆ ಮಾಡಲು ಇಸ್ಲಾಮ್ ಆದೇಶಿಸುತ್ತದೆ ಎಂದು ಭಾವಿಸುವುದು ಸಂಪೂರ್ಣವಾಗಿ ಇಸ್ಲಾಮ್ ವಿರುದ್ಧ ಮತ್ತು ಸಹಾಬಿವರ್ಯರ ನಡೆವಳಿಕೆ ಕ್ರಮಕ್ಕೆ ವಿರುದ್ಧವಾಗಿದೆ. ಏಕೆಂದರೆ, ಕೆಲವು ಸಹಾಬಿವರ್ಯರ ಮರಣದ ಸಮಯದಲ್ಲಿ ಲಕ್ಷಾಂತರ ರೂಪಾಯಿಗಳು ಅವರ ವಾರಸುದಾರರಿಗೆ ವಿತರಿಸಲಾಗಿತ್ತು. (ತ್ಫಸೀರೆ ಕಬೀರ್, ಸಂಪುಟ-2, ಪುಟ-494)

ಒಂದು ವರದಿಯ ಪ್ರಕಾರ ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ) ಹೇಳುತ್ತಾರೆ: ನಾನು ಮಕ್ಕದಲ್ಲಿ ರೋಗಿಯಾದಾಗ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನ ಯೋಗಕ್ಷೇಮ ವಿಚಾರಿಸಲು ಬಂದರು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನ ಎದೆಯ ಮೇಲೆ ಕೈಯಿಟ್ಟರು. ಆಗ ನಾನು ಪೈಗಂಬರರ ಕೈಯ ತಂಪು ನನ್ನ ಹೃದಯದಲ್ಲಿ ಅನುಭವಿಸಿದೆ. ಪೈಗಂಬರರು ಕೈಯಿಟ್ಟು ನನ್ನೊಡನೆ ಹೇಳಿದರು: ನಿನಗೆ ಹೃದಯ ಸಂಬಂಧ ರೋಗವಿದೆ. ಆದ್ದರಿಂದ ನೀನು ಬನೂ ಸಕೀಫ್‌ನ ಸೋದರ ಹಾರಿಸ್ ಬಿನ್ ಕಲ್‌ದರ ಬಳಿಗೆ ಹೋಗು. ಮದೀನದಲ್ಲಿರುವ ಅಜ್‌ವ ಖರ್ಜೂರವನ್ನು ಅದರ ಬೀಜ ಸಹಿತ ಅರೆದು ನನಗೆ ಮದ್ದಾಗಿ ಕೊಡಲು ವೈದ್ಯರಾಗಿರುವ ಅವರೊಡನೆ ಹೇಳು. (ಅತ್ತಬಖಾತುಲ್ ಕುಬ್ರ, ಭಾಗ-3, ಪುಟ-108, ದಾರುಲ್ ಕುತುಬ್ ಇಲ್ಮಿಯ ಬೈರೂತ್ ಲೆಬನಾನ್, 1990)

ಮತ್ತೊಂದು ವರದಿಯಲ್ಲಿ ಹೀಗೆ ಇದೆ: ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದಲ್ಲಿ ಒಬ್ಬ ವ್ಯಕ್ತಿಯನ್ನು ಹಝ್ರತ್ ಸಅದರನ್ನು(ರ) ನೋಡಿಕೊಳ್ಳಲು ಮತ್ತು ಆರೈಕೆ ಮಾಡಲು ವಿಶೇಷವಾಗಿ ನೇಮಕ ಮಾಡಿ ಅವರೊಡನೆ ಹೀಗೆ ತಾಕೀತು ಮಾಡಿದರು: ಹಝ್ರತ್ ಸಅದ್(ರ) ಮಕ್ಕದಲ್ಲಿ ಮರಣವನ್ನಪ್ಪಿದರೆ ಅವರನ್ನು ಮಕ್ಕದಲ್ಲಿ ದಫನ್ ಮಾಡದೆ ಮದೀನಕ್ಕೆ ತಂದು ಅಲ್ಲಿ ದಫನ್ ಮಾಡಬೇಕು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-108, ಸಅದ್ ಬಿನ್ ಅಬೀ ವಖ್ವಾಸ್, ದಾರುಲ್ ಕುತುಬ್ ಇಲ್ಮಿಯ ಬೈರೂತ್ ಲೆಬನಾನ್ 1990)

ಹಝ್ರತ್ ಮುಸ್ಲಿಹ್ ಮೌಊದ್(ರ) ಹಝ್ರತ್ ಸಅದರ ಘಟನೆ ಹೀಗೆ ವಿವರಿಸುತ್ತಾರೆ: "ಪೈಗಂಬರರು ಸ್ವತಃ ಬೇಟೆಯಾಡುತ್ತಿರಲಿಲ್ಲ. ಆದರೆ ಬೇರೆಯವರಿಂದ ಶಿಕಾರ್ ಮಾಡಿಸುತ್ತಿದ್ದರು ಎಂದು ಹದೀಸುಗಳಿಂದ ತಿಳಿದುಬರುತ್ತದೆ. ಒಂದು ಯುದ್ಧ ಕಾಲದಲ್ಲಿ ಪೈಗಂಬರರು ಸಅದ್ ಬಿನ್ ಅಬೀ ವಖಾಸರನ್ನು ಕರೆದು ಹೇಳಿದರು: ನೋಡು ಒಂದು ಜಿಂಕೆ ಓಡಿ ಹೋಗುತ್ತಿದೆ. ಅದಕ್ಕೆ ಬಾಣ ಹೂಡು. ಅವರು ಬಾಣ ಹೂಡುವಾಗ ಪೈಗಂಬರರು ಪ್ರೀತಿಯಿಂದ ತನ್ನ ಗಲ್ಲವನ್ನು ಸಅದರ ಹೆಗಲ ಮೇಲೆ ಇಟ್ಟು ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ಇವನ ಗುರಿ ತಪ್ಪದಿರಲಿ. (ತಫ್‌ಸೀರೆ ಕಬೀರ್, ಸಂಪುಟ-5, ಪುಟ-124)

ಹಝ್ರತ್ ಸಅದರಿಗೆ ಅಲ್ಲಾಹನು ಇರಾಕನ್ನು ಜಯಿಸುವ ಸೌಭಾಗ್ಯವನ್ನೂ ನೀಡಿದನು. ಖಂದಕ್ ಯುದ್ಧದ ವೇಳೆಯಲ್ಲಿ ಒಂದು ಬಾರಿ ಸಹಾಬರು ಪೈಗಂಬರರ ಸನ್ನಿಧಿಗೆ ಬಂದು ಹೀಗೆ ಹೇಳಿದರು: ಹೊಂಡ ಮಾಡುವಾಗ ಒಂದು ದೊಡ್ಡ ಬಂಡೆಕಲ್ಲು ಮುಂದೆ ಬಂದಿದೆ. ಅದನ್ನು ತುಂಡರಿಸಲು ಆಗುತ್ತಿಲ್ಲ. ಪೈಗಂಬರರು ಅಲ್ಲಿಗೆ ಹೋಗಿ ಪಿಕ್ಕಾಸಿನಿಂದ, (ಗುದ್ದಲಿಯಿಂದ) ಮೂರು ಏಟು ಕೊಟ್ಟರು. ಪ್ರತಿಬಾರಿ ಬಂಡೆಕಲ್ಲು ಸ್ವಲ್ಪ

ತುಂಡಾಯಿತು. ಪೈಗಂಬರರು ಉಚ್ಚಸ್ವರದಲ್ಲಿ ಅಲ್ಲಾಹು ಅಕ್ಬರ್ ಎಂದು ಹೇಳಿದರು. ಅದನ್ನು ಕೇಳಿ ಸಹಾಬಿವರ್ಯರು ಸಹ ಅಲ್ಲಾಹು ಅಕ್ಬರ್ ಎಂದು ಉಚ್ಚಸ್ವರದಲ್ಲಿ ಹೇಳಿದರು. ಈ ಸಂದರ್ಭದಲ್ಲಿ ಒಂದು ಏಟುಕೊಡುವಾಗ ಪೈಗಂಬರರು ಹೇಳಿದರು: ಪಟ್ಟಣಗಳ ಬಿಳಿ ಮಹಲ್ಲುಗಳು ಬೀಳುತ್ತಿರುವುದಾಗಿ ನನಗೆ ತೋರಿಸಲಾಗಿದೆ. ಪೈಗಂಬರರು ನೋಡಿದ್ದು ಹಝ್ರತ್ ಸಅದರ ಕೈಗಳಿಂದ ಈಡೇರಿತು. (ರೌಶನ್ ಸಿತಾರೆ, ಸಂಪುಟ–52, ಪುಟ–79)

ಅರಬ್ ರಾಜ್ಯದ ಆಸುಪಾಸಿನಲ್ಲಿ ಎರಡು ಮಹಾ ಶಕ್ತಿಗಳು ಇತ್ತು. ಒಂದು ಕಿಸ್ರಾ ಮತ್ತೊಂದು ಕೈಸರ್. ಇರಾಕಿನ ದೊಡ್ಡ ಭಾಗ ಕಿಸ್ರಾನ ಆಳ್ವಿಕೆಯಲ್ಲಿತ್ತು ಮತ್ತು ಮದ್‌ಯನನಲ್ಲಿ ಅವನ ಮಹಲ್ಲುಗಳಿತ್ತು. ಮದಾಇನ್, ಖಾದಸಿಯಾ, ನಹಾವಂದ್ ಮತ್ತು ಜಲೂಲದ ಪ್ರಸಿದ್ಧ ಯುದ್ಧಗಳು ಹಝ್ರತ್ ಸಅದ್ ಬಿನ್ ಅಬೀ ವಖಾಸರ ನೇತೃತ್ವದಲ್ಲಿ ಮಾಡಲಾಗಿತ್ತು.

ಇರಾಕಿನಿಂದ ಸ್ವಲ್ಪ ದೂರದಲ್ಲಿ ದಕ್ಷಿಣದ ಭಾಗದಲ್ಲಿರುವ ದಜ್‌ಲದ ತೀರದ ಸಮೀಪ ಮದಾಇನ್ ಇದೆ. ಇಲ್ಲಿ ಒಂದರ ನಂತರ ಇನ್ನೊಂದು ಪಟ್ಟಣಗಳು ಆಗುತ್ತಾ ಹೋದಾಗ ಅರಬರು ಅದನ್ನು ಮದಾಇನ್ ಎಂದು ಹೇಳತೊಡಗಿದರು. ಎಂದರೆ ಪಟ್ಟಣಗಳ ಕೂಟ.

ಖಾದಿಸಿಯ ಸಹ ಇರಾಕಿನ ಪಟ್ಟಣವಾಗಿತ್ತು. ಅಲ್ಲಿ ಮುಸ್ಲಿಮರ ಮತ್ತು ಫಾರಸಿಯ ನಡುವೆ ಪ್ರಸಿದ್ಧವಾದ ಯುದ್ಧ ನಡೆಯಿತು. ಅದನ್ನು ಖಾದಸಿಯ ಯುದ್ಧವೆಂದು ಹೇಳಲಾಗುತ್ತದೆ. ಈಗಿನ ಖಾದಸಿಯ ಪಟ್ಟಣ ಕೂಫದಿಂದ ಹದಿನೈದು ಮೈಲುಗಳ ದೂರದಲ್ಲಿ ಇದೆ.

**ನಹಾವಂದ್** ಈಗಿನ ಇರಾನಿನಲ್ಲಿರುವ ಒಂದು ಪಟ್ಟಣವಾಗಿದೆ. ಇದು ಇರಾನಿನ ರಾಜ್ಯವಾದ ಹಮ್ದಾನಿನ ರಾಜಧಾನಿಯಿಂದ ಎಪ್ಪತ್ತು ಕಿಲೋಮೀಟರ್ ದಕ್ಷಿಣದಲ್ಲಿ ಇದೆ.

ಜಲೂಲ ಈಗಿನ ಇರಾಕಿನಲ್ಲಿರುವ ಒಂದು ಪಟ್ಟಣವಾಗಿದೆ. ಇದು **ದಜ್‌ಲತುಲ್ ಐಮನಿ**ನ ತೀರದಲ್ಲಿ ಇದೆ. ಇಲ್ಲಿ ಮುಸ್ಲಿಮರ ಮತ್ತು ಫಾರಸಿಯರ ನಡುವೆ ಯುದ್ಧ ನಡೆಯಿತು. ಇದರ ಹೆಸರು ಜಲೂಲ ಎಂದು ಇರಿಸಲು ಕಾರಣ, ಈ ಪಟ್ಟಣ ಇರಾನಿಯರ ಶವಗಳಿಂದ ತುಂಬಿತ್ತು. ಹಝ್ರತ್ ಅಬೂಬಕ್ಕರರ[ರ] ಕಾಲದಲ್ಲಿ ಹಝ್ರತ್ ಮಸನ್ನ ಬಿನ್ ಹಾರಿಸ ಇರಾಕಿನ ಮೇಲೆ ದಾಳಿ ನಡೆಸಿದರು. ಇರಾನಿಯರು ಆಗಾಗ್ಗೆ ಗಡಿ ಪ್ರದೇಶದಲ್ಲಿ ಕಿರಿಕಿರಿ ಮಾಡುತ್ತಿದ್ದ ಕಾರಣ ದಾಳಿ ಮಾಡಲು ಅನುಮತಿ ಕೇಳಿದರು. ಹಝ್ರತ್ ಅಬೂಬಕ್ಕರ್ ಅನುಮತಿ ಕೊಟ್ಟರು. ಹಝ್ರತ್ ಖಾಲಿದ್ ಬಿನ್ ವಲೀದ್‌ರನ್ನು ಒಂದು ದೊಡ್ಡ ಸೈನ್ಯದೊಂದಿಗೆ ಅವರ ಸಹಾಯಕ್ಕಾಗಿ ಕಳುಹಿಸಿದರು. ಹಝ್ರತ್ ಖಾಲಿದ್ ಬಿನ್ ವಲೀದ್ ಇರಾಕಿನಲ್ಲಿ ಹಝ್ರತ್ ಮಸ್‌ನರನ್ನು ತನ್ನ ಉತ್ತರಾಧಿಕಾರಿಯಾಗಿ ನೇಮಿಸಿದರು. ಆದರೆ ಹಝ್ರತ್ ಖಾಲಿದ್ ಇರಾಕಿಗೆ ಹೋದ ಕೂಡಲೆ ಈ ಕಾರ್ಯಚರಣೆ ತಣ್ಣಗಾಯಿತು. ಹಝ್ರತ್ ಉಮರ್ ಖಲೀಫರಾದಾಗ ಅವರು ಪುನಃ ಇರಾಕಿಗೆ ಸಂಬಂಧಿಸಿದ ಕಾರ್ಯಚರಣೆ ಕಡೆಗೆ ಗಮನಹರಿಸಿದರು. ಹಝ್ರತ್ ಮಸ್‌ನ; ದವಿಯ ಮತ್ತು ಇತರ ಯುದ್ಧಗಳಲ್ಲಿ ಶತ್ರುಗಳನ್ನು ಒಂದರ ನಂತರ ಇನ್ನೊಂದು ಎಂಬಂತೆ ಸೋಲಿಸಿ ಇರಾಕಿನ ಬಹುಪಾಲು ಭಾಗವನ್ನು ವಶಪಡಿಸಿದರು. ಆ ಕಾಲದಲ್ಲಿ ಇರಾಕಿನ ಪ್ರದೇಶ ಕಿಸ್ರನ ಆಳ್ವಿಕೆಯಲ್ಲಿತ್ತು. ಇರಾನಿಯರಿಗೆ ಮುಸ್ಲಿಮರ ಯುದ್ಧ ಮಾಡುವ ಶಕ್ತಿಯ ಅರಿವಾದಾಗ, ಮುಸ್ಲಿಮರ ನಿರಂತರವಾದ ವಿಜಯದಿಂದ ಅವರ ಕಣ್ತೆರೆಯಲ್ಪಟ್ಟಾಗ ಅವರು ಅಲ್ಲಿಯ ರಾಣಿಯಾದ ಕೂರಾನ್ ದಖ್ತಿನ ಬದಲಿಗೆ ಕಿಸ್‌ರ ಕುಟುಂಬದ ಯಥಾರ್ಥ ವಾರಸುದಾರನಾದ ಯಝ್‌ದಿಗರ್‌ದನ ಪಟ್ಟಾಭಿಷೇಕ ಮಾಡಿತ್ತು. ಅವನು ಅಧಿಕಾರಕ್ಕೆ ಬಂದ ಕೂಡಲೆ ಇರಾನ್ ಆಡಳಿತದ ಎಲ್ಲ ಶಕ್ತಿಗಳನ್ನು ಒಟ್ಟುಗೂಡಿಸಿದನು. ದೇಶದೆಲ್ಲಡೆ ಮುಸ್ಲಿಮರ ವಿರುದ್ಧ ಪ್ರತಿಕಾರ ಮತ್ತು ಆವೇಶದ ಬೆಂಕಿಯನ್ನು ಹಚ್ಚಿದನು. ಆ ಅವಸ್ಥೆಯಲ್ಲಿ ಹಝ್ರತ್ ಮಸ್‌ನರಿಗೆ ಯಾವುದೇ ನಿರ್ವಾಹವಿಲ್ಲದೆ, ವಿವಶರಾಗಿ ಗಡಿಪ್ರದೇಶದಿಂದ ಸರಿಯಬೇಕಾಗಿ ಬಂತು. (ದೂರವಿರಬೇಕಾಗಿ ಬಂತು.) ಹಝ್ರತ್ ಉಮರರಿಗೆ ಈ ಘಟನೆಗಳ ಅರಿವಾದಾಗ ಅವರು ಅರಬ್ ರಾಜ್ಯದ ಎಲ್ಲೆಡೆ ಆವೇಶಭರಿತ ಭಾಷಣಗಾರರನ್ನು ಎಲ್ಲ ಕಡೆ ಕಳುಹಿಸಿ, ಕಿಸ್ರಾನ ವಿರುದ್ಧ ಮುಸ್ಲಿಮರನ್ನು ನಿಲ್ಲಲ್ಲು ನಿರ್ದೇಶಿಸಿದರು.ಇದರ ಪರಿಣಾಮವಾಗಿ ಅರಬಿನಲ್ಲಿ ಒಂದು ಆವೇಶ ಸೃಷ್ಟಿಯಾಯಿತು. ಇಸ್ಲಾಮಿಗಾಗಿ ಜೀವತ್ಯಾಗ ಮಾಡಲು ಸಿದ್ಧರಾಗಿ ಎಲ್ಲ ಕಡೆಯಿಂದಲೂ ಜನರು ದಾರುಲ್ ಖಿಲಾಫಗೆ (ಖಲೀಫ ಇರುವ ರಾಜಧಾನಿಗೆ) ಬಂದರು. ಈ ಕಾರ್ಯಚರಣೆಯ ನೇತೃತ್ವ ಯಾರಿಗೆ ನೀಡಬೇಕೆಂದು ಹಝ್ರತ್ ಉಮರ್ ಸಲಹೆ ಕೇಳಿದರು. ಜನರ ಅಭಿಪ್ರಾಯ ಪ್ರಕಾರ ಹಝ್ರತ್ ಉಮರ್ ಸ್ವತಃ ಈ ಕಾರ್ಯಚರಣೆಯ ನಾಯಕತ್ವ ವಹಿಸಲು ಸಿದ್ಧರಾದರು. ಆದರೆ ಹಝ್ರತ್ ಅಲಿ ಮತ್ತು ಇತರ ಹಿರಿಯ ಸಹಾಬಿವರ್ಯರು ಇದನ್ನು ಸಮ್ಮತಿಸಲಿಲ್ಲ. ಈ ಉದ್ದೇಶಕ್ಕಾಗಿ ಹಝ್ರತ್ ಸಈದ್ ಬಿನ್ ಝೈದ್‌ನ ಹೆಸರು ಸಹ ಹೇಳಲಾಯಿತು. ಇದರ ನಡುವೆ ಹಝ್ರತ್ ಅಬ್ದುಲ್ಲಾಹ್ ಬಿನ್ ಔಫ್ ಎದ್ದು ಹೀಗೆ ಹೇಳಿದರು: ಹೇ ಅಮೀರುಲ್ ಮುಅ್‌ಮಿನೀನ್, ಈ ಕಾರ್ಯಚರಣೆಗಾಗಿ ಸಮಂಜಸವಾದ ವ್ಯಕ್ತಿ ನನಗೆ ಗೊತ್ತು. ಯಾರೆಂದು ಹಝ್ರತ್ ಉಮರ್ ಕೇಳಿದರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ಹೇಳಿದರು: ಹಝ್ರತ್ ಸಅದ್ ಬಿನ್ ಅಬೀ ವಖಾಸ್. ಆಗ ಎಲ್ಲರು ಹಝ್ರತ್ ಸಅದರ ಬಗ್ಗೆ ಒಮ್ಮತ ಅಭಿಪ್ರಾಯ ಸೂಚಿಸಿದರು. ಹಝ್ರತ್ ಉಮರ್ ಸಅದರ ಬಗ್ಗೆ ಹೇಳಿದರು: ಇನ್ನಹು ಜಲ್ಲ ಶುಜಾಅ ರಾಇನ್. ಎಂದರೆ, ಅವರು ಒಬ್ಬ ಶೂರ, ಧೈರ್ಯವಂತ ಶಕ್ತಿಶಾಲಿ ಬಲ್ಲುಗಾರರಾಗಿರುವರು. ಕೂಫ ಮತ್ತು ವಾಸಿತಿನ ಮಧ್ಯೆ ಬರುವ ಝೀಕಾರ್ ಎಂಬ ಸ್ಥಳದಲ್ಲಿ ಹಝ್ರತ್ ಮಸ್‌ನ ಎಂಟು ಸಾವಿರ ತ್ಯಾಗಶೀಲರಾದ ಶೂರರೊಂದಿಗೆ ಹಝ್ರತ್ ಸಅದರನ್ನು ಕಾಯುತ್ತಿದ್ದರು. ಆ ವೇಳೆಯಲ್ಲೇ ಅವರಿ ಮರಣವನ್ನಪ್ಪಿದರು. ಹೀಗೆ ಅವರ ಸೋದರ ಹಝ್ರತ್ ಮಅ್‌ನ ಉತ್ತರಾಧಿಕಾರಿಯಾಗಿ ನಿಶ್ಚಯಿಸಲ್ಪಟ್ಟರು. ಹಝ್ರತ್ ಮಅ್‌ನ ಹಿಂದಿನ ನಿರ್ದೇಶನ ಪ್ರಕಾರ ಹಝ್ರತ್ ಸಅದರನ್ನು ಭೇಟಿಯಾಗಿ ಹಝ್ರತ್ ಮಸ್‌ನರ ಸಂದೇಶವನ್ನು ನೀಡಿದರು. ಹಝ್ರತ್ ಸಅದ್ ತನ್ನ ಸೈನ್ಯವನ್ನು ಅವಲೋಕಿಸಿದಾಗ ಅದು ಹೆಚ್ಚುಕಮ್ಮಿ ಮೂವತ್ತು ಸಾವಿರ ಸೈನಿಕರನ್ನು ಒಳಗೊಂಡಿತು. ಅವರು ಸೈನ್ಯವನ್ನು ಸರಿಪಡಿಸಿ ಸೈನ್ಯದ ಬಲಗಡೆ ಮತ್ತು ಎಡೆಗಡೆಯನ್ನು ಬೇರ್ಪಡಿಸಿ ಅದಕ್ಕೆ ಬೇರೆ ಬೇರೆ ಮುಖಂಡರನ್ನು ನಿಶ್ಚಯಿಸಿದರು. ಅನಂತರ ಮುಂದಕ್ಕೆ ಧಾವಿಸಿ ಖಾದಿಸಿಯವನ್ನು ಸುತ್ತುವರೆದರು. ಖಾದಿಸಿಯಾದ ಯುದ್ಧ 16 ಹಿಜರಿಯಲ್ಲಿ ನಡೆಯಿತು. ಶತ್ರುಗಳ ಸಂಖ್ಯೆ 2 ಲಕ್ಷ ಎಂಬತ್ತು ಸಾವಿರದಷ್ಟಿತ್ತು. ಶತ್ರುಗಳ ಸೈನ್ಯದಲ್ಲಿ ಮೂವತ್ತು ಆನೆಗಳಿದ್ದುವು. ಇರಾನಿನ ಸೈನ್ಯದ ಮುಖಂಡ ರುಸ್ತಮ್ ಆಗಿದ್ದನು. ಹಝ್ರತ್ ಸಅದ್ ಸತ್ಯನಿಷೇಧಿಗಳನ್ನು ಇಸ್ಲಾಮಿಗೆ ಆಮಂತ್ರಿಸಿದರು. ಅದಕ್ಕಾಗಿ ಹಝ್ರತ್ ಮುಗೈರ ಬಿನ್ ಶೂಬರನ್ನು ಕಳುಹಿಸಿದರು. ರುಸ್ತಮ್ ಹೇಳಿದನು: ನೀವು ದರಿದ್ರರು ಮತ್ತು ಬಡತನವನ್ನು ದೂರಮಾಡಲು ಹೀಗೆಲ್ಲ ಮಾಡುತ್ತಿದ್ದೀರಿ. ನೀವು ತೃಪ್ತಿ ಪಡೆಯುಷ್ಟು ನಾವು ನಿಮಗೆ ಕೊಡುವೆವು. ಹಝ್ರತ್ ಮುಗೈರ ಉತ್ತರಿಸಿದರು: ನಾವು ಪೈಗಂಬರರ ಆಹ್ವಾನವನ್ನು ಸ್ವೀಕರಿಸಿದೆವು. ನಾವು ನಿಮ್ಮನ್ನು ಏಕದೇವನ ಕಡೆಗೆ ಮತ್ತು ಹಝ್ರತ್ ಪೈಗಂಬರರನ್ನು ನಂಬಲು ಕರೆಯುತ್ತಿದ್ದೇವೆ. ನೀವು ಇದನ್ನು ಸ್ವೀಕರಿಸುವುದಾದರೆ, ಅದು ನಿಮಗೆ ಉತ್ತಮ, ಇಲ್ಲದಿದ್ದರೆ ಯುದ್ಧ ಮತ್ತು ಖಡ್ಗ ನಮ್ಮ ಮತ್ತು ನಿಮ್ಮ ಮಧ್ಯೆ ತೀರ್ಪು ನೀಡುವುದು. ಈ ಉತ್ತರದಿಂದ ರುಸ್ತಮ್ ಕೋಪಗೊಂಡನು. ಅವನು ಯುದ್ಧ ಮಾಡಲು ಮೊದಲೇ ಇಚ್ಛಿಸಿದ್ದನು. ಮುಗೈರ ಹೇಳಿದ್ದರು: ಸರಿ, ನಾವು ಈಗಲೂ ಯುದ್ಧ ಮಾಡಲು ಇಚ್ಛಿಸುವುದಿಲ್ಲ. ನಾವು ನಿಮಗೆ ಇಸ್ಲಾಮಿನ ಸಂದೇಶ ನೀಡುತ್ತಿದ್ದೇವೆ. ಆದರೆ ನೀವು ಯುದ್ಧ ಮಾಡಲು ಇಚ್ಛಿಸುವುದಾದರೆ, ಸರಿ ಖಡ್ಗಗಳೇ ತೀರ್ಮಾನಿಸಲಿ. ಹೇಗಿದ್ದರೂ ಅವರ ಮುಖ ಕೋಪದಿಂದ ಕೆಂಡವಾಯಿತು. ಮುಶ್ರಿಕನಾದ ಅವನು ಹೇಳಿದನು: ಸೂರ್ಯ ಮತ್ತು ಚಂದ್ರರ ಆಣೆ, ಬೆಳಗಾಗುವ ಮುಂಚೆ ನಾವು ಯುದ್ಧ ಆರಂಭಿಸುವೆವು ಮತ್ತು ನಿಮ್ಮೆಲ್ಲರನ್ನು ಖಡ್ಗದಡಿಗೆ ಕೊಂಡುಬರುವೆವು. ಹಝ್ರತ್ ಮುಗೈರ ಹೇಳಿದರು: **ಲಾ ಹೌಲ ವಲಾ ಕುವ್ವತ ಇಲ್ಲ ಬಿಲ್ಲಾಹ್**. ಎಂದರೆ ಎಲ್ಲ ಶಕ್ತಿ ಮತ್ತು ಸಾಮರ್ಥ್ಯಗಳ ಉದ್ಭವಸ್ಥಾನ ಅಲ್ಲಾಹನೇ ಆಗಿದ್ದಾನೆ. ಹೀಗೆ ಹೇಳಿ ಅವರ ಕುದುರೆಯ ಮೇಲೆ ಸವಾರರಾದರು. ಹಝ್ರತ್ ಸಅದರಿಗೆ ಹಝ್ರತ್ ಉಮರರ ಸಂದೇಶ ಸಿಕ್ಕಿತ್ತು. ಅದೇನೆಂದರೆ, ಮೊದಲು ಅವರನ್ನು ಸತ್ಯದ ಕಡೆಗೆ ಕರೆಯಬೇಕು. ಹೀಗೆ ಹಝ್ರತ್ ಸಅದ್ ಪ್ರಸಿದ್ಧ ಕವಿ ಮತ್ತು ನಿಪುಣ ಕುದುರೆ ಸವಾರನಾದ ಹಝ್ರತ್ ಉಮರ್ ಬಿನ್ ಮಾದಿ ಖಿರ್‌ಬ್ ಮತ್ತು ಹಝ್ರತ್ ಅಶ್‌ಅಶ್ ಬಿನ್ ಖೈಸ್ ಖಂದಿಯನ್ನು ಒಂದು ಸಂಘದೊಂದಿಗೆ ಕಳುಹಿಸಿದರು. ದಾರಿಯಲ್ಲಿ ರುಸ್ತಮ್ ಸಿಕ್ಕಿದ. ಎಲ್ಲಿಗೆ ಹೋಗುತ್ತಿರುವಿರಿ ಎಂದು ರುಸ್ತಮ್ ಕೇಳಿದ. ನಿಮ್ಮ ಮಾಲಿಕನನ್ನು ಭೇಟಿಯಾಗಲು ಹೋಗುತ್ತಿದ್ದೇವೆ ಎಂದವರು ಹೇಳಿದರು. ಹೀಗೆ ರುಸ್ತಮ್ ಮತ್ತು ಅವರ ನಡುವೆ ದೀರ್ಘ ಸಂಭಾಷಣೆ ನಡೆಯಿತು. ನಾವು ನಿಮ್ಮ ಪ್ರದೇಶವನ್ನು ವಶಪಡಿಸುವೆವು ಎಂದು ಪೈಗಂಬರರು ನಮಗೆ ವಾಗ್ದಾನ ಮಾಡಿದ್ದರು ಎಂದು ಸಂಘದ ಸದಸ್ಯರು ಹೇಳಿದರು. ಇದನ್ನು ಕೇಳಿ ರುಸ್ತಮ್ ಮಣ್ಣಿನ ಬುಟ್ಟಿ ತರಿಸಿ ಹೀಗೆ ಹೇಳಿದ: ಇದೋ ತೆಗೆದುಕೋ, ಇದಾಗಿದೆ ನಮ್ಮ ಪ್ರದೇಶ, ಇದನ್ನು ತಲೆಯಲ್ಲಿ ಇರಿಸು. ಹಝ್ರತ್ ಉಮರ್ ಬಿನ್ ಮಾದಿ ಬೇಗನೆ ಎದ್ದು ಮಣ್ಣಿನ ಬುಟ್ಟಿಯನ್ನು ತನ್ನ ಚೀಲದಲ್ಲಿ ಇಟ್ಟು, ಇದು ನಾವು ವಿಜಯಿಸುವೆವು ಎಂಬುವುದಕ್ಕೆ ಶಕುನವಾಗಿದೆ, ನಿಮ್ಮ ಭೂಮಿ ನಮ್ಮ ವಶಕ್ಕೆ ಬರುವುದು ಎಂದು ಹೇಳುತ್ತಾ ಅಲ್ಲಿಂದ ಹೊರಟುಹೋದರು. ಅನಂತರ ಅವರು ಇರಾನಿನ ಬಾದಶಾಹ ದರ್ಬಾರಿಗೆ ತಲುಪಿ ರಾಜನನ್ನು ಇಸ್ಲಾಮ್ ಕಡೆಗೆ ಆಮಂತ್ರಿಸಿದನು. ಇದರಿಂದ ಅವನು ತುಂಬ ಕೋಪಗೊಂಡು ಹೀಗೆ ಹೇಳಿದನು: ನನ್ನ ದರ್ಬಾರಿಂದ ಹೊರಟುಹೋಗಿರಿ. ನೀವು ದೂತರಲ್ಲವಾಗಿದ್ದರೆ, ನಾನು ನಿಮ್ಮನ್ನು ಕೊಲ್ಲುತ್ತಿದ್ದೆವು. ಅನಂತರ ಅವನು ರುಸ್ತಮ್‌ನೊಡನೆ ಹೇಳಿದನು: ಇವರಿಗೆ ಮರೆಯಲಾಗದ ಪಾಠವನ್ನು ಕಲಿಸು. ಗುರುವಾರದಂದು ಮಧ್ಯಾಹ್ನದ ನಂತರ ಯುದ್ಧದ ಡಂಗುರ ಬಾರಿಸಲಾಯಿತು. ಹಝ್ರತ್ ಸಅದ್ ಮೂರು

ಬಾರಿ ಅಲ್ಲಾಹು ಅಕ್ಬರ್ ಎಂದು ಘೋಷಿಸಿದರು. ನಾಲ್ಕನೇ ಬಾರಿಯ ಘೋಷಣೆಯೊಂದಿಗೆ ಯುದ್ಧ ಶುರುವಾಯಿತು. ಹಝ್ರತ್ ಸಅದ್ ರೋಗಿಯಾಗಿದ್ದರು. ಅಝೀಬ್ ಮಹಲಿನ ಮೇಲ್ಮಹಡಿಯಲ್ಲಿ ಕುಳಿತುಕೊಂಡು ಯುದ್ಧದ ಬಗ್ಗೆ ನಿರ್ದೇಶನ ನೀಡುತ್ತಿದ್ದರು. (ರೌಶನ್ ಸಿತಾರೆ ಗುಲಾಮ್ ಬಾರಿ ಸೈಫ್, ಸಂಪುಟ–2, ಪುಟ–79–82) (ಅಟ್ಲಾಸ್ ಫುತುಹಾತ್ ಇಸ್ಲಾಮಿಯ, ಪುಟ–81,100,118,126) (ಮುಜಮುಲ್ ಬಲದಾನ್, ಸಂಪುಟ–4, ಪುಟ–333, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಈ ಘಟನೆಯನ್ನು ಹಝ್ರತ್ ಮುಸ್ಲಿಹ್ ಮೌಊದ್[ರ] ಸಹ ಹೀಗೆ ವಿವರಿಸಿರುವರು: ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಕಾಲದಲ್ಲಿ ಖುಸ್‌ರೋ ಪರ್ವೇಝಿನ ಮೊಮ್ಮಗನಾದ ಯಝ್ದಿಗರ್‌ದಿನ ಪಟ್ಟಾಭಿಷೇಕದ ನಂತರ ಇರಾಕಿನಲ್ಲಿ ಮುಸ್ಲಿಮರ ವಿರುದ್ಧ ವ್ಯಾಪಕವಾಗಿ ಯುದ್ಧದ ತಯಾರಿಗಳು ಶುರುವಾಯಿತು. ಹಝ್ರತ್ ಉಮರ್[ರ] ಅವರನ್ನು ಎದುರಿಸಲು ಹಝ್ರತ್ ಸಅದ್ ಬಿನ್ ಅಬೀ ವಖಾಸರ ನೇತೃತ್ವದಲ್ಲಿ ಒಂದು ಸೈನ್ಯವನ್ನು ಕಳುಹಿಸಿದರು. ಹಝ್ರತ್ ಸಅದ್ ಯುದ್ಧಕ್ಕಾಗಿ ಖಾದಿಸಿಯಾದ ಮೈದಾನವನ್ನು ಆಯ್ಕೆ ಮಾಡಿ ಹಝ್ರತ್ ಉಮರರಿಗೆ ಈ ಪ್ರದೇಶದ ನಕ್ಷೆ ಕಳುಹಿದರು. ಹಝ್ರತ್ ಉಮರ್ ಈ ಸ್ಥಳವನ್ನು ಮೆಚ್ಚಿದರು. ಆದರೆ ಅದರೊಂದಿಗೆ ಹೀಗೆ ಆಜ್ಞಾಪಿಸಿದರು: ಇರಾನಿನ ಬಾದಶಾಹನ ವಿರುದ್ಧ ಯುದ್ಧ ಮಾಡುವುದಕ್ಕೆ ಮುಂಚಿತವಾಗಿ ಒಂದು ಪ್ರತಿನಿಧಿ ಸಂಘವನ್ನು ಅವರ ಬಳಿಗೆ ಕಳುಹಿಸಿ ಇಸ್ಲಾಮ್ ಧರ್ಮದ ಕಡೆಗೆ ಅವರನ್ನು ಆಮಂತ್ರಿಸುವುದು ನಿಮ್ಮ ಕರ್ತವ್ಯವಾಗಿದೆ. ಹಾಗೆ ಅವರಿಗೆ ಈ ಆದೇಶ ಲಭಿಸಿದಾಗ ಒಂದು ಪ್ರತಿನಿಧಿ ಸಂಘವನ್ನು ಇರಾನಿನ ಬಾದಶಾಹನನ್ನು ಭೇಟಿಮಾಡಲು ಕಳುಹಿಸಿದರು. ಈ ಸಂಘ ಇರಾನಿನ ಬಾದಶಾಹನ ದರ್ಬಾರಿಗೆ ತಲುಪಿದಾಗ, ಇರಾನಿನ ಬಾದಶಾಹ ತನಗೆ ತರ್ಜುಮೆ ಮಾಡಿ ಕೊಡುವವನೊಡನೆ, ಆ ಸಂಘ ಏಕೆ ಬಂದಿರುವರು ಎಂದು ಕೇಳಲು ಆದೇಶಿದನು. ಅವನು ಸವಾಲು ಕೇಳಿದಾಗ ಸಂಘದ ಸರದಾರರಾದ ಹಝ್ರತ್ ನುಮಾನ್ ಬಿನ್ ಮರ್ಕ್‌ರನರು ನಿಂತುಕೊಂಡು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆವಿರ್ಭಾವದ ಬಗ್ಗೆ ಪ್ರಸ್ತಾಪಿಸುತ್ತಾ ಹೀಗೆ ಹೇಳಿದರು: ಇಸ್ಲಾಮನ್ನು ಹರಡಲು ಮತ್ತು ಸತ್ಯಧರ್ಮದಲ್ಲಿ ಸೇರಲಿಕ್ಕಾಗಿ ಲೋಕದ ಎಲ್ಲ ಜನರಿಗೆ ಆಮಂತ್ರಣ ನೀಡಲು ನಮಗೆ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆದೇಶಿಸಿದ್ದಾರೆ. ಈ ಆಜ್ಞೆಯ ಪ್ರಕಾರ ನಾವು ನಿಮ್ಮ ಸನ್ನಿಧಿಯಲ್ಲಿ ಹಾಜರಾಗಿ ನಿಮ್ಮನ್ನು ಇಸ್ಲಾಮ್ ಧರ್ಮಕ್ಕೆ ಆಮಂತ್ರಿಸುತ್ತಿದ್ದೇವೆ. ಹೀಗೆ ಹೇಳಲ್ಪಟ್ಟಾಗ ಯಝ್ದಿಗರ್‌ದ್ ತುಂಬ ಕುಪಿತನಾಗಿ ಹೀಗೆ ಹೇಳಿದನು: ನೀವು ಒಂದು ವನ್ಯ, ಅನಾಗರಿಕ ಮತ್ತು ಶವ ತಿನ್ನುವ ಸಮುದಾಯವಾಗಿರುವಿರಿ. ಹಸಿವು ಮತ್ತು ಬಡತನ ನಿಮ್ಮನ್ನು ಈ ಆಕ್ರಮಣ ನಡೆಸಲು ಒತ್ತಾಯಪಡಿಸುವುದಾದರೆ, ಸಂತೃಪ್ತಿಯಿಂದ ಜೀವನ ಸಾಗಿಸಲು ಸಾಕಾಗುವಷ್ಟು ತಿನ್ನುವ ಮತ್ತು ಕುಡಿಯುವ ಸಾಮಾನುಗಳನ್ನು ನಿಮಗೆ ನೀಡಲು ನಾನು ತಯಾರಿದ್ದೇನೆ. ಸತ್ಯದಲ್ಲಿ ಇವರಿಂದಲೇ ಯುದ್ಧದ ವಾತಾವರಣ ಶುರುವಾಗಿತ್ತು, ಆದರೂ ಮುಸ್ಲಿಮರ ಮೇಲೆ ಆರೋಪ ಹೊರಿಸುತ್ತಾರೆ. ಹೇಗಿದ್ದರೂ ಅವನು ತನ್ನ ಮಾತನ್ನು ಮುಂದುವರಿಸುತ್ತಾ ಹೇಳಿದನು: ಅದೇ ರೀತಿಯಲ್ಲಿ ನಿಮಗೆ ಧರಿಸಲು ಬಟ್ಟೆಗಳನ್ನು ಸಹ ಕೊಡುತ್ತೇನೆ. ನೀವು ಈ ಸಾಮಾನುಗಳನ್ನು ತೆಗೆದುಕೊಂಡು ನಿಮ್ಮ ದೇಶಕ್ಕೆ ವಾಪಸ್ಸು ಹೋಗಿರಿ. ನೀವು ಗಡಿಯಲ್ಲಿ ಇದ್ದುಕೊಂಡು ಗಡಿಪ್ರದೇಶವನ್ನು ಸಂರಕ್ಷಿಸುವುದನ್ನು ಬಿಟ್ಟುಬಿಡಿರಿ. ನಾನು ಇಷ್ಟಪಟ್ಟಂತೆ ಆ ಪ್ರದೇಶವನ್ನು ವಶಪಡಿಸಲು ನನ್ನನ್ನು ಬಿಡಿರಿ. ನೀವು ನಮ್ಮೊಡನೆ ಯುದ್ಧ ಮಾಡಿ ಏಕೆ ನಿಮ್ಮ ಜೀವವನ್ನು ನಷ್ಟಪಡಿಸುತ್ತೀರಿ. ಅವನು ತನ್ನ ಮಾತುಗಳನ್ನು ಮುಗಿಸಿದಾಗ ಇಸ್ಲಾಮಿನ ಸಂಘದ ಕಡೆಯಿಂದ ಹಝ್ರತ್ ಮುಗೈರ ಬಿನ್ ಝುರಾರ ನಿಂತು ಹೀಗೆ ಹೇಳಿದನು: ನೀವು ನಮ್ಮ ಬಗ್ಗೆ ಹೇಳಿದೆಲ್ಲ ಸಂಪೂರ್ಣವಾಗಿ ಸರಿಯೇ ಆಗಿದೆ. ನಾವು ಸತ್ಯವಾಗಿಯೂ ಕಾಡುಜಾತಿಯ ಮತ್ತು ಶವ ತಿನ್ನುವ ಸಮುದಾಯವಾಗಿತ್ತು. ಹಾವು, ಚೇಳು, ಮಿಡತೆ ಮತ್ತು ಹಲ್ಲಿಗಳನ್ನು ಕೂಡ ತಿನ್ನುತ್ತಿದ್ದುವು. ಆದರೆ ಅಲ್ಲಾಹನು ನಮ್ಮ ಮೇಲೆ ಕೃಪೆದೋರಿದನು. ಅವನು ತನ್ನ ಸಂದೇಶವಾಹಕನನ್ನು ನಮ್ಮ ಸನ್ಮಾರ್ಗಕ್ಕಾಗಿ ಕಳುಹಿಸಿದನು. ನಾವು ಅವರನ್ನು ನಂಬಿ ಅವರ ಮಾತುಗಳಂತೆ ನಡೆದೆವು. ಇದರ ಪರಿಣಾಮವಾಗಿ ಈಗ ನಮ್ಮಲ್ಲಿ ಒಂದು ಪರಿವರ್ತನೆ ಉಂಟಾಗಿದೆ. ನಮ್ಮಲ್ಲಿ ಈಗ ನೀವು ಹೇಳಿದಂತಹ ಕೆಡುಕುಗಳು ಇಲ್ಲ. ಈಗ ನಾವು ಯಾರ ಲಾಲಸೆಗೂ ಒಳಪಡಲು ತಯಾರಿಲ್ಲ. ನಿಮ್ಮೊಡನೆ ನಮ್ಮ ಯುದ್ಧ ಶುರುವಾಗಿದೆ. ಈಗ ಇದರ ತೀರ್ಮಾನ ಯುದ್ಧದ ಮೈದಾನದಲ್ಲಿ ಆಗುವುದು. ಲೌಕಿಕವಾದ ಸಂಪತ್ತು ಮತ್ತು ಸಾಮಾನುಗಳ ದುರಾಸೆ ನಮ್ಮನ್ನು ನಮ್ಮ ಉದ್ದೇಶದಿಂದ ತಡೆಯಲಿಕ್ಕಿಲ್ಲ. ಈ ಮಾತುಗಳನ್ನು ಕೇಳಿದಾಗ ಯಝ್ದಿಗರ್‌ದನಿಗೆ ತುಂಬ ಕೋಪಬಂತು. ಅವನುತನ್ನ ಒಬ್ಬ ಸೇವಕನೊಡನೆ ಒಂದು ಗೋಣಿ ಮಣ್ಣು ತರಲು ಹೇಳಿದನು. ಮಣ್ಣಿನ ಗೋಣಿ ತರಲ್ಪಟ್ಟಾಗ ಅವನು ಇಸ್ಲಾಮಿನ ಆ ಸಂಘದ ಸರದಾರರನ್ನು ಮುಂದಕ್ಕೆ ಕರೆದು ಹೀಗೆ ಹೇಳಿದನು: ನೀವು ನನ್ನ ಕಾಣಿಕೆಯನ್ನು, ಕೊಡುಗೆಯನ್ನು ತಿರಸ್ಕರಿಸಿದ ಕಾರಣ ಈಗ ನಿಮಗೆ ಈ ಮಣ್ಣಿನ ಗೋಣಿಯ ಹೊರತು ಬೇರೆ ಏನು ಸಿಗಲಾರದು. ಆ ಸಹಾಬಿ ಅತ್ಯಂತ ಗಾಂಭೀರ್ಯದಿಂದ ಮುಂದಕೆ ಬಂದು ತನ್ನ ತಲೆತಗ್ಗಿಸಿ ಮಣ್ಣಿನ ಗೋಣಿಯನ್ನು ತನ್ನ ಬೆನ್ನಲ್ಲಿ ಇರಿಸಿ ಒಂದು ಜಿಗಿತ ಹಾಕಿದರು ಹಾಗು ಬೇಗನೆ ಅವನ ದರಬಾರದಿಂದ ಹೊರಡುತ್ತಾ ತನ್ನ ಸಹಚರರೊಡನೆ ಉಚ್ಚಸ್ವರದಲ್ಲಿ ಹೀಗೆ ಹೇಳಿದರು: ಇಂದು ಇರಾನಿನ ಅರಸ ತನ್ನ ಕೈಯಿಂದ ತನ್ನ ದೇಶದ ಭೂಮಿಯನ್ನು ನಮಗೆ ಒಪ್ಪಿಸಿದ್ದಾನೆ. ಅನಂತರ ಕುದುರೆಯಲ್ಲಿ ಸವಾರಿ ಮಾಡಿ ಬೇಗನೆ ಹೊರಟುಹೋದರು. ಇರಾನಿನ ದೊರೆ ಈ ಘೋಷಣೆಯನ್ನು ಕೇಳಿದಾಗ ನಡುಗಿದ. ಅವನು ದರ್ಬಾರಿನ ಸದಸ್ಯರೊಡನೆ ಹೀಗೆ ಹೇಳಿದ: ಓಡಿಹೋಗಿ ಮಣ್ಣಿನ ಬೋರಿಯನ್ನು ಅವರಿಂದ ವಾಪಸ್ಸು ತನ್ನಿರಿ. ಇದು ಬಹಳ ದೊಡ್ಡ ಕೆಟ್ಟ ಶಕುನವಾಯಿತು. ನಾನು ನನ್ನ ಕೈಯಿಂದ ನನ್ನ ದೇಶದ ಮಣ್ಣನ್ನು ಅವರಿಗೆ ಒಪ್ಪಿಸಿದ್ದೇನೆ. ಆದರೆ ಆ ಸಂಘ ಆ ವೇಳೆಗೆ ಕುದುರೆಯಲ್ಲಿ ಸವಾರರಾಗಿ ಬಹಳ ದೂರಕ್ಕೆ ತಲುಪಿದ್ದರು. ಕೊನೆಗೆ ಅವರು ಹೇಳಿದಂತೆ ಆಯಿತು. ಕೆಲವೇ ವರ್ಷಗಳಲ್ಲಿ ಇರಾನ್ ಪೂರ್ತಿಯಾಗಿ ಮುಸ್ಲಿಮರ ವಶಕ್ಕೆ ಬಂತು. ಈ ಮಹತ್ತಾದ ಬದಲಾವಣೆ ಮುಸ್ಲಿಮರಲ್ಲಿ ಹೇಗೆ ಉಂಟಾಯಿತು? ಏಕೆಂದರೆ ಪವಿತ್ರ ಖುರ್‌ಆನಿನ ಅಧ್ಯಾಪನೆಗಳು, ಅವರ ನೈತಿಕತೆ ಮತ್ತು ಅವರ ಸ್ವಭಾವದಲ್ಲಿ ಒಂದು ಬದಲಾವಣೆ ಉಂಟುಮಾಡಿತು. ಅವರ ಲೌಕಿಕ ಜೀವನಕ್ಕೆ ಅಲ್ಲಾಹನು ಒಂದು ಮರಣವನ್ನು ನೀಡಿದನು. ಅವರನ್ನು ಶ್ರೇಷ್ಠ ನಡತೆ ಮತ್ತು ಉನ್ನತ ಮಟ್ಟದ ನೈತಿಕ ಸ್ವಭಾವ ಗುಣಗಳನ್ನು ಹೊಂದಿದವರನ್ನಾಗಿ ಮಾಡಿದನು. ಇದರ ಪರಿಣಾಮವಾಗಿ ಅವರು ಲೋಕದಲ್ಲಿ ಇಸ್ಲಾಮನ್ನು ಹರಡುವವರಾದರು. ಇಸ್ಲಾಮಿನ ಪಾಠಗಳ ಪ್ರಕಾರ ನಡೆದುಕೊಂಡು ಜನರನ್ನು ನೈಜ ಮುಸ್ಲಿಮರನ್ನಾಗಿ ಮಾಡುವವರಂತಾದರು. ಯಾವುದೇ ಶಕ್ತಿಯ ಭಯ ಅಥವಾ ಅಪಾಯ ಅವರನ್ನು ಗಾಬರಿಗೊಳಿಸಲಿಲ್ಲ. (ತಫ್‌ಸೀರೆ ಕಬೀರ್, ಸಂಪುಟ–6, ಪುಟ–204–205)

ಹಝ್ರತ್ ಸಅದ್ ಬಿನ್ ಅಬೀ ವಖಾಸರ[ರ] ಬಗ್ಗೆಗಿನ ಪ್ರಸ್ತಾಪದ ಉಳಿದ ಭಾಗವನ್ನು ಮುಂದಿನ ಬಾರಿ ವಿವರಿಸುತ್ತೇನೆ. ಸ್ವಲ್ಪ ಭಾಗ ಇನ್ನೂ ಬಾಕಿಯಿದೆ.

ನಾನು ಇಂದು ಸಹ ಕೆಲವು ಜನಾಝ ಗ್ಹಾಇಬ್ ನಿರ್ವಹಿಸುತ್ತೇನೆ. ಇವರಲ್ಲಿ ಮೊದಲ ಜನಾಝ ಪಾಕಿಸ್ತಾನಿನ ಸನ್ಮಾನ್ಯ ಮುಹಮ್ಮದ್ ಅಕ್ರಮ್ ಬಾಜ್ವ ಸಾಹಿಬ್ ನಾಝಿರ್ ತಾಲೀಮುಲ್ ಖುರ್‌ಆನ್ ವಖ್ಫೆ ಆರ್‌ಝಿಯ ಪತ್ನಿಯಾದ ದಿವಂಗತ ಬುಶ್‌ರ ಅಕ್ರಮ್ ಸಾಹಿಬರದ್ದಾಗಿದೆ. 25 ಮಾರ್ಚ್ 2020ರಂದು 66ನೇ ವಯಸ್ಸಲ್ಲಿ ವಫಾತಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಲಿಲ್ಲಾಹಿ ರಾಜಿಊನ್**. ಸ್ಥಿತಿಗತಿಗಳ ಕಾರಣ ಆಗ ಜನಾಝ ನಿರ್ವಹಿಸಿರಲಿಲ್ಲ. ಇವರು ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. ಅವರಿಗೆ ಎರಡು ಗಂಡುಮಕ್ಕಳು ಮತ್ತು ಒಂದು ಹೆಣ್ಣು ಮಗಳು ಇರುವರು. ಬುಶ್ರ ಅಕ್ರಮ್ ಸಾಹಿಬ ತನ್ನ ಗಂಡ ಸನ್ಮಾನ್ಯ ಮುಕರ್‌ರಮ್ ಮುಹಮ್ಮದ್ ಅಕ್ರಮ್ ಬಾಜ್ವ ಸಾಹಿಬರೊಂದಿಗೆ 15 ವರ್ಷಗಳ ಕಾಲ ಲೈಬೀರಿಯದಲ್ಲಿ ಇದ್ದರು. ಆ ಕಾಲದಲ್ಲೇ ಲೈಬೀರಿಯಾದ ಲಜ್‌ನಾ ಇಮಾಯಿಲ್ಲಾಹ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಲೈಬೀರಿಯಾದಲ್ಲಿ ಸಿವಿಲ್ ವಾರ್ ಸಮಯದಲ್ಲಿ ಅವರ ಪತಿ ಮತ್ತು ಮಕ್ಕಳು ಸಮೇತ 15 ದಿವಸಗಳು ತನಕ ಸೈನ್ಯದ ಬೇರೆಕ್‌ನಲ್ಲಿ ಸೆರೆಯಾಳುಗಳಾಗಿ ಇರಿಸಲಾಗಿತ್ತು. ಮುಹಮ್ಮದ್ ಅಕ್ರಮ್ ಬರೆಯುತ್ತಾರೆ: ನನ್ನ ಪತ್ನಿ ಒಬ್ಬ ವಾಖಿಫೆ ಝಿಂದಗಿಯಾದ ನನ್ನೊಡನೆ 37 ವರ್ಷಗಳ ಕಾಲ ತನ್ನ ಸ್ನೇಹಬಂಧವನ್ನು ಬಹಳ ನಿಷ್ಠೆ, ಸಹನೆ ಮತ್ತು ಪ್ರಾಮಾಣಿಕತೆಯಿಂದ ಸ್ಥಾಪಿಸಿದರು. ವಿಶೇಷವಾಗಿ, ಲೈಬೀರಿಯಾದಲ್ಲಿ ನಾನು ಮುಬಲ್ಲಿಗ್ ಮತ್ತು ಅಮೀರ್ ಆಗಿ ನೇಮಿಸಲ್ಪಟ್ಟಾಗ, 23 ವರ್ಷಗಳ ಕಾಲ ಅಲ್ಲಿ ತಬ್ಲೀಗ್ ಮತ್ತು ತರ್ಬಿಯತ್ ವಿಷಯಗಳಲ್ಲಿ ಸಹಕರಿಸಿದ್ದರು. ಅತಿಥಿ ಸತ್ಕಾರ ಮತ್ತು ಜಮಾಅತಿನ್ ಇತರ ವಿಷಯಗಳಲ್ಲಿಯೂ ಸಹಾಯಕಿಯಾಗಿದ್ದಳು. ಲೈಬೀರಿಯಾದ ಲಜ್ನ ಸದರ್ ಆಗಿ ಸೇವೆ ಮಾಡುವ ಸೌಭಾಗ್ಯ ಪಡೆದಳು. ಲೈಬೀರಿಯಾದಲ್ಲಿ ತನ್ನ 15 ವರ್ಷಗಳ ವಾಸದ ಸಂದರ್ಭದಲ್ಲಿ ಹಲವಾರು ಬಾರಿ ಮಲೇರಿಯಾ ಮತ್ತು ಟಾಯಿಫಾಇಡ್ ರೋಗಕ್ಕೆ ತುತ್ತಾದರು. ಹೇಗಿದ್ದರೂ ಬಹಳ ಸಹನೆಯಿಂದ ನನ್ನ ಸಹಚಾರಿಯಾಗಿ ಇದ್ದಳು. ನನ್ನ ಪತ್ನಿ ಬಹಳ ಉತ್ತಮ ರೀತಿಯಲ್ಲಿ ಮಕ್ಕಳನ್ನು ಧಾರ್ಮಿಕ ಮೌಲ್ಯಗಳ ಪ್ರಕಾರ ತರಬೇತಿಗೊಳಿಸಿದರು. ಎರಡು ಮಕ್ಕಳು ನಿಷ್ಠೆಯಿಂದ ಜಮಾಅತಿನೊಂದಿಗೆ ಸೇರಿಕೊಂಡಿದೆ. ಮಾಶಾ ಅಲ್ಲಾಹ್. ಶುಹದಾ ಸ್ಕೂಲಿನ ಪ್ರಾಂಶುಪಾಲರಾದ ವಾಖಿಫೆ ಝಿಂದಗಿ ಮನ್ಸೂರ್ ನಾಸಿರ್ ಸಾಹಿಬರು ಬರೆಯುತ್ತಾರೆ: ನಾನು ಲೈಬೀರಿಯಾದಲ್ಲಿ ಒಬ್ಬಂಟಿಯಾಗಿದ್ದ ಮೂರು ವರ್ಷಗಳ ಕಾಲ ನಿರಂತರ ನನ್ನನ್ನು ಮನೆಯಲ್ಲಿ ಇರಿಸಿ ಅತಿಥಿ ಸತ್ಕಾರ ಮಾಡಿದರು. ನನ್ನನ್ನು ಮಕ್ಕಳ ಅಥವಾ ಕಿರಿಯ ಸೋದರನ ಹಾಗೆ ಉಪಚರಿಸಿದರು. ಅಲ್ಲಾಹನು ಅವರ ಮಕ್ಕಳನ್ನು ಅವರ ದುಆಗಳ

ವಾರಸುದಾರರನ್ನಾಗಿ ಮಾಡಲಿ, ಸತ್ಕರ್ಮಗಳನ್ನು ಜಾರಿಯಾಗಿರಿಸಲು ಸೌಭಾಗ್ಯ ನೀಡಲಿ.ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಎರಡನೇ ಜನಾಝ ದಿವಂಗತ ಇಖ್ಬಾಲ್ ಅಹ್ಮದ್ ನಾಸಿರ್ ಪೀರ್‌ಕೋಟಿ ಸಾಹಿಬ್‌ರದ್ದಾಗಿದೆ. ಇವರು ಖೈರ್‌ಪೂರ್ ಜಿಲ್ಲೆಯ ಕರೋಂಡಿಯವರು ಆಗಿದ್ದಾರೆ. 14 ಜೂಲಾಯಿ, 2020ರಂದು 82ನೇ ವಫಾತಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಲಿಲ್ಲಾಹಿ ರಾಜಿಊನ್**. ಇವರ ಮಗ ಅಕ್ಬರ್ ಅಹ್ಮದ್ ತಾಹಿರ್ ಸಾಹಿಬರು ಬುರ್ಕಿನಾಫಾಸಿನಲ್ಲಿ ಮುಬಲ್ಲಿಗ್ ಆಗಿರುವರು. ಅವರು ಹೇಳುತ್ತಾರೆ: ನನ್ನ ತಂದೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿಯಾದ ಮಿಯಾ ನೂರ್ ಮುಹಮ್ಮದ್ ಸಾಹಿಬ್ ರಫೀಕ್ ಮಗನೂ, ಸಹಾಬಿಯಾದ ಮಿಯಾ ಇಮಾಮುದ್ದೀನ್ ಸಾಹಿಬರ ಮೊಮ್ಮಗನೂ, ಮಿಯಾ ಪೀರ್ ಮುಹಮ್ಮದ್ ಸಾಹಿಬ್ ಮತ್ತು ಹಾಫಿಝ್ ಮುಹಮ್ಮದ್ ಇಸ್‌ಹಾಕ್ ಸಾಹಿಬರ ಸೋದರ ಪುತ್ರನೂ ಆಗಿದ್ದರು. ಜಮಾಅತಿನ ಕೆಲಸಗಳನ್ನು ಬಹಳ ಉತ್ಸಾಹದಿಂದ ಮಾಡುತ್ತಿದ್ದರು. ದೀರ್ಘಕಾಲ ಸೆಕ್ರೆಟರಿ ಮಾಲ್ ಆಗಿ ಕೆಲಸಮಾಡುವ ಸೌಭಾಗ್ಯ ಪಡೆದರು. ಅನ್ಸಾರುಲ್ಲಾಹ್‌ದ ಝಈಮ್ ಸಹ ಆಗಿದ್ದರು. ಇಮಾಮುಸ್ಸಲಾತ್ ಸಹ ಆಗಿದ್ದರು. ಮುರಬ್ಬಿ ಅತ್‌ಫಾಲ್ ಮುಂತಾಗಿ ಸೇವೆ ಸಹ ಮಾಡಿದ್ದರು. ಮಗ ಹೇಳುತ್ತಾನೆ: ಒಂದು ಡಬ್ಬದಲ್ಲಿ ಹಣವನ್ನು ತಂದೆಯವರು ಬೇರೆ ಇರಿಸುವುದನ್ನು ನಾನು ಚಿಕ್ಕವನಿದ್ದಾಗ ನೋಡಿದ್ದೇನೆ. ಸರಿಯಾದ ಸಮಯದಲ್ಲಿ ಪಾವತಿ ಮಾಡಲಿಕ್ಕಾಗಿ ಚಂದಾದ ಹಣವನ್ನು ಅದರಲ್ಲಿ ಹಾಕುತ್ತಾ ಹೋಗುತ್ತೇನೆ ಎಂದು ಅದರ ಬಗ್ಗೆ ಕೇಳುವಾಗ ಹೇಳುತ್ತಿದ್ದರು. ಬಹಳ ಆವೇಶ ಮತ್ತು ಆಸಕ್ತಿಯಿಂದ ತಬ್ಲೀಗ್ ಮಾಡುತ್ತಿದ್ದರು. ಅವರ ಮುಖಾಂತರ ಹಲವು ಸಜ್ಜನರು ಜಮಾಅತಿನಲ್ಲಿ ಸೇರಿದರು. ದುಆ ಮಾಡುವವರೂ ನಮಾಝ್ ಸರಿಯಾಗಿ ನಿರ್ವಹಿಸುವವರೂ ತಹಜ್ಜುದ್ ಅನುಷ್ಠಿಸುವವರೂ ಆಗಿದ್ದರು. ನನ್ನ ಒತ್ತಾಯದ ಕಾರಣ 2016ರಲ್ಲಿ ಬುರ್ಕಿನಾಫಾಸಿಗೆ ಬಂದಿದ್ದರು. ಆಗ ಅಲ್ಲಿ ನಡೆದ ಜಮಾಅತಿನ ಎಲ್ಲ ಜಲಸಾಗಳು ಮತ್ತು ಇಜ್‌ತಿಮಾಗಳಲ್ಲಿ ಭಾಗವಹಿಸುತ್ತಿದ್ದರು. ಬಹಳ ಆವೇಶದಿಂದ ನಾರೆ ಹಾಕುತ್ತಿದ್ದರು. ಅಲ್ಲಿ ಹಾಜರಿದ್ದ ಜನರನ್ನು ಆವೇಶಭರಿತರನ್ನಾಗಿ ಮಾಡಿ ಸಂತೃಪ್ತಿ ಪಡೆಯುತ್ತಿದ್ದರು. ಪಾಕಿಸಾನದಲ್ಲಿ ದೀರ್ಘಕಾಲದಿಂದ ಜಮಾಅತಿನ ಜಲಸಾಗಳು ನಡೆಯದಿರುವ ಕಾರಣ ಅವರ ಹೃದಯದಲ್ಲಿ ಒಂದು ದಾಹವಿತ್ತು. ಅವರು ತಮ್ಮ ಪತ್ನಿ ಬಶೀರ ಬೇಗಂ ಸಾಹಿಬ, ಮೂರು ಗಂಡು ಮಕ್ಕಳು ಮತ್ತು ಮೂರು ಹೆಣ್ಮಕ್ಕಳನ್ನು ಅಗಲಿರುವರು.

ಅಮೀರ್ ಮಿಶನರಿ ಇಂಚಾರ್ಜ್ ಬುರ್ಕಿನಾಫಾಸೋ ಬರೆಯುತ್ತಾರೆ: ಬುರ್ಕಿನಾಫಾಸೋದಲ್ಲಿ ಫ್ರಂಚ್ ಭಾಷೆ ಮಾತನಾಡಲಾಗುವ ಕಾರಣ ಅವರಿಗೆ ಮಾತುಕತೆ ನಡೆಸಲು ಕಷ್ಟವಾಗುತ್ತಿತ್ತು. ಆದರೆ ಅವರ ಪ್ರೇಮದ ಭಾಷೆಯನ್ನು ಎಲ್ಲರೂ ಮನವರಿಕೆ ಮಾಡುತ್ತಿದ್ದರು. ಬಹಳ ಪ್ರೀತಿಯಿಂದ ಎಲ್ಲರನ್ನು ಭೇಟಿಯಾಗುವ ಕಾರಣ ಎಲ್ಲರೂ ಅವರ ಕಡೆಗೆ ಆಕರ್ಷಿತರಾಗುತ್ತಿದ್ದರು. ಅವರ ವಫಾತಾದಾಗ ಇಲ್ಲಿನ ಪ್ರಾದೇಶಿಕ ಜನರು ಅವರನ್ನು ಬಹಳ ಪ್ರೀತಿಯಿಂದ ನೆನೆಯುತ್ತಿದ್ದಾರೆ. ಅವರ ಮರಣದ ಬಳಿಕ ನಮ್ಮ ನೇಶನಲ್ ಸೆಕ್ರೆಟರಿ ಇಶಾಅತ್ ಬಾಪೀನ ಸಾಹಿಬ್‌ರು ಅವರ ಫೋಟೋ ಶೇರ್ ಮಾಡಿ ಹೀಗೆ ಹೇಳಿದ್ದರು: ಬುರ್ಕಿನಾಫಾಸೋದಲ್ಲಿ ಇದ್ದಾಗ ಅವರನ್ನು ಭೇಟಿಯಾದಾಗ ಅವರು ನೈಜ ಹಿರಿಯ ಅಹ್ಮದಿಯಾಗಿ ಅನುಭವಪಟ್ಟರು. ಅಲ್ಲಾಹನು ಅವರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳನ್ನು ಅವರ ದುಆಗಳ ವಾರಸುದಾರರನ್ನಾಗಿ ಮಾಡಲಿ. ಅಲ್ಲಿ ಮುರಬ್ಬಿಯಾಗಿರುವ ಅವರ ಮಗನಿಗೆ ಅವರ ಜನಾಝದಲ್ಲಿ ಭಾಗವಹಿಸಲು ಆಗಿರಲಿಲ್ಲ.

ಮೂರನೇ ಜನಾಝ ಗುಲಾಂ ಫಾತಿಮ ಫಹ್ಮೀದ ಸಾಹಿಬರದ್ದಾಗಿದೆ. ಅವರು ಮುಹಮ್ಮದ್ ಇಬ್ರಾಹೀಮ್ ಸಾಹಿಬರ ಪತ್ನಿಯಾಗಿದ್ದರು. ಅವರು ಆಝಾದ್ ಕಶ್ಮೀರಿನ ಕೋಟ್‌ಲಿ ಜಿಲ್ಲೆಯ ಮೋಲಿಯ ಜಟಾ ಎಂಬ ಸ್ಥಳದವರಾಗಿದ್ದರು. 18 ಜೂಲಾಯಿ 2020ರಂದು 72ನೇ ವಯಸ್ಸಿನಲ್ಲಿ ದೀರ್ಘಕಾಲದ ರೋಗಾವಸ್ಥೆಯ ನಂತರ ವಫಾತ್ ಆದರು. **ಇನ್ನಾ ಲಿಲ್ಲಾಹಿ ವ ಇನ್ನಾ ಲಿಲ್ಲಾಹಿ ರಾಜಿಊನ್**. 1944ರಲ್ಲಿ ಅವರ ತಂದೆಯವರು ಬೈಅತ್ ಮಾಡಿದ್ದರು. ತಂದೆಯ ಹೆಸರು ನೇಕ್ ಮುಹಮ್ಮದ್ ಉರ್ಫ್ ಕಾಲೆಖಾನ್ ಎಂದಾಗಿತ್ತು. ಬೈಅತಿನ ಮುಂಚಿತವಾಗಿ ತಾನು ಯಾವುದೋ ಒಬ್ಬ ಮಹಾನರನ್ನು ಭೇಟಿಯಾಗಲು ಹೋಗುವುದಾಗಿ ಅವರು ಕನಸಿನಲ್ಲಿ ಕಂಡಿದ್ದರು. ಆ ಮಹಾನರನ್ನು ಕಂಡಾಗ, ಅವರ ಕಡೆಗೆ ಓಡಿ ಹೋಗಿ ಭೇಟಿಯಾದೆ. ಆ ಹಿರಿಯರು ಕೇಳಿದರು: ಕಾಲೇ ಖಾನ್ ನೀವು ಯಾವಾಗ ನಮ್ಮ ಬಳಿ ಬರುವಿರಿ. ನಾನು ಬಂದೇ ಬಿಟ್ಟಿದ್ದೇನೆ ಎಂದು ಕಾಲೆ ಖಾನ್ ಸಾಹಿಬರು ಉತ್ತರಿಸಿದರು. ಇದಾಗಿತ್ತು ಅವರ ಕನಸು. ಒಬ್ಬ ವ್ಯಕ್ತಿಯ ಬಳಿ ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರ ಫೋಟೋ ನೋಡಿದಾಗ ಅವರು ಅದನ್ನು ಗುರುತಿಸಿದರು. ಇದೇ ಮಹಾನ್ ವ್ಯಕ್ತಿಯನ್ನು ನಾನು ಕನಸಿನಲ್ಲಿ ಕಂಡಿದೆನು ಎಂದು ಅವರು ಹೇಳಿದರು. ಪತ್ರದ ಮುಖಾಂತರ ಅವರು ಬೈಅತ್ ಮಾಡಿದ್ದರು. ಅವರು ಬೈಅತ್ ಮಾಡಿದಾಗ ಅವರ ಪತ್ನಿ ಸಹ ತನ್ನ ಬೈಅತ್ ಮಾಡಿಸಲು ಹೇಳಿದಳು. ಹೀಗೆ ಅವರ ಪತ್ನಿ ಸಹ ಬೈಅತ್ ಮಾಡಿದರು. ಪತಿ– ಪತ್ನಿ ಇಬ್ಬರೂ ನಿಷ್ಠಾವಂತರಾಗಿದ್ದರು. ಅದೇ ರೀತಿಯಲ್ಲಿ ಮರಣಹೊಂದಿದ ಅವರ ಮಗಳು ಫಹ್‌ಮೀದ ಫಾತಿಮಾ ಸಹ ಐದು ಹೊತ್ತು ನಮಾಝ್ ಮತ್ತು ತಹಜ್ಜುದ್ ನಿರ್ವಹಿಸುವವರು ಆಗಿದ್ದರು. ಇದು ಸಹ ಅವರ ತರಬೇತಿಯ ಪ್ರಭಾವವಾಗಿತ್ತು. ದಿನಾಲೂ ಖುರ್‌ಆನ್ ಪಾರಾಯಣ ಮಾಡುವವಳಾಗಿದ್ದಳು. ರಾತ್ರಿ ಸಮಯಗಳಲ್ಲಿ ಎದ್ದು ಅಳುತ್ತಾ ನಮಾಝ್ ಮಾಡುವುದನ್ನು ಅವರ ಮಕ್ಕಳು ನೋಡಿದ್ದರು. ಜುಮಾ ನಮಾಝ್ ನಿರ್ವಹಿಸಲು ಒಂದು ಗಂಟೆ ಮುಂಚಿತವಾಗಿ ಮಸೀದಿಗೆ ಹೋಗುತ್ತಿದ್ದರು. ಐಚ್ಛಿಕ ನಮಾಝ್ ಮತ್ತು ದುಆಗಳಲ್ಲಿ ಸಮಯ ಕಳೆಯುತ್ತಿದ್ದರು. ತುಂಬ ಧೈರ್ಯ, ಸ್ಥೈರ್ಯ ಮತ್ತು ಸಹನೆ ಇರುವವರಾಗಿದ್ದರು. ಅವರ ಪತಿ 1965 ಮತ್ತು 1971ರ ಯುದ್ಧದಲ್ಲಿ ಎರಡು ಸಲ ಸೆರೆಯಾಳಾಗಿದ್ದರು. ಮೊದಲ ಬಾರಿಗೆ ದೀರ್ಘ ಕಾಲದ ವರೆಗೆ ಅವರು ಜೀವಂತವಾಗಿರುವುದರ ಬಗ್ಗೆ ಯಾವುದೇ ವಾರ್ತೆ ಬಂದಿರಲಿಲ್ಲ. ಅವರು ಶಹೀದ್ ಆದರು ಎಂದು ಭಾವಿಸಲಾಗಿತ್ತು. ಜನಾಝ ಗಾಇಬ್ ಸಹ ನಿರ್ವಹಿಸಲಾಗಿತ್ತು. ಆದರೂ ಅವರು ಜೀವಂತವಾಗಿರುವರು ಎಂದೂ ಖಂಡಿತ ವಾಪಸ್ಸು ಬರುವರು ಎಂದು ಧೈರ್ಯದಿಂದ ಇದ್ದರು. ಕೊನೆಗೆ ಅಲ್ಲಾಹನ ಕೃಪೆಯಿಂದ ಅವರು ಬಿಡುಗಡೆ ಪಡೆದು ವಾಪಸ್ಸು ಬಂದರು. ದಿವಂಗತರು ತಮ್ಮ ಪತಿಯಾದ ಮುಹಮ್ಮದ್ ಇಬ್ರಾಹೀಂ ಸಾಹಿಬ್ ಅಲ್ಲದೆ, ನಾಲ್ಕು ಗಂಡು ಮಕ್ಕಳು ಮತ್ತು ಎರಡು ಹೆಣ್ಮಕ್ಕಳನ್ನು ಅಗಲಿರುವರು. ಮೂರು ಗಂಡು ಮಕ್ಕಳು ವಾಖಿಫೆ ಝಿಂದಗಿಯಾಗಿರುವರು. ಮುಹಮ್ಮದ್ ಜಾವೇದ್ ಸಾಹಿಬ್ ಗೇಂಬಿಯಾದಲ್ಲಿ ಸೇವೆ ಸಲ್ಲಿಸುವ ತೌಫೀಕ್ ಪಡೆಯುತ್ತಿದ್ದಾರೆ. ತಾಯಿಯ ಮರಣ ಸಮಯದಲ್ಲಿ ಪಾಕಿಸ್ತಾನಕ್ಕೆ ಹೋಗಲಿಕ್ಕಾಗಲಿಲ್ಲ. ಅಲ್ಲಾಹನು ಅವರೊಂದಿಗೆ ಕರುಣೆ ಮತ್ತು ಮಗ್‌ಫಿರತಿನಿಂದ ವರ್ತಿಸಲಿ. ಅವರ ಮಕ್ಕಳಿಗೆ ಅವರ ಒಳಿತುಗಳನ್ನು ಮುಂದುವರಿಸಲು ಸೌಭಾಗ್ಯ ನೀಡಲಿ.

ಮುಂದಿನ ಜನಾಝ ದಿವಂಗತ ಮುಹಮ್ಮದ್ ಅನ್ವರ್ ಸಾಹಿಬ್ ಹೈದರಾಬಾದ್ ಅವರದ್ದಾಗಿದೆ. 22 ಮಾರ್ಚ್‌ರಂದು 94ನೇ ವಯಸ್ಸಿನಲ್ಲಿ ವಫಾತ್ ಆದರು. **ಇನ್ನಾ ಲಿಲ್ಲಾಹಿ ವ ಇನ್ನಾ ಲಿಲ್ಲಾಹಿ ರಾಜಿಊನ್**. ಇವರ ಕುಟುಂಬದಲ್ಲಿ ಅಹ್ಮದಿಯತ್ ಅವರ ತಾತ ಶೇಖ್ ದಾವೂದ್ ಸಾಹಿಬರ ಮೂಲಕ ಬಂದಿತು. ಆರಂಭ ವಯಸ್ಸಿನಲ್ಲಿ ತಂದೆ ತನ್ನ ಎರಡು ಮಕ್ಕಳಾದ ಮುಹಮ್ಮದ್ ಅಹ್ಮದ್ ಸಾಹಿಬ್ ಮತ್ತು ಮಜೀದ್ ಅಹ್ಮದ್ ಸಾಹಿಬರನ್ನು ಶಿಕ್ಷಣದ ಉದ್ದೇಶದಿಂದ ಖಾದಿಯಾನಿಗೆ ಕಳುಹಿಸಿದ್ದರು. ಖಾದಿಯಾನಿನಲ್ಲಿ ಮಿನಾರುತುಲ್ ಮಸೀಹಿನಲ್ಲಿ ಅಝಾನ್ ನೀಡುವ ಸೌಭಾಗ್ಯ ಸಹ ಅವರಿಗೆ ಲಭಿಸಿತು. ಮುಹಮ್ಮದ್ ಅಹ್ಮದ್ ಸಾಹಿಬರು ಆರಂಭದಿಂದಲೇ ಹಝ್ರತ್ ಖಲೀಫತುಲ್ ಮಸೀಹ್ ಸಾನಿಯರೊಂದಿಗೆ ಇದ್ದರು. ಪಾರ್ಟಿಶನ್ ಸಮಯದಲ್ಲಿ ಹುಝೂರ್‌ರೊಂದಿಗೆ ರಬ್ವಗೆ ಹೋದರು. ಅದರ ನಂತರ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸರ ಕಾಲದಲ್ಲಿ ಅವರ ಡ್ರೈವರ್ ಆಗಿ ಸಹ ಕೆಲಸ ಮಾಡಿದರು. ಅನಂತರ ಅವರು ತಮ್ಮ ಶಿಕ್ಷಣವನ್ನು ಪೂರ್ತಿ ಮಾಡಿದರು. ಫಿಝಿಕಲ್ ಎಜುಕೇಶನಿನಲ್ಲಿ ಡಿಪ್ಲೋಮ ಮಾಡಿದರು. ಉರ್ದುವಿನಲ್ಲಿ ಎಂ.ಎ. ಮಾಡಿದರು. ಇಸ್ಲಾಮಿಕ್ ಸ್ಟಡಿಯಲ್ಲಿ, ಅನಂತರ ತಾಲೀಮುಲ್ ಇಸ್ಲಾಮ್ ಕಾಲೇಜಿನಲ್ಲಿ ದೀರ್ಘಕಾಲ ಸೇವೆ ಸಲ್ಲಿಸುವ ಸೌಭಾಗ್ಯ ಪಡೆದರು. 73 ರಿಂದ 76ರ ವರೆಗೆ ಮೂರು ವರ್ಷಗಳ ಕಾಲ ವಖ್‌ಫ್ ಮಾಡಿ ಗೇಂಬಿಯಾಗೆ ಹೋದರು. 78ರಿಂದ 86ರ ವರೆಗೆ ನೈಜೀರಿಯಾದಲ್ಲಿ ಹುಡುಗಿಯರ ಕಾಲೇಜಿನಲ್ಲಿ ಇಸ್ಲಾಮಿಕ್ ಸ್ಟಡೀಸಿನ ಟೀಚರ್ ಆಗಿದ್ದರು. 88ರಲ್ಲಿ ಪಾಕಿಸ್ತಾನದಿಂದ ಜರ್ಮನಿಗೆ ಹಿಜ್‌ರತ್ ಮಾಡಿದರು. 2009ರಲ್ಲಿ ಅಲ್ಲಿಂದ ಯು.ಕೆ.ಗೆ ಬಂದರು. ಅನಂತರ ಅಲ್ಲೇ ಇದ್ದರು. ಅವರಿಗೆ ನಾಲ್ಕು ಗಂಡು ಮಕ್ಕಳು ಮತ್ತು ಎರಡು ಹೆಣ್ಮಕ್ಕಳು ಇರುವರು. ಎಲ್ಲರು ವಿವಾಹಿತರಾಗಿದ್ದಾರೆ. ಜರ್ಮನಿಯ ಖುದ್ದಾಮ ಬೋರ್ಡಿನ ನಾಇಬ್ ಸದರ್ ಆಗಿದ್ದರು. ಒಂದು ಸಮಯದಲ್ಲಿ ಜರ್ಮನಿ ಜಮಾಅತಿನ ನಾಇಬ್ ಆಡಿಟರ್ ಸಹ ಆಗಿದ್ದರು. ಅವರ ಮಗಳು ಅಮತುಲ್ ಮಜೀದ್ ಹೇಳುತ್ತಾಳೆ: ನನ್ನ ತಂದೆ ದುಆಗಳ ಖಜಾನೆಯಾಗಿದ್ದರು. ತನ್ನ ಜೀವನದಲ್ಲಿ ಕೇವಲ ನಮಾಝ್, ಪವಿತ್ರ ಖುರ್‌ಆನ್, ಉಪವಾಸ ಮತ್ತು ಖಿಲಾಫತಿನ ಸೇವೆಯನ್ನು ತಮ್ಮ ಹಾಸಿಗೆ ಮತ್ತು ಹೊದಿಕೆಯನ್ನಾಗಿ ಮಾಡಿದ್ದರು. ಎಲ್ಲ ಮಕ್ಕಳಿಗೂ ಇದನ್ನೇ ಉಪದೇಶಿಸುತ್ತಿದ್ದರು. ಅಲ್ಲಾಹನು ಅವರೊಡನೆ ಕಾರುಣ್ಯ ಮತ್ತು ಮಗ್‌ಫಿರತ್‌ನಿಂದ ವರ್ತಿಸಲಿ.

ಇಂದಿನ ಕೊನೆಯ ಜನಾಝ ದಿವಂಗತ ಸಲೀಮ್ ಹಸನುಲ್ ಜಾಬಿ ಸಾಹಿಬ್ ಆಫ್ ಸಿರಿಯಾದ್ದಾಗಿದೆ. 30 ಜೂನ್‌ರಂದು 92ನೆ ವಯಸ್ಸಿನಲ್ಲಿ ವಫಾತ್ ಆದರು. **ಇನ್ನಾ ಲಿಲ್ಲಾಹಿ ವ ಇನ್ನಾ ಲಿಲ್ಲಾಹಿ ರಾಜಿಊನ್**. ಅವರ ಮಗ ಲಬನಿಲ್ ಜಾಬಿ ಸಾಹಿಬ್ ಆಗಿದ್ದಾರೆ. ಅವರ

ಮಗಳು ಹಿಬತುಲ್ ಜಾಬಿ ಸಾಹಿಬ, ಇಲ್ಲಿ ಯು.ಕೆ.ಯಲ್ಲಿರುವ ಡಾಕ್ಟರ್ ಬಿಲಾಲ್ ತಾಹಿರ್ ಸಾಹಿಬರ ಪತ್ನಿಯಾಗಿರುವರು. ಅವರು ಹೇಳುತ್ತಾರೆ: ಸಲೀಂ ಜಾಬಿ ಸಾಹಿಬರ ಜನನ 1928 ಡಿಸೆಂಬರಲ್ಲಿ ಡಮಾಸ್ಕಸಿನ ಒಂದು ಹಳ್ಳಿಯಲ್ಲಿ ಆಗಿತ್ತು. 18ನೇ ವಯಸ್ಸಿನಲ್ಲಿ ಜಾಬಿ ಸಾಹಿಬರಿಗೆ ಅಹ್ಮದಿಯ್ಯತಿನ ಪರಿಚಯ ಒಂದು ಸಾಧಾರಣ ಅಹ್ಮದಿ ರೈತನಾದ ಸನ್ಮಾನ್ಯ ಅಬೂ ಝುಹಬ್ ಮುಖಾಂತರ ಆಯಿತು. ಆಗ ಜಾಬಿ ಸಾಹಿಬರು ಇಸ್ತಿಖಾರ ಪ್ರಾರ್ಥನೆ ಮಾಡಿದಾಗ, ಅವರು ಹಝ್ರತ್ ಮಸೀಹ್ ಮೌಊದ ಅಲೈಹಿಸ್ಸಲಾಮರನ್ನು ಕನಸಿನಲ್ಲಿ ಕಂಡರು. ಸ್ವಪ್ನದಲ್ಲೇ ಅವರ ಬೈಅತ್ ಮಾಡಿದರು. ಅನಂತರ ಅಬೂಝುಹಬ್ ಸಾಹಿಬರು ಅವರಿಗೆ ಇಸ್ಲಾಮ್ ಧರ್ಮ ತತ್ವಜ್ಞಾನ ಗ್ರಂಥದ ಅರಬೀ ತರ್ಜುಮೆ ನೀಡಿದರು. ಆ ಗ್ರಂಥದಲ್ಲಿರುವ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಛಾಯಾಚಿತ್ರವನ್ನು ನೋಡಿ ಆಗಿನ ಜಮಾಅತ್ ಅಹ್ಮದಿಯಾ ಸಿರಿಯಾದ ಅಮೀರ್ ಸನ್ಮಾನ್ಯ ಮುನೀರುಲ್ ಹಸನೀ ಸಾಹಿಬರ ಬಳಿಗೆ ಹೋಗಿ ಬೈಅತ್ ಮಾಡಿದರು. ಅವರ ಕುಟುಂಬದಲ್ಲಿ ಅವರ ತಂದೆಯ ಕಡೆಯಿಂದ ಕಠಿನವಾದ ವಿರೋಧವಿತ್ತು. ಆದರೆ ಇವರು ಸ್ಥಿರಚಿತ್ತರಾಗಿದ್ದರು. ಅನಂತರ ಅವರಿಗೆ ಹಝ್ರತ್ ಖಲೀಫತುಲ್ ಮಸೀಹ್ ಸಾನಿಯರ ಕಾಲದಲ್ಲಿ ಪಾಕಿಸ್ತಾನಕ್ಕೆ ಹೋಗುವ ಅವಕಾಶ ಸಿಕ್ಕಿತ್ತು. ಅಲ್ಲಿ ಹಝ್ರತ್ ಮುಸ್ಲಿಹ್ ಮೌಊದ್‌ರ ಕೆಳಗೆ ಆರು ವರ್ಷಗಳು ರಬ್ವದಲ್ಲಿ ಕಳೆದರು. ಅಲ್ಲೇ ಧಾರ್ಮಿಕ ಶಿಕ್ಷಣವನ್ನು ಪಡೆದರು. ಉರ್ದು ಭಾಷೆಯನ್ನೂ ಕಲಿತರು. ಹಝ್ರತ್ ಮುಸ್ಲಿಹ್ ಮೌಊದರ ನಿರ್ದೇಶನದಂತೆ ಪಾಕಿಸ್ತಾನದಲ್ಲೇ ಅವರ ವಿವಾಹವಾಯಿತು. ಹಝ್ರತ್ ಖಲೀಫತುಲ್ ಮಸೀಹ್ ಸಾನಿ, ಅವರ ನಿಕಾಹ್ ನಿರ್ವಹಿಸಿದ್ದರು. ಅವರ ಪತ್ನಿ ಪಾಕಿಸ್ತಾನದವರಾಗಿದ್ದರು. ಅವರ ಮೊಮ್ಮಗಳಾದ ಹಿಬ ಜಾಬಿ ಸಾಹಿಬರು ಬರೆಯುತ್ತಾಳೆ: ನಮ್ಮ ತಾತ ಯಾವಾಗಲೂ ನಮಗೆ ಉಪದೇಶ ನೀಡುತ್ತಿದ್ದರು ಮತ್ತು ನಮ್ಮ ಶಿಕ್ಷಣ ಮತ್ತು ತರ್‌ಬಿಯತಿಗಾಗಿ ಸಮಯ ಕಂಡುಕೊಳ್ಳುತ್ತಿದ್ದರು. ಆಧ್ಯಾತ್ಮಿಕ ಉನ್ನತಿ ಮತ್ತು ಖಿಲಾಫತ್‌ನೊಂದಿಗೆ ಸಂಬಂಧವಿರಿಸುವುದರ ಬಗ್ಗೆ ಒತ್ತುಕೊಡುತ್ತಿದ್ದರು. ಅವರ ಪತ್ನಿ ಕೆಲವು ವರ್ಷಗಳ ಹಿಂದೆ ವಫಾತ್ ಆಗಿದ್ದರು. ಅವರಿಗೆ ಆರು ಮಕ್ಕಳಿದ್ದರು. ಒಬ್ಬ ಮಗನಾದ ನಈಮುಲ್ ಜಾಬಿ ಸಾಹಿಬರು ಡಾಕ್ಟರ್ ಆಗಿರುವರು. ಕೆಲವು ವರ್ಷಗಳ ಹಿಂದೆ ಅವರನ್ನು ಅಪಹರಿಸಲಾಗಿತ್ತು. ಇಲ್ಲಿಯ ವರೆಗೆ ಅವರ ಬಗ್ಗೆ ಯಾವುದೇ ಮಾಹಿತಿ ಸಿಕ್ಕಿಲ್ಲ. ವಸೀಮುಲ್ ಜಾಬಿ ಪೋಲೆಂಡಿನಲ್ಲೇ ಜಮಾಅತಿನ ಮೆಂಬರ್ ಆಗಿರುವರು. ಇವರು ಹಿಬಾ ಜಾಬಿಯ ತಂದೆಯಾಗಿದ್ದಾರೆ. ಅದೇ ರೀತಿಯಲ್ಲಿ ಎರಡು ಗಂಡುಮಕ್ಕಳು ಮತ್ತು ಎರಡು ಹೆಣ್ಮಕ್ಕಳು ಸಿರಿಯಾದಲ್ಲಿ ಇದ್ದಾರೆ. ಹಿಬಾ ಜಾಬಿ ಇಲ್ಲಿ ಜಮಾಅತಿನ ಸೇವೆಯಲ್ಲಿ, ವಿಶೇಷವಾಗಿ ಪುಸ್ತಕಗಳ ತರ್ಜುಮೆಯಲ್ಲಿ ಉತ್ತಮ ಸಲಹೆಗಳನ್ನು ನೀಡುತ್ತಿರುತ್ತಾಳೆ ಮತ್ತು ಕೆಲಸ ಮಾಡುತ್ತಾಳೆ. ಅದೇ ರೀತಿಯಲ್ಲಿ ಮಿಯಾ ತಾಹಿರ್ ಬಿಲಾಲ್ ಸಹ ತರ್ಜುಮೆ ಮಾಡುತ್ತಾರೆ. ಅವರ ಸಹಾಯ ಸಹ ಇವಳು ಮಾಡುತ್ತಾಳೆ. ಅಲ್ಲಾಹನು ಅವರ ನಿಷ್ಠೆ ಮತ್ತು ಪ್ರಾಮಾಣಿಕತೆಯಲ್ಲಿ ಅನುಗ್ರಹ ವರ್ಷಿಸಲಿ. ಅವರ ಜ್ಞಾನವನ್ನು ಸಹ ವರ್ಧಿಸಲಿ.

ಅವರ ಮಗಳು ಲಬನಿ ಜಾಬಿ ಸಾಹಿಬ್ ಬರೆಯುತ್ತಾರೆ: ನಮ್ಮನ್ನು ಅವರು ನವೀನಾಚಾರಗಳನ್ನು ಮಾಡುವುದರಿಂದ ತಡೆಯುತ್ತಿದ್ದರು. ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಲು ಮತ್ತು ತಬ್ಲೀಗ್ ಮಾಡಲು ಉಪದೇಶಿಸುತ್ತಿದ್ದರು. ಬಡವರಿಗಾಗಿ ತುಂಬ ಖರ್ಚು ಮಾಡುತ್ತಿದ್ದರು. ಅವರ ಮೂಲಕ ಸಿರಿಯ ಮತ್ತು ಲಬ್‌ನಾನಿನಲ್ಲಿ ಹಲವರು ಬೈಅತ್ ನಡೆಯಿತು. ಅವರಲ್ಲಿ ಕ್ರೈಸ್ತರು ಇದ್ದರು. ಖಿಲಾಫತಿನೊಂದಿಗೆ ಸದಾ ಅಂಟಿಕೊಂಡಿರಲು ಮತ್ತು ಖಲೀಫರ ಉಪದೇಶಗಳನ್ನು ಅನುಸರಿಸಲು ಅವರು ಉಪದೇಶಿಸಿದ್ದರು. ತಬ್ಲೀಗಿನ ಕಾರ್ಯದಲ್ಲಿ ಸುಸ್ತಾಗದಿರಲು, ಎಲ್ಲ ಕೆಲಸಗಳನ್ನು ದುಆದೊಂದಿಗೆ ಮಾಡಲು ಮತ್ತು ಸತ್ಯದ ಮಾರ್ಗದಲ್ಲಿ ಯಾವುದೇ ದೌರ್ಜನ್ಯದ ಪರಿವೆ ಮಾಡದಿರಲು ಅವರು ಉಪದೇಶಿಸಿದ್ದರು. ಲಬ್‌ನಾನಿನ ಸದರ್ ಜಮಾಅತಾದ ಉಮರುಲ್ ಉಮ್ಮ್ ಸಾಹಿಬ್ ಬರೆಯುತ್ತಾರೆ: ಅಹ್ಮದಿಯ್ಯತಿನ ಬಗ್ಗೆ ತಿಳಿಯುವುದಕ್ಕೆ ಮುಂಚೆ ನಾನು ಸಲೀಮುಲ್ ಜಾಬಿ ಸಾಹಿಬರ ಪುಸ್ತಕಗಳನ್ನು ಓದುತ್ತಿದ್ದೆವು. ಅದರಲ್ಲಿ ಇಮಾಮ್ ಮಹ್‌ದಿಯ ಆವಿರ್ಭಾವ ಮತ್ತು ಜಮಾಅತಿನ ಕಡೆಗೆ ಸೂಚನೆ ಇರುತ್ತಿತ್ತು. ನಾವು ಇದೆಲ್ಲ ಓದಿದ ನಂತರ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮತ್ತು ಅವರ ಜಮಾಅತಿನ ಬಗ್ಗೆ ಹೇಳಿ ಬೈಅತ್ ಮಾಡಲು ಹೇಳುತ್ತಿದ್ದರು. ಇದು ಅವರ ಒಂದು ರೀತಿಯಾಗಿತ್ತು. ಎಲ್ಲ ಕಡೆ ಇದು ಪ್ರಯೋಜನಕಾರಿ ಆಗಬೇಕೆಂದಿಲ್ಲ. ಹೇಗಿದ್ದರೂ ಅವರು ಹೀಗೆ ತಬ್‌ಲೀಗ್ ಮಾಡಿದರು. ಹಲವರನ್ನು ತಬ್ಲೀಗ್ ಮಾಡಿ ಅಹ್ಮದಿಯರನ್ನಾಗಿ ಮಾಡಿದರು. ಈಗ ನನ್ನ ಪುಸ್ತಕಗಳನ್ನು ಬಿಟ್ಟು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಖಲೀಫರ ಪುಸ್ತಕಗಳನ್ನು ಓದಿರಿ ಎಂದು ಹೇಳುತ್ತಿದ್ದರು.

ಬರೆಯುತ್ತಾರೆ: ಲಬನಾನಿನ ಶುರುವಿನ ಅಹ್ಮದಿಯರಾದ ನಾವೆಲ್ಲರೂ ಸಲೀಂ ಹಸನುಲ್ ಜಾಬಿ ಸಾಹಿಬರ ಮೂಲಕ ಬೈಅತ್ ಮಾಡಿದ್ದುವು. ನಾವು ಅವರ ಈ ಔದಾರ್ಯವನ್ನು ಒಪ್ಪುತ್ತೇವೆ. ನಾವು ಅವರಿಗೆ ಕೃತಜ್ಞತೆ ಅರ್ಪಸುತ್ತೇವೆ ಮತ್ತು ಅವರಿಗಾಗಿ ದುಆ ಮಾಡುತ್ತೇವೆ.

ಈಗ ಕೆನಡದಲ್ಲಿ ವಾಸವಾಗಿರುವ ಸಿರಿಯಾದವರಾದ ಮುತಝ್ಝಿಲ್ ಖಝ್ಝುಕ್ ಸಾಹಿಬರು ಬರೆಯುತ್ತಾರೆ: ನಾನು ಸಿರಿಯಾದಲ್ಲಿ ಲೋಕಲ್ ಜಮಾಅತಿನ ಸದರ್ ಆಗಿದ್ದಾಗ ಹಲವು ಬಾರಿ ಅಲ್‌ಜಾಬಿ ಸಾಹಿಬರನ್ನು ಭೇಟಿಯಾಗಿದ್ದೆ. "ಖಿಲಾಫತಿನ ಅಡಿಯಲ್ಲಿ ನನಗೆ ಮರಣ ಬರಲಿ" ಎಂದು ಖಿಲಾಫತಿನ ಬಗ್ಗೆ ಪ್ರಸ್ತಾಪಿಸಲ್ಪಡುವಾಗ ಅವರು ಹೆಚ್ಚಾಗಿ ಹೇಳುತ್ತಿದ್ದರು:

ಅರಬೀ ಡೆಸ್ಕಿನ ಮುಬಲ್ಲಿಗ್‌ರಾದ ಮೀರ್ ಅಂಜುಮ್ ಪರ್‌ವೇಝ್ ಸಾಹಿಬರು ಹೇಳುತ್ತಾರೆ: ಖಿಲಾಫತಿನ ವ್ಯವಸ್ಥೆಗೆ ಸಂಬಂಧಿಸಿ ಏನಾದರು ಸಂಗತಿ ಮುಂದೆ ಬಂದರೆ ಅವರು ಪೂರ್ಣವಾಗಿ ಅನುಸರಿಸುತ್ತಿದ್ದರು. ಜಮಾಅತಿನ ವ್ಯವಸ್ಥೆ ನನಗೆ ಏನೇ ಆಜ್ಞೆ ಕೊಟ್ಟರೂ ನಾನು ಅದನ್ನು ಅನುಸರಿಸುವೆನು ಎಂದು ಬಹಿರಂಗವಾಗಿ ಹೇಳುತ್ತಿದ್ದರು. 2011ರಲ್ಲಿ ಸಿರಿಯಾದಿಂದ ಜಲಸಾ ಸಾಲಾನ ಯು.ಕೆ.ಗೆ ಬಂದಿದ್ದರು. ಖಲೀಫರ ಪಾದದಲ್ಲಿ ನನ್ನ ಜೀವ ಹೋಗಲು ನಾನು ಇಚ್ಛಿಸುತ್ತೇನೆ. ನನಗೆ ಇದಕ್ಕಿಂತ ದೊಡ್ಡ ಗೌರವವಿಲ್ಲ ಎಂದು ಹೇಳುತ್ತಿದ್ದರು. ಜಾಬಿ ಸಾಹಿಬರ ಮೂಲಕ ಹಲವರು ಅಹ್ಮದಿಯ್ಯತನ್ನು ಸ್ವೀಕರಿಸಿದರು. ಅವರಲ್ಲಿ ಹೆಚ್ಚಿನವರು ಜಮಾಅತ್ ಮತ್ತು ಖಿಲಾಫತಿನ ನಿಷ್ಠಾವಂತ ಮತ್ತು ಪ್ರಾಮಾಣಿಕರಾದ ಅಹ್ಮದಯರಾಗಿದ್ದಾರೆ. ನಾವು ಅವರಿಂದ ತುಂಬ ಕಲಿತ್ತಿದ್ದೇವೆ ಮತ್ತು ಅವರ ಮೂಲಕ ಅಹ್ಮದಿಯ್ಯತ್ ಸ್ವೀಕರಿಸಿದೆವು ಎಂದು ಹಲವರು ನನಗೆ ಪತ್ರ ಬರೆದು ತಿಳಿಸಿದ್ದಾರೆ. ಜಾಬಿ ಸಾಹಿಬರು ಹೇಳಿದ್ದರು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿವರ್ಯರು ಹೇಗಿದ್ದರು ಎಂದು ಅರಬ್ ಜನರು ತಿಳಿಯುವಂತಾಗಲು ಹಝ್ರತ್ ಗ್ಹುಲಾಂ ರಸೂಲ್ ರಾಜೀಕಿ ಸಾಹಿಬರು ಅವರ ಗ್ರಂಥವಾದ ಹಯಾತೆ ಖುದ್‌ಸಿಯನ್ನು ಅರಬಿ ಭಾಷೆಯಲ್ಲಿ ತರ್ಜುಮೆ ಮಾಡಲು ನನ್ನೊಡನೆ ಸ್ವತಃ ಹೇಳಿದ್ದರು. ಹೀಗೆ ಅವರು ಹಯಾತೆ ಖುದ್‌ಸಿಯ ಅರಬಿ ತರ್ಜುಮೆ ಸಹ ಮಾಡಿದ್ದರು. ಅರಬಿ ಅವರ ಭಾಷೆಯೇ ಆಗಿತ್ತು.ಅದರೊಂದಿಗೆ ಅವರಿಗೆ ಉರ್ದು ಸಹ ಗೊತ್ತಿತ್ತು. ಉತ್ತಮ ರೀತಿಯಲ್ಲಿ ಮಾತನಾಡುತ್ತಿದ್ದರು. ಫಾರಸಿ ಭಾಷೆ ಸಹ ಗೊತ್ತಿತ್ತು.ಆಂಗ್ಲ ಭಾಷೆ ಅಲ್ಪಸ್ವಲ್ಪ ತಿಳಿದಿದ್ದರು. 2005ರ ಜಲಸಾದಲ್ಲಿ ನಾನು ಖಾದಿಯಾನಿಗೆ ಹೋದಾಗ ಅಲ್ಲಿ ಅವರು ನನ್ನನ್ನು ಭೇಟಿಯಾಗಿದ್ದರು. ಸ್ವಲ್ಪ ಸಮಯದ ಭೇಟಿಯಾಗಿತ್ತು. ಆದರೆ ಬಹಳ ವಿನಯದಿಂದ ಭೇಟಿಯಾದರು. ಅನಂತರ ಯು.ಕೆ.ಜಲಸಾಗೆ ಬಂದಾಗ ನನ್ನನ್ನು ಬಹಳ ವಿನಯದಿಂದ ಭೇಟಿಯಾದರು. ಅವರು ನನ್ನೊಡನೆ ಹೀಗೆ ಹೇಳಿದ್ದರು: ಅಹ್ಮದಿಯಾ ಖಿಲಾಫತಿನ ಮೇಲೆ ನನಗೆ ಪೂರ್ಣ ವಿಶ್ವಾಸವಿದೆ. ಸಂಪೂರ್ಣವಾಗಿ ಅದನ್ನು ಅನುಸರಿಸುತ್ತೇನೆ ಮತ್ತು ಅದರ ಮೇಲೆ ಸಂಪೂರ್ಣವಾಗಿ ದೃಢವಿಶ್ವಾಸ ಹೊಂದಿರುವೆನು. ಜಮಾಅತಿನ ವ್ಯವಸ್ಥೆಯೊಂದಿಗೆ ಸದಾ ಅಂಟಿಕೊಂಡಿರಲು ನನಗಾಗಿ ದುಆ ಮಾಡಿರಿ ಎಂದು. ಅಲ್ಲಾಹನು ಅವರ ಮಕ್ಕಳು ಮತ್ತು ಸಂತಾನ ಪರಂಪರೆಯನ್ನು ಸಂಪೂರ್ಣ ನಿಷ್ಠೆಯಿಂದ ಜಮಾಅತ್‌ನೊಂದಿಗೆ ಮತ್ತು ಖಿಲಾಫತಿನೊಂದಿಗೆ ಜೋಡಿಸಲಿ. ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಈಗ ಜುಮಾ ನಮಾಝ್ ನಂತರ ನಾನು ಹೇಳಿದಂತೆ ಇವರೆಲ್ಲರ ನಮಾಝ್ ಜನಾಝ್ ಗ್ಹಾಇಬ್ ನಿರ್ವಹಿಸುವೆನು.

*****************

**ಮಹೋನ್ನತನಾದ ದೇವ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ನಮ್ಮ ದೇವನೇ ನಮ್ಮ ಸ್ವರ್ಗ. ನಮ್ಮ ಅತ್ಯುನ್ನತ ಸಂತೋಷಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ನೋಡಿರುವೆವು ಮತ್ತು ಪ್ರತಿಯೊಂದು ಸೌಂದರ್ಯವನ್ನು ನಾವು ಅವನಲ್ಲಿ ಕಂಡಿರುವೆವು. ಜೀವವನ್ನು ಬಲಿಯರ್ಪಿಸುವುದರಿಂದ (ದೇವನೆಂಬ) ಈ ಸಂಪತ್ತು ಸಿಗಬಹುದಾದರೆ ಹಾಗೆ ಪಡೆಯಲು ಅದು (ಆ ಸಂಪತ್ತು) ಅರ್ಹವಾಗಿದೆ. ಒಬ್ಬನು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಿಂದ ಪಡೆಯಬಹುದಾಗಿದ್ದರೆ ಹಾಗೆ ಖರೀದಿಸಲು ಯೋಗ್ಯವಾದ ಮಾಣಿಕ್ಯ ಇದಾಗಿದೆ. ಎಲೈ ಭಾಗ್ಯಹೀನರೇ, ನೀವು ಈ ಕಾರಂಜಿಯ ಕಡೆಗೆ ಓಡಿ ಬನ್ನಿರಿ. ಇದು ನಿಮ್ಮ ಬಾಯಾರಿಕೆಯನ್ನು ನೀಗಿಸುವುದು. ಇದು ನಿಮ್ಮನ್ನು ರಕ್ಷಿಸುವಂತಹ ಜೀವಜಲವನ್ನೀಯುವ ಕಾರಂಜಿಯಾಗಿದೆ. ನಾನೇನು ಮಾಡಲಿ? ಈ ಶುಭವಾರ್ತೆಯನ್ನು ಜನಹೃದಯಗಳಲ್ಲಿ ಹೇಗೆ ನೆಲೆವೂರುವಂತೆ ಮಾಡಲಿ? ಇವನೇ ನಿಮ್ಮ ದೇವನು ಎಂದು ಜನರು ಆಲಿಸುವಂತೆ ಮಾಡಲು ಯಾವ ಡೋಲು ಬಾರಿಸಿ ಪೇಟೆಗಳಲ್ಲಿ ಡಂಗುರ ಸಾರಲಿ? ಜನರು ಕಿವಿಗೊಟ್ಟು ಕೇಳುವಂತೆ ಮಾಡಲು ನಾನು ಯಾವ ಮದ್ದಿನಿಂದ ಚಿಕಿತ್ಸೆ ನಡೆಸಲಿ? ನೀವು ದೇವನಿಗೆ ಸೇರಿದವರಾಗುವಿರಾದರೆ, ದೇವನು ನಿಮ್ಮವನೇ ಆಗುವನು ಎಂದು ದೃಢವಾಗಿ ಅರಿತುಕೊಳ್ಳಿರಿ."

***(ಕಿಶ್ತೀ ನೂಹ್; ರೂಹಾನೀ ಖಝಾಇನ್ ಸಂಪುಟ 19, ಪುಟ 21 – 22)***

# ಖುತ್‌ಬ ಜುಮುಅ

**ಜನರು ಲೋಕದ ಕೊಳಕುಗಳಿಂದ ಹೊರಬಂದು ನೈಜ ಪರಿಶುದ್ಧಿಯನ್ನು ಪಡೆದುಕೊಂಡು ಮಲಕುಗಳ ರೀತಿಯ ಜೀವನವನ್ನು ಸಾಗಿಸಬೇಕೆಂಬುದಾಗಿದೆ ಈ ಜಮಾಅತಿನ ಸ್ಥಾಪನೆಯ ಯಥಾರ್ಥ ಉದ್ದೇಶವೆಂದು ಅವರು ಹೇಳಿದರು.**

**ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮರಣದ ಕುರಿತು ಲೋಕದಲ್ಲಿ ನಡೆದ ಮೊದಲ ಒಮ್ಮತಾಭಿಪ್ರಾಯವಾಗಿತ್ತು. ಅದರೊಂದಿಗೆ ಹಝ್ರತ್ ಈಸಾ ಮಸೀಹರ ಮರಣದ ಬಗ್ಗೆ ಸಹ ಸ್ಪಷ್ಟವಾದ ತೀರ್ಮಾನವಾಯಿತು.**

**"ನನ್ನ ಬರುವಿಕೆಗೆ ಎರಡು ಉದ್ದೇಶಗಳಿವೆ. ಮುಸ್ಲಿಮರಿಗಾಗಿ ಏನೆಂದರೆ, ಅವರು ನೈಜ ದೇವಭಕ್ತಿ ಮತ್ತು ಪರಿಶುದ್ಧತೆಯಲ್ಲಿ ನೆಲೆನಿಲ್ಲಬೇಕೆಂಬುವುದಾಗಿದೆ ಎರಡನೇ ಉದ್ದೇಶ ಶಿಲುಬೆಯನ್ನು ಮುರಿಯುವುದು ಮತ್ತು ಅವರ ನಕಲಿ ದೇವನನ್ನು ಇಲ್ಲವಾಗಿಸುವುದು." (ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್)**

**ಅಹ್ಮದಿಯರು ಎಲ್ಲರಿಗಿಂತ ಹೆಚ್ಚಾಗಿ ಖಾತಮುನ್ನಬಿಯ್ಯೀನ್ ಎಂಬ ಪದವಿಯ ಬಗ್ಗೆ ತಿಳಿದವರೆಂದು ಈ ಬುದ್ಧಿಹೀನರಿಗೆ ಗೊತ್ತಿಲ್ಲ. ಈ ಪರಿಜ್ಞಾನ ನಮಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನೀಡಿರುವರು.**

**ನಾನು ಸತ್ಯವಾಗಿಯೂ ಹೇಳುತ್ತೇನೆ ಹಾಗೂ ಅಲ್ಲಾಹನ ಮೇಲೆ ಆಣೆ ಹಾಕಿ ಹೇಳುತ್ತೇನೆ, ನಾನು ಮತ್ತು ನನ್ನ ಜಮಾಅತಿನ ಜನರು ಮುಸ್ಲಿಮರಾಗಿರುವೆವು. ಒಬ್ಬ ನೈಜ ಮುಸ್ಲಿಮ್ ವಿಶ್ವಾಸವಿಡಬೇಕಾದ ರೀತಿಯಲ್ಲೇ ನಾವು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಮತ್ತು ಪವಿತ್ರ ಖುರ್‌ಆನನ್ನು ನಂಬುತ್ತೇವೆ. ಒಂದು ಅಣುವಿನಷ್ಟಾದರೂ ಇಸ್ಲಾಮಿನ ಹೊರಗೆ ಹೆಜ್ಜೆ ಹಾಕುವುದು ನಾಶಕ್ಕೆ ಕಾರಣವಾಗಿಸುವುದು ಎಂದು ನಾನು ದೃಢವಾಗಿ ನಂಬುತ್ತೇನೆ. ಸಮೃದ್ಧಿಗಳೂ ಅನುಗ್ರಹಗಳೂ ಹಾಗೂ ಅಲ್ಲಾಹನ ಸಾಮೀಪ್ಯವೂ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಯಥಾರ್ಥ ರೀತಿಯಲ್ಲಿ ಅನುಸರಿಸುವುದರಿಂದ ಹಾಗೂ ಅವರನ್ನು ಪರಿಪೂರ್ಣವಾಗಿ ಪ್ರೀತಿಸುವುದರಿಂದ ಮಾತ್ರವೇ ಲಭಿಸುವುದು. ಅನ್ಯಥಾ ಲಭಿಸಲಾರದು ಎಂಬುದು ನನ್ನ ವಿಶ್ವಾಸವಾಗಿದೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **31-07-2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

إِيَّاكَ نَعْبُدُ وَإِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಇಂದು ಬೆಳಿಗ್ಗೆ ನಾವು ಈದ್ ಸಹ ನಿರ್ವಹಿಸಿದೆವು ಹಾಗೂ ಇಂದು ಜುಮಾ ಸಹ ಇದೆ. ಈದ್ ಮತ್ತು ಜುಮಾ ಒಂದೇ ದಿನ ಬರುವುದಾದರೆ, ಜುಮಾ ನಮಾಝ್ ಬದಲಿಗೆ ಝುಹರ್ ನಮಾಝ್ ಅನುಷ್ಠಿಸಲು ಇಚ್ಛಿಸುವವರಿಗೆ ಅದರ ಅನುಮತಿ ಇದೆ ಎಂಬ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿರ್ದೇಶನವಿದೆ. ಆದರೆ ಅದರ ಯಥಾರ್ಥ ಸಂದರ್ಭ ಬಂದಾಗ ನಾವು ಜುಮಾ ನಿರ್ವಹಿಸುತ್ತೇವೆ ಎಂದು ಹಝ್ರತ್ ಪೈಗಂಬರರು ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳುತ್ತಾ ಜುಮಾ ನಿರ್ವಹಿಸಿದರು. (ಸನನ್ ಇಬ್ನೆ ಮಾಜ, ಕಿತಾಬ್ ಅಖಾಮತಿಸ್ಸಲಾತ್, ಹದೀಸ್-1310,1311,1312)

ಆದ್ದರಿಂದ ಝುಹರ್ ನಮಾಝ್ ನಿರ್ವಹಿಸಲು ಇಚ್ಛಿಸುವವರು ಜಮಾಅತಾಗಿ ನಿರ್ವಹಿಸಲಿ, ಜುಮಾ ನಡೆಸಬೇಕಾಗಿಲ್ಲ ಎಂದು ನಾನು ಅಮೀರ್ ಸಾಹಿಬರೊಡನೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ನಿರ್ದೇಶನದ ಬೆಳಕಿನಲ್ಲಿ ಹೇಳಿದ್ದೆ. ಅದಲ್ಲದೆ ಈಗಿನ ಸ್ಥಿತಿಯಲ್ಲಿ ಅಧಿಕ ಜನರು ಮಸೀದಿಯಲ್ಲಿ ಬಂದು ಸೇರಲು ಸಾಧ್ಯವೂ ಇಲ್ಲ. ಎಲ್ಲರೂ ಮನೆಯಲ್ಲೇ ಇದ್ದಾರೆ. ಮನೆಯಲ್ಲಿ ಪುರಸೊತ್ತಿದ್ದರೆ ಮುಂಚೆ ಜುಮಾ ನಿರ್ವಹಿಸುತ್ತಿದ್ದ ಹಾಗೆಯೇ ಈಗಲೂ ನಿರ್ವಹಿಸಬಹುದಾಗಿದೆ. ಅದಕ್ಕೆ ಸೌಕರ್ಯವಿಲ್ಲದವರು ಝುಹರ್ ನಮಾಝ್ ನಿರ್ವಹಿಸಬಹುದಾಗಿದೆ. ಆದರೆ ನಾವು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಾಡಿದ್ದನ್ನು ಅನುಸರಿಸುತ್ತಾ ಇಂದು ಜುಮಾ ನಿರ್ವಹಿಸುತ್ತಿದ್ದೇವೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರ ಕಾಲದಲ್ಲಿ ಒಂದು ಬಾರಿ ಈದುಲ್ ಅಝ್‌ಹಾ ಮತ್ತು ಜುಮಾ ಒಂದೇ ದಿನ ಬಂದಾಗ, ಝುಹರ್ ನಮಾಝ್ ಅನುಷ್ಠಿಸಬೇಕು, ಜುಮಾ ನಡೆಯಬಾರದು ಎಂದೆಲ್ಲ ಹೇಳಿ ಹಲವು ಜನರು ತಮ್ಮದಾದ ಪುರಾವೆಗಳನ್ನು ಮುಂದಿರಿಸಿದರು. ಇವರಿಗೆ ಬಹಳ ಉತ್ತಮವಾದ ಜವಾಬು ನೀಡುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು ಹೇಳುದರು: ನಮ್ಮ ಪರಿಪಾಲಕನಾದ ಅಲ್ಲಾಹನು ಎಷ್ಟು ಉದಾರಿಯಾಗಿರುವನು, ಅವನು ನಮಗೆ ಎರಡು ಈದ್‌ಗಳನ್ನು ದಯಪಾಲಿಸಿದನು. ಒಬ್ಬನಿಗೆ ತುಪ್ಪ ಹಾಕಿದ ಎರಡು ಚಪಾತಿಗಳು ಸಿಗುವಾಗ, ಅದರಲ್ಲಿ ಒಂದನ್ನು ತಿರಸ್ಕರಿಸುವನೇ? ಏನಾದರೂ ಅನಿವಾರ್ಯತೆ ಇಲ್ಲವಾದರೆ, ಅವನು ಎರಡನ್ನೂ ಸ್ವೀಕರಿಸುವನು. ಆದುದರಿಂದ ಯಾರಾದರೂ ಜುಮಾ ನಿರ್ವಹಿಸದೇ ಝುಹರ್ ನಮಾಝನ್ನು ಅನುಷ್ಠಿಸುವರಾದರೆ, ಅವರನ್ನು ದೂಷಿಸಬಾರದು ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಪದೇಶಿಸಿರುವರು. ಈದ್ ನಮಾಝ್ ಮತ್ತು ಜುಮಾ ನಮಾಝ್, ಎರಡನ್ನೂ ನಿರ್ವಹಿಸುವ ಸೌಭಾಗ್ಯ ಲಭಿಸಿದವನನ್ನು ಇತರರು ಆಕ್ಷೇಪಿಸಲೂ ಬಾರದು. ಅನುಮತಿಯಿಂದ ಪ್ರಯೋಜನ ಪಡೆಯಲಿಲ್ಲ ಎಂದು ಹೇಳಿ ಮೂದಲಿಸಬಾರದು. ಅನುಮತಿ ಇದ್ದರೂ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜುಮಾ ನಿರ್ವಹಿಸಿದ್ದಾಗಿ, ಅವರ ಚರ್ಯೆಯಿಂದ ನಮಗೆ ತಿಳಿದುಬರುತ್ತದೆ. (ಖುತ್ಬಾತೆ ಮಹ್ಮೂದ್, ಸಂಪುಟ-2, ಪುಟ-208-210, ಖುತ್‌ಬ ಈದುಲದ ಅಝ್‌ಹಾ 11-02-1938)

ಹೇಗಿದ್ದರೂ, ನಾನು ಹೇಳಿದಂತೆ ಇಂದು ನಾವು ಜುಮಾ ನಿರ್ವಹಿಸುತ್ತಿದ್ದೇವೆ, ಆದರೆ ಹ್ರಸ್ವವಾದ ಖುತ್‌ಬ ನೀಡುವೆನು. ಇದಕ್ಕಾಗಿ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲವು ಉಲ್ಲೇಖಗಳನ್ನು ತಂದಿದ್ದೇನೆ. ಅದರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಮ್ಮ ಆವಿರ್ಭಾವದ ಉದ್ದೇಶವನ್ನು ತಿಳಿಸಿರುವರು. ತನ್ನ ಜಮಾಅತ್ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬುವುದರ ಮತ್ತು ಯಥಾರ್ಥದಲ್ಲಿ ಅವರೇ ಜೀವಂತ ಪ್ರವಾದಿ ಎಂಬುದರ ಕುರಿತು ಜ್ಞಾನಭರಿತವಾಗಿ ವಿವರಿಸಿರುವರು ಹಾಗೂ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನ ಮತ್ತು ಪದವಿಯನ್ನು ಸಹ ಹೇಳಿರುವರು.

ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ ಕಾರಣ ನಾವು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನ ಮತ್ತು ಮಹಿಮೆಯನ್ನು ಕಡಿಮೆಗೊಳಿಸಿದ್ದೇವೆ ಎಂದು ಹೇಳಿ ವಿರೋಧಿಗಳು ನಮ್ಮ ಮೇಲೆ ಆರೋಪ ಹೊರಿಸುತ್ತಾರೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಸರಿನೊಂದಿಗೆ ಖಾತಮುನ್ನಬಿಯ್ಯೀನ್ ಎಂಬ ಪದ ಬರೆಯುವುದನ್ನು ಪಾಕಿಸ್ತಾನದ ಅಸೆಂಬ್ಲಿಯಲ್ಲಿ ಕಾನೂನು ಜಾರಿಗೊಳಿಸುವುದರ ಮೂಲಕ ಕಡ್ಡಾಯಗೊಳಿಸಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನಿರುವ ಪ್ರೇಮ ಮತ್ತು ಪದವಿಯನ್ನು ಶಕ್ತವಾದ ರೀತಿಯಲ್ಲಿ ಪ್ರಕಟಿಸಿದ್ದೇವೆ ಎಂದು ನಮ್ಮ ವಿರೋಧಿಗಳು ಭಾವಿಸುತ್ತಾರೆ. ಅವರ ಹೃದಯಗಳೂ ನಿಜವಾಗಿಯೂ ಈ ಮಾತಿಗೆ ಸಾಕ್ಷ್ಯವಹಿಸಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತ ಮಾದರಿಯನ್ನು ಅನುಸರಿಸುವುದಾದರೆ, ಅದು ಖಂಡಿತವಾಗಿಯೂ ಒಳ್ಳೆಯ ಸಂಗತಿಯಾಗಿದೆ. ಆದರೆ ಅವರ ನಡೆವಳಿಕೆಗಳಾದರೋ, ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೀಡಿದ್ದ ಪಾಠಗಳಿಂದ ಅವರನ್ನು ಬಹಳ ದೂರ ಸರಿಸಿವೆ. ಇವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲಘಟ್ಟಕ್ಕೆ ಮರಳಿಹೋಗಿ, ಪೈಗಂಬರರು ನೀಡಿದ ಮತ್ತು ಮಾಡಿ ತೋರಿಸಿದ ಆ ಅಧ್ಯಾಪನೆಗಳು ಮತ್ತು ಜೀವಿತ ಮಾದರಿಗಳನ್ನು ಅಳವಡಿಸುವರಾದರೆ, ಮುಸ್ಲಿಮರು ಮುಸ್ಲಿಮರನ್ನೇ ಕೊಲ್ಲುವರಂತಾಗುತ್ತಿರಲಿಲ್ಲ. ಬದಲಾಗಿ ಕಾಲಘಟ್ಟದ ಇಮಾಮ್ ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧರಾದ ದಾಸನ ಬೈಅತ್ ಮಾಡಲು ಓಡಿ ಬರುತ್ತಿದ್ದರು. ಖಾತಮುನ್ನಬಿಯ್ಯೀನ್ ಎಂಬ ಪದ ಬರೆಯುವುದನ್ನು ಕಡ್ಡಾಯಗೊಳಿಸುವುದರ ಮೂಲಕ ಮಹತ್ಕಾರ್ಯವನ್ನು ಮಾಡಿ, ಅಹ್ಮದಿಯರ ಮಾರ್ಗದಲ್ಲಿ ಒಂದು ತಡೆಯನ್ನು ಸೃಷ್ಟಿಸಿದ್ದೇವೆಂದು ಇವರು ಭಾವಿಸುತ್ತಾರೆ. ಆದರೆ ಅಹ್ಮದಿಯರು ಎಲ್ಲರಿಗಿಂತ ಹೆಚ್ಚಾಗಿ ಖಾತಮುನ್ನಬಿಯ್ಯೀನ್ ಎಂಬ ಪದವಿಯ ಬಗ್ಗೆ ತಿಳಿದವರೆಂದು ಈ ಬುದ್ಧಿಹೀನರಿಗೆ ಗೊತ್ತಿಲ್ಲ. ಈ ಪರಿಜ್ಞಾನ ನಮಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನೀಡಿರುವರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಾತುಗಳಲ್ಲಿರುವ ಶಕ್ತಿಯ ಸಮೀಪ ಕೂಡ ಇವರಿಗೆ ಬರಲಿಕ್ಕಾಗದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರತಿಯೊಂದು ಕ್ಷಣ ಮತ್ತು ಕರ್ಮಗಳಲ್ಲಿ ಹಝ್ರತ್ ಖಾತಮುಲ್ ಅಂಬಿಯಾ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲಿರುವ ಪ್ರೀತಿ ಮತ್ತು ಪ್ರೇಮದ ಪ್ರಕಟಣೆಗಳು ಇವೆ. ಈ ಜನರ ಯೋಚನೆ ಕೂಡ ಅಲ್ಲಿಯ ವರೆಗೆ ತಲುಪಲಿಕ್ಕಿಲ್ಲ. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹಲವಾರು ಉಪದೇಶಗಳೂ ಲಿಖಿತಗಳೂ ಹೇಳಿಕೆಗಳೂ ಇವೆ. ಈಗ ನಾನು ಎರಡು ಮೂರನ್ನು ಉದಾಹರಣೆಗಾಗಿ ಮುಂದಿರಿಸುತ್ತೇನೆ. ತಮ್ಮ ನಿಯೋಗದ ಉದ್ದೇಶ ಮತ್ತು ಜಮಾಅತಿನ ಅಭಿವೃದ್ಧಿಯನ್ನು ವಿವರಿಸುತ್ತಾ ಅವರು ತಮ್ಮ ವಿರೋಧಿಗಳನ್ನು ಸಂಬೋಧಿಸುತ್ತಾ ಹೇಳುತ್ತಾರೆ:

"ನನ್ನ ಬರುವಿಕೆಗೆ ಎರಡು ಉದ್ದೇಶಗಳಿವೆ. ಮುಸ್ಲಿಮರಿಗಾಗಿ ಏನೆಂದರೆ, ಅವರು ನೈಜ ದೇವಭಕ್ತಿ ಮತ್ತು ಪರಿಶುದ್ಧತೆಯಲ್ಲಿ ನೆಲೆನಿಲ್ಲಬೇಕೆಂಬುವುದಾಗಿದೆ. ಮುಸ್ಲಿಮ್ ಎಂಬ ಪದದಿಂದ ಅಲ್ಲಾಹನು ಉದ್ದೇಶಿಸುವಂತಹ ನೈಜ ಮುಸ್ಲಿಮ್ ಆಗಬೇಕು.ಎಂದರೆ, ಪರಿಪೂರ್ಣವಾದ ವಿಧೇಯತೆಯೊಂದಿಗೆ ಅಲ್ಲಾಹನ ಆಜ್ಞೆಗಳನ್ನು ಅನುಸರಿಸುವುದು." ಎರಡನೇ ಉದ್ದೇಶ ಕ್ರೈಸ್ತರಿಗೆ ಸಂಬಂಧಿಸಿರುವುದಾಗಿದೆ. ಅದೇನೆಂದರೆ, ಶಿಲುಬೆಯನ್ನು ಮುರಿಯುವುದು ಮತ್ತು ಅವರ ನಕಲಿ ದೇವನನ್ನು ಇಲ್ಲವಾಗಿಸುವುದು. ಅದನ್ನು ಲೋಕವು ಸಂಪೂರ್ಣವಾಗಿ ಮರೆತುಬಿಟ್ಟು ಏಕದೇವನನ್ನು ಆರಾಧಿಸುವಂತಾಗಬೇಕು. ನನ್ನ ಈ ಉದ್ದೇಶಗಳನ್ನು ನೋಡುತ್ತಾ ಈ ಜನರು ನನ್ನನ್ನೇಕೆ ವಿರೋಧಿಸುತ್ತಾರೆ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಕೇಳುತ್ತಾರೆ. ಹೃದಯದ ಕಾಪಟ್ಯ ಮತ್ತು ಲೌಕಿಕವಾದ ಕೊಳಕು ಜೀವಿತದೊಂದಿಗಿರುವ ಕೆಲಸಗಳ ವಿಷದಿಂದ ಸ್ವತಃ ನಾಶವಾಗುವನು ಎಂದು ಅವರು ನೆನಪಿಡಬೇಕು. ಎಂದರೆ ನನ್ನ ಹೃದಯಲ್ಲಿ ಏನಾದರೂ ಕಾಪಟ್ಯ ಅಥವಾ ಕೊಳಕು ಇದ್ದಿದ್ದರೆ, ಅಂತಹ ಕೆಲಸಗಳಲ್ಲಿ ಅನುಗ್ರಹವಿರುವುದಿಲ್ಲ. ಬದಲಾಗಿ ಅವುಗಳ ಪರಿಣಾಮಗಳು ಬೇಗನೇ ಹೊರಬಂದು ನಾಶ ಉಂಟಾಗುತ್ತದೆ. ಸುಳ್ಳುವಾದಿ ಎಂದಾದರೂ ಜಯಗಳಿಸುವನೇ? **ಇನ್ನಲ್ಲಾಹ ಮನ್ ಲಾ ಯಹ್‌ದಿ ಮನ್ ಹುವ ಮುಸ್ರಿಫುನ್ ಕಝ್ಝಾಬ್**. ಮಿತಿಮೀರಿ ವರ್ತಿಸುವವರಿಗೆ ಮತ್ತು ಕಠಿಣವಾದ ಸುಳ್ಳುವಾದಿಗೆ ಅಲ್ಲಾಹನು ಖಂಡಿತವಾಗಿಯೂ ಸನ್ಮಾರ್ಗ ನೀಡುವವನಲ್ಲ. **ಇನ್ನಲ್ಲಾಹ ಲಾ ಯಹ್‌ದಿ ಮನ್ ಹುವ ಮುಸ್ರಿಫುನ್ ಕಝ್ಝಾಬ್**. ಸುಳ್ಳುವಾದಿ ನಾಶಹೊಂದಲು ಅವನ ಸುಳ್ಳೇ ಸಾಕು. ಆದರೆ ಅಲ್ಲಾಹನ ವೈಭವ ಮತ್ತು ಅವನ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹಗಳನ್ನು ಪ್ರಕಟಿಸಲು ಮತ್ತು ಸಾಬೀತುಗೊಳಿಸಲು ಮಾಡುವ ಕಾರ್ಯಗಳನ್ನು ಹಾಗೂ ಅಲ್ಲಾಹನು ತನ್ನ ಕೈಯಿಂದಲೇ ನೆಟ್ಟ ಗಿಡದ ಸಂರಕ್ಷಣೆಯನ್ನು ಮಲಕುಗಳು ಎಂದರೆ ದೇವದೂತರು ಸ್ವತಃ ವಹಿಸುತ್ತಾರೆ. ಇದನ್ನು ಯಾರಿಗೆ ನಾಶಪಡಿಸಲು ಸಾಧ್ಯ? ಇದೊಂದು ಚಾಲಂಜ್ ಆಗಿದೆ; ಪಂಥಾಹ್ವಾನವಾಗಿದೆ. ಎಷ್ಟೇ ವಿರೋಧವಿದ್ದರೂ ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತಿನ ಪ್ರಗತಿ ಆಗುತ್ತಾ ಇದೆ. ಹೇಳುತ್ತಾರೆ: "ನನ್ನ ಜಮಾಅತ್ ಕೇವಲ ವ್ಯಾಪಾರ ವಹಿವಾಟು ಆಗಿದ್ದರೆ, ಅದು ಸಂಪೂರ್ಣವಾಗಿ ನಾಶವಾಗುವುದು. ಆದರೆ ಇದು ಅಲ್ಲಾಹನ ಕಡೆಯಿಂದಲೇ ಆಗಿದ್ದರೆ, ಖಂಡಿತವಾಗಿಯೂ ಅಲ್ಲಾಹನ ಕಡೆಯಿಂದಲೇ ಆಗಿರುವಾಗ, ಲೋಕವೆಲ್ಲ ಇದನ್ನು ವಿರೋಧಿಸಿದರೂ ಇದು ಬೆಳೆಯುವುದು, ಹರಡುವುದು ಹಾಗೂ ದೇವದೂತರು ಇದನ್ನು ಸಂರಕ್ಷಿಸುವರು.ನನ್ನೊಂದಿಗೆ ಒಬ್ಬನೇ ಒಬ್ಬ ವ್ಯಕ್ತಿಯಿಲ್ಲವಾದರೂ, ಯಾರ ಸಹಾಯವಿಲ್ಲವಾದರೂ ನನ್ನ ಜಮಾಅತ್ ವಿಜಯಿಸುವುದು ಎಂದು ನಾನು ದೃಢವಾಗಿ ನಂಬುತ್ತೇನೆ. ವಿರೋಧವನ್ನು ನಾನು ಗಮನಸುವುದಿಲ್ಲ. ಅದು ಇರುತ್ತದೆ. ಅದನ್ನು ನಾನು ನನ್ನ ಜಮಾಅತಿನ ಅಭಿವೃದ್ಧಿಗೆ ಆವಶ್ಯವೆಂದು ತಿಳಿದಿರುವೆನು. ಅಲ್ಲಾಹನ ಯಾವುದಾದರೂ ಪ್ರವಾದಿ ಅಥವಾ ಖಲೀಫ ಭೂಮಿಗೆ ಬರುವಾಗ ಜನರು ಅವರನ್ನು ಸುಮ್ಮನೆ ಅಂಗೀಕರಿಸುವ ರೀತಿ ಎಂದೂ ಉಂಟಾಗಿಲ್ಲ. ಲೋಕದ ಸ್ಥಿತಿ ವಿಚಿತ್ರವೇ ಆಗಿದೆ. ಮನುಷ್ಯನು ಎಷ್ಟೇ ಸತ್ಯಸಂಧ ಸ್ವಭಾವ ಹೊಂದಿದವನಾಗಿದ್ದರೂ ಇತರರು ಅವನ ಹಿಂದೆ ಬೀಳುತ್ತಾರೆ.ಅವರನ್ನು ಆಕ್ಷೇಪಿಸುತ್ತಿರುತ್ತಾರೆ. ನಮ್ಮ ಜಮಾಅತ್ ಅಲ್ಲಾಹನ ಅನುಗ್ರಹದಿಂದ ಅಸಾಮಾನ್ಯವಾದ ರೀತಿಯಲ್ಲಿ ಪ್ರಗತಿ ಹೊಂದುತ್ತಿದೆ.

ಇಂದು ಇನ್ನೂರಕ್ಕಿಂತ ಅಧಿಕ ದೇಶಗಳಲ್ಲಿ ನಿಷ್ಠಾವಂತರು, ಅಂದರೆ ಬೈಅತ್ ಮಾಡಿರುವವರು ಇರುವುದಾಗಿ ನಾವು ನೋಡುತ್ತೇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದ ಕಾಲದಲ್ಲಿ ನೂರಾರು ಜನರಿದ್ದರು. ಈಗ ಅಲ್ಲಾಹನ ಅನುಗ್ರಹದಿಂದ ಲಕ್ಷಗಟ್ಟಲೆ ಬೈಅತ್‌ಗಳು ಪ್ರತಿವರ್ಷ ಆಗುತ್ತಿವೆ. ಜನರು ಲೋಕದ ಕೊಳಕುಗಳಿಂದ ಹೊರಬಂದು ನೈಜ ಪರಿಶುದ್ಧಿಯನ್ನು ಪಡೆದುಕೊಂಡು ಮಲಕುಗಳ ರೀತಿಯ ಜೀವನವನ್ನು ಸಾಗಿಸಬೇಕೆಂಬುದಾಗಿದೆ ಈ ಜಮಾಅತಿನ ಸ್ಥಾಪನೆಯ ಯಥಾರ್ಥ ಉದ್ದೇಶವೆಂದು ಅವರು ಹೇಳಿದರು. (ಮಲ್‌ಫಾಝಾತ್, ಸಂಪುಟ-8, ಪುಟ-148-149)

ಆದ್ದರಿಂದ ನಾವು ಅವರ ಉಪದೇಶಗಳಂತೆ ನಮ್ಮ ಅವಸ್ಥೆಗಳನ್ನು ಇಸ್ಲಾಮಿನ ಸರಿಯಾದ ಪಾಠಗಳ ಪ್ರಕಾರ ಮಾಡುವುದು ನಮ್ಮ ಜವಾಬ್ದಾರಿಯಾಗಿದೆ. ಶತ್ರುಗಳ ಬಾಯನ್ನು ಮುಚ್ಚಲು ಮತ್ತು ಅವರ ಮೇಲೆ ವಿಜಯ ಸಾಧಿಸಲು ಇದೇ ಸರಿಯಾದ ಮಾರ್ಗವಾಗಿದೆ.

ಅನಂತರ ತನ್ನ ಜಮಾಅತಿನ ಪರಿಪಕ್ವವಾದ ವಿಶ್ವಾಸ ಮತ್ತು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಇರುವ ನೈಜ ಅನುಸರಣೆಯನ್ನು ಘೋಷಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ನಾನು ಸತ್ಯವಾಗಿಯೂ ಹೇಳುತ್ತೇನೆ ಹಾಗೂ ಅಲ್ಲಾಹನ ಮೇಲೆ ಆಣೆ ಹಾಕಿ ಹೇಳುತ್ತೇನೆ, ನಾನು ಮತ್ತು ನನ್ನ ಜಮಾಅತಿನ ಜನರು ಮುಸ್ಲಿಮರಾಗಿರುವೆವು. ಒಬ್ಬ ನೈಜ ಮುಸ್ಲಿಮ್ ವಿಶ್ವಾಸವಿಡಬೇಕಾದ ರೀತಿಯಲ್ಲೇ ನಾವು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಮತ್ತು ಪವಿತ್ರ ಖುರ್‌ಆನನ್ನು ನಂಬುತ್ತೇವೆ. ಒಂದು ಅಣುವಿನಷ್ಟಾದರೂ ಇಸ್ಲಾಮಿನ ಹೊರಗೆ ಹೆಜ್ಜೆ ಹಾಕುವುದು ನಾಶಕ್ಕೆ ಕಾರಣವಾಗಿಸುವುದು ಎಂದು ನಾನು ದೃಢವಾಗಿ ನಂಬುತ್ತೇನೆ. ಸಮೃದ್ಧಿಗಳೂ ಅನುಗ್ರಹಗಳೂ ಹಾಗೂ ಅಲ್ಲಾಹನ ಸಾಮೀಪ್ಯವೂ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಯಥಾರ್ಥ ರೀತಿಯಲ್ಲಿ ಅನುಸರಿಸುವುದರಿಂದ ಹಾಗೂ ಅವರನ್ನು ಪರಿಪೂರ್ಣವಾಗಿ ಪ್ರೀತಿಸುವುದರಿಂದ ಮಾತ್ರವೇ ಲಭಿಸುವುದು. ಅನ್ಯಥಾ ಲಭಿಸಲಾರದು ಎಂಬುದು ನನ್ನ ವಿಶ್ವಾಸವಾಗಿದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರರ ಹೊರತು ಒಳಿತಿಗಿರುವ ಬೇರೆ ಯಾವುದೇ ಮಾರ್ಗವಿಲ್ಲ. ಹಝ್ರತ್ ಈಸಾ ಅಲೈಹಿಸ್ಸಲಾಮ್ ಭೌತಿಕವಾದ ಶರೀರದೊಂದಿಗೆ ಆಕಾಶಕ್ಕೆ ಜೀವಂತವಾಗಿಯೇ ಹೋಗಿರುವರು ಹಾಗೂ ಈಗಲೂ ಜೀವಂತವಾಗಿರುವರು ಎಂದು ನಾನು ನಂಬುವುದಿಲ್ಲ ಎಂಬುದು ಸತ್ಯವೇ ಆಗಿದೆ. ಏಕೆಂದರೆ ಈ ರೀತಿ ನಂಬುವುದರಿಂದ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗೌರವಕ್ಕೆ ಧಕ್ಕೆ ಉಂಟಾಗುತ್ತದೆ ಮತ್ತು ಅವರನ್ನು ತೀವ್ರವಾಗಿ ನಿಂದಿಸುವಂತಾಗುತ್ತದೆ. ನಾನು ಒಂದು ಕ್ಷಣಕ್ಕೂ ಈ ನಂದನೆಯನ್ನು ಸಹಿಸಲಾರೆನು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅರವತ್ತಮೂರನೇ ವಯಸ್ಸಲ್ಲಿ ಮರಣಹೊಂದಿದರು ಮತ್ತು ಮದೀನದಲ್ಲಿ ಅವರ ಪರಿಶುದ್ಧ ಖಬರ್ ಇದೆ ಎಂದು ಎಲ್ಲರಿಗೂ ಗೊತ್ತು. ಪ್ರತಿವರ್ಷ ಲಕ್ಷಗಟ್ಟಲೆ ಹಾಜಿಗಳು ಅಲ್ಲಿಗೆ ಹೋಗುತ್ತಾರೆ. ಹಾಗಿರುವಾಗ ಈಸಾ ಮಸೀಹರು ಮರಣಹೊಂದಿರುವರು ಅಥವಾ ಮರಣವನ್ನು ಅವರಿಗೆ ಸಂಬಂಧಿಸಿ ಹೇಳುವುದು ಅಸಭ್ಯತೆ ಆಗಿದ್ದರೆ,

ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರರ ಕುರಿತು ಈ ಅಸಭ್ಯತೆ ಮತ್ತು ಅಗೌರವವನ್ನು ಹೇಗೆ ಸಹಿಸಲು ಸಾಧ್ಯ? ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮರಣಹೊಂದಿರುವವರು ಮತ್ತು ದಫನಮಾಡಲ್ಪಟ್ಟರು ಎಂದು ಪೈಗಂಬರರ ಬಗ್ಗೆ ಹೇಗೆ ಹೇಳಲಾಗುತ್ತದೆ. ಆದರೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮರಣಪಟ್ಟರು ಎಂದು ನೀವು ಬಹಳ ಸಂತೋಷದಿಂದ ಹೇಳುತ್ತೀರಿ. ಮೌಲೂದ್ ಹೇಳುವವರು ಬಹಳ ಮಧುರಸ್ವರದಿಂದ ಮರಣದ ಘಟನೆಗಳನ್ನು ಪ್ರಸ್ತಾಪಿಸುತ್ತಾರೆ. ಪೈಗಂಬರರು ಮರಣಪಟ್ಟರು ಎಂದು ಯಾವುದೇ ಸಂಕೋಚವಿಲ್ಲದೆ ವಿರೋಧಿಗಳ ಮುಂದೆ ನೀವು ಸಮ್ಮತಿಸುತ್ತೀರಿ. ಹೀಗಿರುವಾಗ ಹಝ್ರತ್ ಈಸಾ ಮಸೀಹರ ಮರಣದಿಂದ ಎಂತಹ ಅನಾಹುತ ಉಂಟಾಗುತ್ತದೆ ಎಂದು ನನಗೆ ಗೊತ್ತಾಗುತ್ತಿಲ್ಲ. ಅದನ್ನು ಕೇಳುವಾಗ ನಿಮ್ಮ ಕಣ್ಣುಗಳು ಯಾಕೆ ಕೆಂಪಾಗುತ್ತವೆ? (ಅಹ್ಮದಿಯರು ಬಹಳ ದೊಡ್ಡ ಪಾಪವನ್ನು ಮಾಡಿದ ರೀತಿಯಲ್ಲಿ ಈಗಲೂ ಕೆಲವು ಜನರು, ಕೆಲವು ಪಂಗಡಗಳು ಮತ್ತು ಕೆಲವು ಮೌಲವಿಗಳು ಬೊಬ್ಬೆ ಹಾಕುತ್ತಾರೆ. ಈಗ ಕೆಲವರು ಈಸಾ ಅಲೈಹಿಸ್ಸಲಾಮರ ಬರುವಿಕೆಯನ್ನು ನಿರಾಕರಿಸುತ್ತಾರೆ ಮತ್ತು ಕೆಲವರು ಕಾಯುತ್ತಿದ್ದಾರೆ.)

ಹೇಗಿದ್ದರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರರಿಗೆ ಸಂಬಂಧಿಸಿ ಮರಣ ಎಂಬ ಪದ ಕೇಳುವಾಗ ಕಣ್ಣೀರು ಸುರಿಸುತ್ತಿದ್ದರೆ ನಾವು ಕಳವಳಗೊಳ್ಳುತ್ತಿರಲಿಲ್ಲ. ಆದರೆ ದುಃಖಕರವಾದುದೇನೆಂದರೆ, ಖಾತಮುನ್ನಬಿಯ್ಯೀನ್ ಮತ್ತು ಲೋಕದ ಸರದಾರರಾದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮರಣವನ್ನಪ್ಪಿದರು ಎಂದು ನೀವು ಬಹಳ ಖುಶಿಯಿಂದ ಸಮ್ಮತಿಸುತ್ತೀರಿ ಮತ್ತು ತಮ್ಮನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬೂಟಿನ ದಾರವನ್ನು ತೆರೆಯಲು ಯೋಗ್ಯನಲ್ಲವೆಂದು ಭಾವಿಸುವ ಈಸಾ ಮಸೀಹರನ್ನು ಜೀವಂತವಿದ್ದಾರೆ ಎಂದು ನಂಬುತ್ತೀರಿ. ಅವರ ಬಗ್ಗೆ ಮರಣ ಎಂಬ ಪದ ಉಚ್ಚರಿಸಿದರೆ ನಿಮಗೆ ಕೋಪಬರುತ್ತದೆ.

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈಗಲೂ ಜೀವಂತವಾಗಿದ್ದರೆ ಯಾವುದೇ ಆಕ್ಷೇಪಕ್ಕೆ ಎಡೆಯಿರಲಿಲ್ಲ. ಏಕೆಂದರೆ, ಅವರು ಮಹತ್ತಾದ ಸನ್ಮಾರ್ಗವನ್ನು ತಂದರು, ಅದಕ್ಕೆ ತುಲ್ಯವಾದದ್ದು ಲೋಕದಲ್ಲಿ ಲಭ್ಯವಲ್ಲ. ಹಝ್ರತ್ ಆದಮ್ ಅಲೈಹಿಸ್ಸಲಾಮರ ಮೊದಲ್ಗೊಂಡು ಇಲ್ಲಿಯ ವರೆಗೆ ಯಾರಿಂದಲೂ ತೋರಿಸಲಾಗದಂತಹ ಜೀವಿತ ಮಾದರಿಯನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತೋರಿಸಿದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅಸ್ತಿತ್ವ ಲೋಕಕ್ಕೆ ಮತ್ತು ಮುಸ್ಲಿಮರಿಗೆ ಆವಶ್ಯವಿದ್ದ ರೀತಿಯಲ್ಲಿ ಈಸಾ ಮಸೀಹರ ಇರವು ಲೋಕಕ್ಕೆ ಆವಶ್ಯವಿರಲಿಲ್ಲ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅಸ್ತಿತ್ವ ಎಂತಹ ಅನುಗ್ರಹೀತವಾಗಿತ್ತೆಂದರೆ, ಅವರು ಮರಣಪಟ್ಟಾಗ ಸಹಾಬರ ಸ್ಥಿತಿ ಮತಿಗೆಟ್ಟವರಂತೆ ಆಗಿತ್ತು. ಎಲ್ಲಿಯವರೆಗೆ ಎಂದರೆ, ಹಝ್ರತ್ ಉಮರ್ ರಳಿಯಲಾಹು ಅನ್‌ಹು ತಮ್ಮ ಖಡ್ಗವನ್ನು ಕವಚದಿಂದ ಹೊರತೆಗೆದು ಹೀಗೆ ಹೇಳಿದರು: ಯಾರಾದರೂ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮರಣವನ್ನಪ್ಪಿದರು ಎಂದು ಹೇಳಿದರೆ, ಅವನ ತಲೆಯನ್ನು ಬೇರ್ಪಡಿಸುವನು. ಇಂತಹ ಆವೇಶದ ಸಮಯದಲ್ಲಿ ಅಲ್ಲಾಹನು ಹಝ್ರತ್ ಅಬೂಬಕ್ಕರ್ ರಳಿಯಲ್ಲಾಹು ಅನ್‌ಹುರಿಗೆ ಒಂದು ವಿಶೇಷವಾದ ಪ್ರಕಾಶ ಮತ್ತು ಸೂಕ್ಷ್ಮಜ್ಞಾನವನ್ನು ನೀಡಿದನು. ಅವರು ಎಲ್ಲರನ್ನು ಒಟ್ಟುಸೇರಿಸಿ ಖುತ್‌ಬ ನೀಡಿದರು. ಅಲ್ಲಿ ಈ ವಚನವನ್ನು ಓದಿದರು: **ವಮಾ ಮುಹಮ್ಮದುನ್ ಇಲ್ಲಾ ರಸೂಲ್ ಖದ್ ಖಲತ್ ಮಿನ್‌ಖಬ್‌ಲಿಹಿರ್‍ರುಸುಲ್**. ಎಂದರೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಬ್ಬ ಪ್ರವಾದಿಯಾಗಿರುವರು. ಅವರಿಗೆ ಮುಂಚಿತವಾಗಿ ಬಂದ ಎಲ್ಲ ಪ್ರವಾದಿಗಳು ಗತಿಸಿಹೋಗಿರುವರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮರಣಹೊಂದಿದಾಗ ಹಝ್ರತ್ ಅಬೂಬಕ್ಕರ್ ಸಿದ್ದೀಖ್ ರಳಿಯಲ್ಲಾಹು ಅನ್‌ಹುರವರು ಏಕೆ ಈ ವಚನವನ್ನು ಓದಿದ್ದರು ಮತ್ತು ಅವರ ಉದ್ದೇಶ ಹಾಗೂ ಇಚ್ಛೆಯೇನಾಗಿತ್ತೆಂದು ಈಗ ನೀವು ಚಿಂತಿಸಿರಿ ಮತ್ತು ಆಲೋಚಿಸಿ ಹೇಳಿರಿ. ಅದು ಕೂಡ ಎಲ್ಲ ಸಹಾಬಿವರ್ಯರು ಅಲ್ಲಿ ಉಪಸ್ಥಿತರಿದ್ದ ಸಂದರ್ಭದಲ್ಲಿ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮರಣದಿಂದ ಸಹಾಬಿವರ್ಯರ ಹೃದಯದಲ್ಲಿ ತುಂಬ ದುಃಖವಿತ್ತು ಮತ್ತು ಆ ಮರಣವನ್ನು ಅಸಮಯದ್ದು ಅಥವಾ ಸಮಯಕ್ಕೆ ಮುಂಚಿತವಾಗಿತ್ತು ಎಂದು ಸಹಾಬಿವರ್ಯರು ಭಾವಿಸಿದ್ದರು ಎಂದು ನಾನು ಖಂಡಿತವಾಗಿಯೂ ಹೇಳುತ್ತೇನೆ ಮತ್ತು ಅದನ್ನು ನಿಮಗೆ ನಿರಾಕರಿಸಲು ಸಾಧ್ಯವಲ್ಲ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮರಣದ ವಾರ್ತೆ ಕೇಳಲು ಅವರು ಇಷ್ಟಪಡುತ್ತಿರಲಿಲ್ಲ. ಸಹಾಬಿವರ್ಯರ ಇಂತಹ ಅವಸ್ಥೆ, ವಿಶೇಷವಾಗಿ ಹಝ್ರತ್ ಉಮರ್ ರಳಿಯಲ್ಲಾಹು ಅನ್‌ಹುರವರ ಇಂತಹ ಆವೇಶ ಮತ್ತು ಕೋಪದ ಸ್ಥಿತಿಯೂ ಈ ಆಯತ್ತಿನಿಂದ ಮಾತ್ರವೇ ಶಮನಗೊಂಡಿತು. ಅಂತಹ ಸನ್ನಿವೇಶದಲ್ಲಿ ಹಝ್ರತ್ ಈಸಾ ಅಲೈಹಿಸ್ಸಲಾಮರು ಜೀವಂತವಾಗಿರುವರು ಎಂದು ಅವರು ತಿಳಿದಿದ್ದರೆ ಅಥವಾ ಹಾಗೆ ನಂಬಿದ್ದರೆ ಅವರು ಜೀವಂತವೇ ಸಾವನ್ನಪ್ಪುತ್ತಿದ್ದರು. ಅವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರೇಮಿಯಾಗಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತದ ಹೊರತು ಬೇರೆಯವರ ಬದುಕನ್ನು ಸಹಿಸಲು ಸಿದ್ಧರಿರಲಿಲ್ಲ. ತಮ್ಮ ಕಣ್ಮುಂದೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಮರಣಹೊಂದಿದ್ದಾಗಿ ನೋಡಿ ಹೇಗೆ ತಾನೆ ಅವರು ಈಸಾ ಮಸೀಹರು ಈಗಲೂ ಜೀವಂತವಾಗಿರುವರು ಎಂದು ನಂಬಲು ಸಾಧ್ಯ. ಹಝ್ರತ್ ಅಬೂಬಕ್ಕರ್ ರಳಿಯಲ್ಲಾಹು ಅನ್‌ಹುರವರು ಖುತ್‌ಬ ಓದಿದಾಗ ಅವರ ಆವೇಶ ನಂದಿಹೋಯಿತು. ಆ ಸಮಯದಲ್ಲಿ ಸಹಾಬಿವರ್ಯರು ಮದೀನದ ಗಲ್ಲಿಗಳಲ್ಲಿ ಈ ಆಯತನ್ನು ಓದುತ್ತಾ ಸುತ್ತುತ್ತಿದ್ದರು. ಈ ವಚನ ಇಂದೇ ಅವತೀರ್ಣಗೊಂಡಿದೆಂಬಂತೆ ಭಾವಿಸುತ್ತಿದ್ದರು.ಆ ಸಂದರ್ಭದಲ್ಲಿ ಹಸ್ಸಾನ್ ಬಿನ್ ಸಾಬಿತ್ ಒಂದು ಶೋಕಗೀತೆಯನ್ನು ಬರೆದಿದ್ದರು. ಅದರಲ್ಲಿ ಅವರು ಹೀಗೆ ಹೇಳಿದ್ದರು:

**ಕುಂತಸ್ಸುವಾದ ಲಿನಾಝಿರೀ ಫಅಮಿ ಅಲನ್ನಾಝಿರು,**
**ಮನ್‌ಶಾಅ ಬಅದಕ ಫಲ್‌ಯಮುತ್ ಫಅಲೈಕ ಕುಂತ ಉಹಾಧಿರು.**

ಎಲ್ಲರು ಮರಣಹೊಂದಿರುವವರು ಎಂದು ಮೇಲಿನ ಆಯತಿನಲ್ಲಿ ಪ್ರಸ್ತಾಪಿಸಲಾದ ಕಾರಣ ಹಸ್ಸಾನ್ ಬಿನ್ ಸಾಬಿತ್ ಕೂಡ **"ಈಗ ನನಗೆ ಯಾರ ಮರಣದ ಪರಿವೆಯಿಲ್ಲ"** ಎಂದು ಹೇಳಿದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಬೇರೆ ಯಾರ ಜೀವಂತವಿರುವಿಕೆಯನ್ನು ನಂಬುವುದು ಸಹಾಬಿವರ್ಯರಿಗೆ ಪ್ರಯಾಸಕರವಾಗಿತ್ತು. ಅವರು ಅದನ್ನು ಸಹಿಸಲು ಸಿದ್ಧರಿರಲಿಲ್ಲ. ಹೀಗೆ ಇದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮರಣದ ಕುರಿತು ಲೋಕದಲ್ಲಿ ನಡೆದ ಮೊದಲ ಒಮ್ಮತಾಭಿಪ್ರಾಯವಾಗಿತ್ತು. ಅದರೊಂದಿಗೆ ಹಝ್ರತ್ ಈಸಾ ಮಸೀಹರ ಮರಣದ ಬಗ್ಗೆ ಸಹ ಸ್ಪಷ್ಟವಾದ ತೀರ್ಮಾನವಾಯಿತು. (ಲೆಕ್ಚರ್ ಲಾಹೋರ್, ರೂಹಾನ ಖಝಾಯೀನ್, ಸಂಪುಟ-20, ಪುಟ-260-262) (ಮಲ್‌ಫೂಝಾತ್, ಸಂಪುಟ-8, ಪುಟ-224-227)

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನ ಮತ್ತು ಪದವಿಯನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ತಮ್ಮ ಅಸ್ತಿತ್ವದಿಂದ, ತಮ್ಮ ಗುಣವೈಶಿಷ್ಟ್ಯದಿಂದ, ತಮ್ಮ ನಡೆವಳಿಕೆಗಳಿಂದ, ತಮ್ಮ ಕರ್ಮಗಳಿಂದ, ತಮ್ಮ ಆಧ್ಯಾತ್ಮಿಕ ಮತ್ತು ಪರಿಶುದ್ಧ ಸಾಮರ್ಥ್ಯದ ಶಕ್ತವಾದ ಪ್ರವಾಹದಿಂದ ಪರಿಪೂರ್ಣತೆಯ ಮಾದರಿಯನ್ನು ತಮ್ಮ ಜ್ಞಾನದಿಂದ, ಕೆಲಸದಿಂದ, ಸತ್ಯದಿಂದ, ಸ್ಥೈರ್ಯದಿಂದ ತೋರಿಸಿದ ವ್ಯಕ್ತಿ ಪರಿಪೂರ್ಣವಾದ ಮನುಷ್ಯ ಎಂದು ಕರೆಯಲ್ಪಟ್ಟರು. ಎಂದರೆ ಯಾವುದೇ ಮಗ್ಗಲು ಬಾಕಿಯುಳಿಯಲಿಲ್ಲ. ಜ್ಞಾನದ, ಕರ್ಮದ, ಸತ್ಯದ, ಸ್ಥಿರಚಿತ್ತತೆಯ, ಅರಿವಿನ ಉನ್ನತ ಮಾದರಿಯನ್ನು ತೋರಿಸಿ ಪರಿಪೂರ್ಣ ಮನುಷ್ಯನೆಂದು ಕರೆಯಲ್ಪಟ್ಟರು. ಹೇಳುತ್ತಾರೆ: ಎಲ್ಲರಿಗಿಂತ ಪರಿಪೂರ್ಣವಾದ ಮನುಷ್ಯ, ಪರಿಪೂರ್ಣವಾದ ನಬಿ ಮತ್ತು ಪರಿಪೂರ್ಣವಾದ ಅನುಗ್ರಹಗಳೊಂದಿಗೆ ಬಂದ ವ್ಯಕ್ತಿ, ಯಾರ ಆಧ್ಯಾತ್ಮಿಕ ಆವಿರ್ಭಾವ ಮತ್ತು ಪುನರುತ್ಥಾನದಿಂದ ಲೋಕದಲ್ಲಿ ಮೊದಲ ಖಿಯಾಮತ್ ಪ್ರಕಟವಾಯಿತೋ, ಸತ್ತುಹೋದ ಒಂದು ಲೋಕವೇ ಜೀವಂತವಾಯಿತೋ ಎಂದರೆ ಆಧ್ಯಾತ್ಮಿಕ ಜೀವನ ಅವರಿಗೆ ಲಭಿಸಿತೋ. ಆ ಅನುಗ್ರಹೀತ ಪ್ರವಾದಿ ಹಝ್ರತ್ ಖಾತಮುಲ್ ಅಂಬಿಯಾ ಇಮಾಮುಲ್ ಅಸ್‌ಫಿಯ, ಪ್ರವಾದಿಗಳಲ್ಲಿ ಶ್ರೇಷ್ಠರೂ, ಪ್ರವಾದಿಗಳ ಹೆಮ್ಮೆಯೂ ಆದ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ಆಗಿರುವರು. ಹೇ ಸ್ನೇಹನಿಧಿಯಾದ ಅಲ್ಲಾಹ್, ಈ ಪ್ರಿಯ ನಬಿಯ ಮೇಲೆ ಲೋಕಾರಂಭದಿಂದ ಯಾರಿಗೂ ನೀಡದಷ್ಟು ಕಾರುಣ್ಯ ಮತ್ತು ಆಶೀರ್ವಾದವನ್ನು ವರ್ಷಿಸು. ಈ ವೈಭವಶಾಲಿ ನಬಿ ಈ ಲೋಕಕ್ಕೆ ಬರದಿರುತ್ತಿದ್ದರೆ, ಲೋಕದಲ್ಲಿ ಬಂದಂತಹ ಸಣ್ಣ ಸಣ್ಣ ಪ್ರವಾದಿಗಳಾದ ಯೂನುಸ್, ಅಯ್ಯೂಬ್, ಈಸಾ ಮಸೀಹ್, ಮಲಾಕಿ, ಯಹ್ಯಾ, ಝಕರಿಯ್ಯಾ ಮುಂತಾದವರ ಸತ್ಯತೆಗೆ ನಮ್ಮ ಬಳಿ ಯಾವುದೇ ಪುರಾವೆ ಇರುತ್ತಿರಲಿಲ್ಲ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮಾಡಿದ ಉಪಕಾರದಿಂದ ಅಲ್ಲಾಹನ ಸಾಮೀಪ್ಯ ಗಳಿಸಿದ ಮತ್ತು ಪರಿಶುದ್ಧರಾದ ಈ ಎಲ್ಲ ಪ್ರಿಯದಾಸರನ್ನು ಲೋಕದಲ್ಲಿ ಸತ್ಯವಂತರೆಂದು ತಿಳಿಯಲಾಯಿತು. **ಅಲ್ಲಾಹುಮ್ಮ ಸಲ್ಲಿ ವ ಸಲ್ಲಿಮ್ ವ ಬಾರಿಕ್ ಅಲೈಹಿ ವ ಆಲಿಹಿ ವ ಅಸ್‌ಹಾಬಿಹಿ ಅಜ್‌ಮಈನ್ ವ ಆಖಿರು ದಅ್‌ವಾನಾ ಅನಿಲ್**

**ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್.** (ಇತಮಾಮುಲ್ ಹುಜ್ಜ, ರೂಹಾನ ಖಝಾಯಿನ್, ಸಂಪುಟ–8, ಪುಟ–308)

ಅಲ್ಲಾಹನು ನಮಗೆ ಸದಾ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನ ಮತ್ತು ಮಹಿಮೆಯ ಯಥಾರ್ಥ ಅರಿವು ನೀಡುತ್ತಾ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ದುರೂದ್ ಪ್ರಾರ್ಥನೆಯನ್ನು ಮಾಡುತ್ತಾ ಇರಲು ಸೌಭಾಗ್ಯ ನೀಡಲಿ. ಅಲ್ಲಾಹನ ಮುಂದೆ ನಾವು ಹಿಂದಿಗಿಂತ ಹೆಚ್ಚಾಗಿ ಬಾಗುವವರಾಗಲಿ. ನಾವು ನಮ್ಮ ನಡೆವಳಿಕೆಗಳಿಂದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಇರುವ ಪ್ರೀತಿಯನ್ನು ಸಾಬೀತುಗೊಳಿಸಲು ಇರುವ ಮಾರ್ಗ ಇದೇ ಆಗಿದೆ. ಈ ಪ್ರೇಮವನ್ನು ನಾವು ನಮ್ಮ ಹೃದಯದಲ್ಲಿ ಇರಿಸಿದರೆ ನಾವು ನಮ್ಮ ವಿರೋಧಿಗಳಿಗೆ ಜವಾಬು ಕೊಡುವವರಾಗುವೆವು. ಎಂದರೆ ನಮ್ಮ ಕರ್ಮಪರವಾದ ಸ್ಥಿತಿ ನಮ್ಮ ವಿರೋಧಿಗಳ ವಿರೋಧಕ್ಕೆ ಉತ್ತರ ಕೊಡುವುದು. ಅಲ್ಲಾಹನು ನಮಗೆ ಅದರ ಶಕ್ತಿ ನೀಡಲಿ.

****************

*(ಪುಟ ಸಂಖ್ಯೆ* ***02*** *ರ ಉಳಿದ ಭಾಗ)*

ಅವರಿಗೆ ಅಲ್ಲಾಹನ ವತಿಯಿಂದ ಆತ್ಮಕ್ಕೆ ಸಂಬಂಧಿಸಿದ ಜ್ಞಾನ ನೀಡಲಾಗಲಿಲ್ಲ. ಮತ್ತು ನೀವು ಪವಿತ್ರ ಖುರ್‌ಆನ್‌ನಲ್ಲಿ ಯಾವ ಸ್ಥಳದಲ್ಲಿ ಮತ್ತು ಎಲ್ಲಿ ನೋಡಿದಿರಿ. ಹಝ್ರತ್ ರಸೂಲುಲ್ಲಾಹ್(ಸ) ಆತ್ಮಕ್ಕೆ ಸಂಬಂಧಿಸಿದ ಜ್ಞಾನದಿಂದ ವಂಚಿತರಾಗಿದ್ದರೆಂದು. ನನಗೆ ಗೊತ್ತು. ನಮಗೆ ನಿಮ್ಮ ಅಪರಿಪಕ್ವತೆಯಿಂದಾಗಿ ನಮಗೆ ಈ ವಚನವನ್ನು ಅರಿತುಕೊಳ್ಳುವುದರಲ್ಲಿ ಮೋಸಹೋದಿರಿ ಎಂದು. ಅಷ್ಟೊಂದು ನಿಖರವಾದ ಅರ್ಥ ಅರಿಯುವುದರಲ್ಲಿಯೂ ಮಾಸ್ಟರ್ ಸಾಹಿಬ್ ಎಷ್ಟೊಂದು ದೊಡ್ಡ ಪ್ರಮಾದಕ್ಕೆ ಒಳಗಾಗುವಂತಾಯಿತು. ನೀವು ಆತ್ಮ ಸಂಬಂಧಿತ ಅಜ್ಞಾನದ ಈ ಸಂಬೋಧನೆ ರಸೂಲುಲ್ಲಾಹ್(ಸ) ರವರಿಗೆ ಎಂದು ಕೊಂಡಿದ್ದೀರಿ. ಲಾ ಹೌಲ್ ವಲಾ ಖುವ್ವತ್, ಇಂತಹ ಬುದ್ಧಿಯ ಮೇಲೆ ಕಲ್ಲು ಬೀಳುವಂತಾಗಲಿ, ಮಾಸ್ಟರ್ ಸಾಹಿಬ್ ಒಂದಿಷ್ಟು ಅರೆಬಿ ಅಥವಾ ಒಂದಿಷ್ಟು ವ್ಯಾಕರಣ ಆದರೂ ತಿಳಿದಿದ್ದರೆ ಒಳ್ಳೆಯದಿತ್ತು. ಓ ಸಾಹೇಬರೇ ಸ್ವಲ್ಪ ಕಣ್ಣು ತೆರೆದು ನೋಡಿರಿ. ಆತ್ಮಕ್ಕೆ ಸಂಬಂಧಿಸಿದ ಮಾತು ತಿಳಿದುಕೊಳ್ಳುವವರು ಯಾರಾಗಿದ್ದರು. ಅವರು ನಿಮ್ಮ ಸಹೋದರ ಸಂಬಂಧಿಯೇ ಆಗಿದ್ದರು. ಅಂದರೆ ಇಸ್ಲಾಮ್ ಧರ್ಮವನ್ನು ಧಿಕ್ಕರಿಸುವವರು, ಅವರಿಗೆ ಈ ಉತ್ತರ ನೀಡಲಾಗಿತ್ತು. ಆತ್ಮವು ನನ್ನ ಪ್ರಭುವಿನ ಜ್ಞಾನಕ್ಕೆ ಸಂಬಂಧಿಸಿದ್ದಾಗಿದೆ. ನೀವು ಈ ದೇವ ರಹಸ್ಯವನ್ನು ಎಂತೂ ಬಲ್ಲವರಾಗುವಿರಿ. ಓ ಅವಿಶ್ವಾಸಿಗಳೇ! ಆತ್ಮದ ಕುರಿತು ತಿಳಿಯಬೇಕಾದರೆ ಮೊದಲು ವಿಶ್ವಾಸ ಹೊಂದುವವರಾಗಿರಿ. (ಸುರ್ಮಾ ಚಶ್ಮ ಆರ್ಯ, ರೂಹಾನಿ ಖಝಾಯಿನ್ ಸಂಪುಟ 2, ಪುಟ 171–174).

ಮತ್ತೆ ಅವರು ಬಿ ಮಾಸ್ಟರ್ ಮುರಳೀಧರ್ ಸಾಹಿಬರಿಗೆ ಒಂದು ನೂರು ರೂಪಾಯಿಗಳ ಬಹುಮಾನದ ಪಂಥ್ವಾನ ನೀಡುತ್ತ ಹೇಳಿದರು. "ಪವಿತ್ರ ಖುರ್‌ಆನ್‌ನಲ್ಲಿ ಆತ್ಮಕ್ಕೆ ಸಂಬಂಧಿಸಿದ ವಿವರಗಳಿಲ್ಲ. ಮತ್ತು ಅದು ವೇದಗಳಲ್ಲಿ ಮಾತ್ರ ವಿವರಿಸಲಾಗಿದೆ ಎಂದು ಮಾಸ್ಟರ್ ಸಾಹಿಬ್ ಭಾವಿಸುವುದಾದರೆ, ಹಾಗೂ ಹಝ್ರತ್ ರಸೂಲುಲ್ಲಾಹ್(ಸ) ರವರಿಗೂ ಅದರ ಕುರಿತು ಏನೂ ತಿಳಿದಿರಲಿಲ್ಲ. ಆದರೆ ವೇದಗಳ ನಾಲ್ಕೂ ಋಷಿಮುನಿಗಳಿಗೆ ಅದರ ಅರಿವು ಇತ್ತು ಎಂದಾದರೆ ಸರಳವಾದ ಮತ್ತು ಸುಲಭವಾದ ನಿರ್ಣಯ ಕೈಗೊಳ್ಳಲು ಉಪಾಯವೆಂದರೆ ಮಾಸ್ಟರ್ ಸಾಹಿಬ್ ವಚನಬದ್ಧರಾಗಿ ನಮಗೆ ಅನುಮತಿ ನೀಡಬೇಕು. ನಾವು ಆತ್ಮಕ್ಕೆ ಸಂಬಂಧಿಸಿದ ಏನೆಲ್ಲ ಪವಿತ್ರ ಖುರ್‌ಆನ್‌ನಲ್ಲಿ ಬರೆಯಲಾಗಿದೆಯೋ ಅದರಿಂದ ನಬಿ(ಸ) ರವರ ಪರಿಪೂರ್ಣ ಜ್ಞಾನ ಮತ್ತು ಪವಿತ್ರ ಖುರ್‌ಆನ್‌ನ ಮಹಾನತೆ ಸಾಬೀತಾಗಬೇಕು, ಒಂದು ನಿರಂತರವಾಗಿ ಜಾರಿಯಲ್ಲಿರುವ ಪತ್ರಿಕೆಯಲ್ಲಿ, ಖುರ್‌ಆನ್‌ನ ವಚನಗಳ ಸಹಿತ ಪ್ರಕಟ ಪಡಿಸಬೇಕು. ಈ ಪತ್ರಿಕೆ ನಮ್ಮಿಂದ ಪ್ರಕಟವಾದ ಮೇಲೆ ಮಾಸ್ಟರ್ ಸಾಹಿಬರಿಗೆ ಅನಿವಾರ್ಯವಾಗುವುದು, ಅದರ ಪ್ರತಿಯಾಗಿ ವೇದಗಳ ಶೃತಿಗಳೊಂದಿಗೆ ಒಂದು ಪತ್ರಿಕೆ ಸಿದ್ಧಪಡಿಸಿ, ಅದರಲ್ಲಿ ಆತ್ಮಕ್ಕೆ ಸಂಬಂದಿಸಿದ ವೇದಗಳ ತತ್ವಗಳು ವಿವರಿಸಿರಬೇಕು. ಅವು ಹೇಗೆ ಸೃಷ್ಟಿಯೇತರವಾಗಿವೆ ಮತ್ತು ಹೇಗೆ ಅನಾದಿ ಕಾಲದಿಂದ ದೇವನಾಮದಿಂದ ಪ್ರತ್ಯೇಕಿಸಲ್ಪಟ್ಟಿವೆ. ಅದರ ಗುಣಗಳಾವುವು, ನಮ್ಮ ಇಬ್ಬರ ಮೇಲೂ ಅನಿವಾರ್ಯವಾಗಿರುವುದು ತನ್ನ ತನ್ನ ಧರ್ಮಗ್ರಂಥದಿಂದ ಹೊರತಾಗಿರಬಾರದು. ತನ್ನ ಅಭಿಪ್ರಾಯಗಳಾಗಿರಬಾರದು. ಬದಲು ತನ್ನ ದೇವಗ್ರಂಥದಿಂದಲೇ ಪುರಾವೆಗಳನ್ನು ಒದಗಿಸಬೇಕು. ಆ ವಚನಗಳ ಅಥವಾ ಶ್ಲೋಕಗಳನ್ನು ಬರೆದು ಅದರ ಅನುವಾದವು ಬರೆಯಬೇಕು. ಅದರಿಂದ ಓದುಗರಿಗೆ ತಿಳಿಯಲು ಸಹಾಯಕವಾಗುವುದು, ಆ ಮಾತುಗಳು ಸಮರ್ಥನಿಯವೋ ಅಲ್ಲವೋ ಎಂದು. ಈ ಶರತ್ತುಗಳ ಮೇಲೆ ಮಾಸ್ಟರ್ ಸಾಹಿಬ್ ಸ್ಪರ್ಧಿಸಿ ತೋರಿಸಿದರೆ ಅಥವಾ ಆರ್ಯರಲ್ಲಿ ಯಾವ ವ್ಯಕ್ತಿ ಪಂಡಿತನೂ ಆಗಲಿ ಮುಂದೆ ಬಂದರೆ ನಾನು ಆಶ್ವಾಸನೆ ನೀಡುತ್ತೇನೆ. ಇಂತಹ ವ್ಯಕ್ತಿಗೆ ಅವರು ಮಾಸ್ಟರ್ ಸಾಹಿಬರಿಗೆ ಆಗಲಿ ಅಥವಾ ಮುನ್ಶಿ ಇಂದರ್‌ಮನ್ ಸಾಹಿಬ್ ಮುರಾದಾಬಾದಿ ಅಥವಾ ಮುನ್ಶಿ ಜೀವನ್‌ದಾಸ್ ಸಾಹಿಬ್ ಕಾರ್ಯದರ್ಶಿ ಆರ್ಯ ಸಮಾಜ ಜವಾಹರ್ ಅಥವಾ ಇನ್ನಿತರರು ಯಾರೇ ಆಗಲಿ, ಪಾಂಡಿತ್ಯ ತೋರಿಸುವವರಾದರೆ, ನೂರು ರೂಪಾಯಿಗಳ ನಗದು ಬಹುಮಾನ ನೀಡುವೆನು. ಆದರೆ ಈ ಪ್ರಬಂಧವನ್ನು ಅಧ್ಯಯನ ಮಾಡಿಯೂ ಮಾಸ್ಟರ್ ಸಾಹಿಬ್ ಅಥವಾ ಅವರ ಇತರ ಪಂಡಿತರ ಸಹೋದರರು ಮೌನವಹಿಸಿದರೆ ಮತ್ತು ನನಗೆ ಬರೆಯಲು ಉತ್ತೇಜಿಸಲಿಲ್ಲವಾದರೆ ಎಲ್ಲ ಪ್ರೇಕ್ಷಕರು ತಿಳಿದುಕೊಳ್ಳಬೇಕು. ಅವರ ಎಲ್ಲ ಧ್ವನಿಗಳು ಸದ್ದಿಲ್ಲದ್ದಾಗಿವೆ ಮತ್ತು ಅವರು ಸಾತ್ವಿಕರ ನಡೆ ನಡೆಯಲು ಬಯಸುತ್ತಿಲ್ಲ. ಅಂತೂ ನಾವು ಈಗ ಪ್ರತೀಕ್ಷೆಯಲ್ಲಿ ಇರುವೆವು. ಯವಾಗ ಲಾಲಾ ಮುರಳಿಧರ ಸಾಹಿಬ್ ಅಥವಾ ಅವರ ಯಾರೊಬ್ಬ ಸಹೋದರರು ತನ್ನ ಸಮುದಾಯದಲ್ಲಿ ಉತ್ತಮನಾದವನ ಬೇಡಿಕೆ ಸಲ್ಲಿಸುವರು. ಆಗತಾಸಿಯಾ ರೂಯೇ ಶವದ್ ಹರ್‌ಕೆ ದರೋಗ್ದಶ್ ಬಾಷದ್, (ಸುರ್ಮಾ ಚಶ್ಮ ಆರ್ಯ, ರೂಹಾನಿ ಖಝಾಯಿನ್ ಸಂಪುಟ 2, ಪುಟ–177–183).

ಹಝ್ರತ್ ಮಸೀಹ್ ಮೌಊದ್(ಅ) ಮಗದೊಮ್ಮೆ ಡಂಗುರ ಹೊಡೆಯುತ್ತ ಪ್ರತಿಸ್ಪರ್ಧಿಯಾಗಿ ಮುಂದಾಗಲು ಮಾಸ್ಟರ್ ಸಾಹಿಬರಿಗೆ ಕರೆ ನೀಡಿದರು. ನಾನು ಆಣೆ ಮಾಡಿ ಹೇಳುತ್ತೇನೆ. ನಾನು ಮಾಸ್ಟರ್ ಸಾಹಿಬರ ಆಗ್ರಹದ ಮೇರೆಗೆ ರಿಸಾಲತುರ್‌ರೂಹ್" ಬರೆಯಲು ಸಿದ್ಧನಿದ್ದೇನೆ. ಆದರೆ ಆ ಪತ್ರಿಕೆಯಲ್ಲಿ ನೀಡಿದ ಶರತ್ತುಗಳ ಪ್ರಕಾರವೇ ಆಗಿರಬೇಕು. ಮಾಸ್ಟರ್ ಸಾಹಿಬರೇ ತಪ್ಪು ತಿಳಿದುಕೊಳ್ಳುವುದು ಬೇಡ. ನಾನು ಸತ್ಯವಾಗಿ ಹೇಳುತ್ತೇನೆ. ಅಪ್ಪಟ ಸತ್ಯ ಅದರಲ್ಲಿ ಯಾವ ಅನುಮಾನವೂ ಇಲ್ಲ. ಪವಿತ್ರ ಖುರ್‌ಆನ್ ಯಾವ ಮಹೋನ್ನತೆಯೊಂದಿಗೆ ಉತ್ತಮ ರೀತಿಯಲ್ಲಿ ಮತ್ತೆ ಶುದ್ಧವಾಗಿ ಹಾಗೂ ಸವುತ್ಯವಾಗಿ ಆತ್ಮಗಳ ಗುಣಗಳ ಮತ್ತು ಅದರ ಶಕ್ತಿಗಳ ಹಾಗೂ ಸಾಮರ್ಥ್ಯಗಳ ಕುರಿತು ಅದರ ಅದ್ಭುತವಾದ ವಿವರಗಳನ್ನು ನೀಡಿದೆವು. ಮತ್ತು ಅದಕ್ಕೆ ಪುರಾವೆಗಳನ್ನೂ ನೀಡಿದೆವು. ಅದರಲ್ಲಿ ಎಂತಹ ಉನ್ನತವಾದ ಮತ್ತು ಸೂಕ್ಷ್ಮವಾದ ಹಾಗೂ ಜ್ಞಾನಭರಿತ ವಿವರವಿದೆ. ಎಂತಹ ಪರಿಪೂರ್ಣ ದರ್ಜೆಯ ಸೂಕ್ಷ್ಮಗಳಿವೆ ಎಂದರೆ ವೇದಗಳ ನಾಲ್ಕೂ ಋಷಿಗಳೂ ಪುನರ್‌ಜನ್ಮ ವಹಿಸಿ ಲೋಕಕ್ಕೆ ಬಂದರು ಮತ್ತು ಸಾದ್ಯವಾದಷ್ಟು ಮಟ್ಟಿಗೆ ಯೋಚನೆ ಮಾಡಿ, ಚಿಂತಿಸಿ ಒತ್ತು ನೀಡಿದರೂ ಆಗಲೂ ಸಹ ಈ ಸ್ಥಾನ ಸುಜ್ಞಾನ ಮತ್ತು ಆತ್ಮಜ್ಞಾನ ಅವರಿಗೆ ಲಭಿಸುವುದಿಲ್ಲ. ಅವರು ಚಿಂತಿಸಿ ಚಿಂತಿಸಿ ಸತ್ತು ಹೋದರೂ ಸರಿ. ಕೋಪಗೊಳ್ಳುವ ಮತ್ತು ಅಸಂತುಷ್ಟರಾಗುವ ಕಾರಣವೇನೆಂದರೆ, ಚಿನ್ನದ ಕೈಗಳಿಗೆ ಕನ್ನಡಿ ಏತಕ್ಕೆ, ಬನ್ನಿ ವೇದ ಮತ್ತು ಖುರ್‌ಆನ್‌ಗೆ ಸ್ಪರ್ಧೆಗೆ ಒಡ್ಡಿ ನೋಡೋಣ. ಈ ಎರಡೂ ಗ್ರಂಥಗಳ ಶೈಕ್ಷಣಿಕ ಶಕ್ತಿ ಪರೀಕ್ಷಿಸೋಣ. ನೋಡಿರಿ. ನಾವು ಕೇವಲ ಸತ್ಯದ ದೃಷ್ಟಿಯಿಂದ ಎರಡೂ ವರ್ಗದವರಲ್ಲಿ ಸತ್ಯವನ್ನು ಮರೆಯಾಚಿಸಿ ಚರ್ಚೆಯಿಂದ ಪಲಾಯನ ಮಾಡುವ ವರ್ಗದ ಮೇಲೆ ಇಲ್ಲಸಲ್ಲದ ನೆಪಗಳನ್ನು ಒಡ್ಡಿ ಮಾತುಗಳನ್ನು ಉಪೇಕ್ಷಿಸುವ ವರ್ಗದ ಮೇಲೆ ದೇವನ ಶಾಪವನನು ಬಯಸುತ್ತೇವೆ. (ಸುರ್ಮಾ ಚಶ್ಮ ಆರ್ಯ, ರೂಹಾನಿ ಖಝಾಯಿನ್ ಸಂಪುಟ 2, ಪುಟ–233).

ಮುಂದೆ ಇನ್‌ಶಾಅಲ್ಲಾಹ್ ನಾವು ಹಝ್ರತ್ ಮಸೀಹ್ ಮೌಊದ್(ಅ) ರವರ ಮತ್ತೊಂದು ಬಹುಮಾನ ಪಂಥ್ವಾನದೊಂದಿಗೆ ಹಾಜರಾಗುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ* ***01*** *ರ ಉಳಿದ ಭಾಗ)*

ಮುಸ್ಲಿಮರೆಂದು ಹೇಳಿಕೊಳ್ಳುತ್ತಾರೆ. ಇನ್ನೊಂದೆಡೆ ಅಲ್ಲಾಹನು ಹೇಳಿರುವಂತೆ ಯಹೂದಿಯರಿಂದ ಕೇವಲ ಅಲ್ಲಾಹನ ಹೊರತು ಯಾರ ಆರಾಧನೆ ಮಾಡಬಾರದು ಎಂಬ ವಚನ ಪಡೆಯಲಾಗಿತ್ತು. ಆದರೆ "ಲಾ ಇಲಾಹ್ ಇಲ್ಲಲ್ಲಾಹ್" ಎಂಬುದು ಮುಸ್ಲಿಮರ ಅಡಿಪಾಯವಾಗಿದೆ. ಅಂದರೆ ಅಲ್ಲಾಹನ ಹೊರತು ಯಾರೂ ಆರಾಧ್ಯರಲ್ಲ. ಮತ್ತು ಅವನು ಸರ್ವ ಸಾಮರ್ಥ್ಯ ಹೊಂದಿದವನಾಗಿದ್ದಾನೆ ಎಂದು. ಎಲ್ಲ ಕಾರ್ಯಗಳು ಅವನು ಸ್ವಯಂ ನಿರ್ವಹಿಸಿಕೊಳ್ಳುತ್ತಾನೆ. ಅವನಿಗೆ ಯಾರು ಸಹಾಯದ ಅಗತ್ಯವಿಲ್ಲ. ಇಸ್ಲಾಮಿನ ಬುನಾದಿಯೇ "ಲಾ ಇಲಾಹ್ ಇಲ್ಲಲ್ಲಾಹ್" ಮೇಲೆ ಹಾಕಿರುವಾಗ ಇಂದು ಮುಸಲ್ಮಾನರ ಇತರ ಸಮುದಾಯಗಳಲ್ಲೂ ಹೆಚ್ಚಿನ ಶಿರ್ಕ್ (ಬಹು ದೇವಾರಾಧನೆ) ಕಂಡು ಬರುತ್ತದೆ. ಮುಸಲ್ಮಾನರು ಗೋರಿಯ ಮೇಲೆ ಅಲ್ಲಾಹನ ಮುಂದೆ ಸಾಷ್ಟಾಂಗ ಎರಗುವ ರೀತಿಯಲ್ಲಿ ಸಾಷ್ಟಾಂಗ ಎರಗುತ್ತಾರೆ. ಅದರಲ್ಲಿ ಕಿಂಚಿತ್ತು ವ್ಯತ್ಯಾಸ ಕಂಡು ಬರುತ್ತಿಲ್ಲ. ನನಗೆ ಈ ಮಾತಿನ ಮೇಲೆ ಸದಾ ಆಶ್ಚರ್ಯವಾಗುತ್ತಿತ್ತು. ಒಬ್ಬ ಮುಸಲ್ಮಾನನು ಮುಸ್ಲಿಮನಾಗಿಯೂ ಗೋರಿಯ ಮೇಲೆ ಸಾಷ್ಟಾಂಗ ಎರಗಬಹುದೇ? ಯಾರು ಎಷ್ಟೇ ಹೇಳಿದರೂ ನಾನು ನಂಬುತ್ತಿರಲಿಲ್ಲ. ಆದರೆ ಒಂದು ಸಂದರ್ಭದಲ್ಲಿ ನಾವು ಕೆಲ ವ್ಯಕ್ತಿಗಳೊಂದಿಗೆ ಭಾರತದ ಇಸ್ಲಾಮಿ ಮದರಸಗಳನ್ನು ನೋಡಲು ಲಖ್ನೌದಲ್ಲಿ ಫರಂಗಿ ಮಹಲ್ ಮದರಸಕ್ಕೆ ಹೋಗಿದ್ದೆವು. ಆ ಮದರಸ ನೋಡಿ ನನಗೆ ತುಂಬ ಸಂತೋಷವಾಯಿತು. ಒಳ್ಳೆಯ ಲಾಯಕ್ ಮತ್ತು ಬುದ್ಧಿಶಾಲಿ ಶಿಕ್ಷಕರಿದ್ದರು. ವಿದ್ಯಾರ್ಥಿಗಳು ಸಹ ತುಂಬ ಜಾಣರಾಗಿ ಕಾಣುತ್ತಿದ್ದರು. ಆದರೆ ಈ ಮದರಸ ಮತ್ತು ಇತರ ಮದರಸಗಳನ್ನು ನೋಡಿಕೊಂಡು

ನಾವು ಸಂಜೆ ಮರಳಿ ಮನೆಗೆ ಹೋಗುತ್ತಿರುವಾಗ ಒಂದು ಗೋರಿಯ ಮುಂದೆ ಒಬ್ಬ ವ್ಯಕ್ತಿ ಪೂರ್ಣವಾಗಿ ಸಾಷ್ಟಾಂಗವೆರಗಿದ್ದು ಕಂಡುಬಂತು. ಅವನು ಫರಂಗಿ ಮಹಲ್ ಮದರಸದ ಒಬ್ಬ ಶಿಕ್ಷಕನಾಗಿದ್ದನು. ನನಗೆ ಅವನನ್ನು ನೋಡಿ ತುಂಬ ಆಶ್ಚರ್ಯವಾಯಿತು. ಅವನು ಅಷ್ಟೆಲ್ಲ ಅಧ್ಯಯನ ಮಾಡಿಯೂ ಬುದ್ಧಿ ಕಲಿಯಲಿಲ್ಲ ಮತ್ತು ಗೋರಿಯ ಮುಂದೆ ಸಾಷ್ಟಾಂಗ ಮಾಡುತ್ತಿದ್ದಾನೆ. ಮುಸಲ್ಮಾನರ ಕುರಿತು ಆ ಕಾರಣದಿಂದಲೇ ಅಲ್ಲಾಹನು ಈ ವಚನಗಳಲ್ಲಿ ವಿವರಣೆ ನೀಡಿದ್ದನು. ಒಂದು ದಿನ ನೀವು ಸಹ ಹಾಗೆ ಮಾಡುವಿರಿ ಎಂದು.

(ತಫ್ಸೀರ್ ಕಬೀರ್ ಸಂಪುಟ 2, ಪುಟ–4, ಮುದ್ರಣ 2010 ಖಾದಿಯಾನ್)

*(ಪುಟ ಸಂಖ್ಯೆ 16ರ ಉಳಿದ ಭಾಗ)*

ವೀಕ್ಷಣೆಯ ನಡುವೆ ಹುಝೂರ್(ಅಬಅ) ಸಭಾಂಗಣಕ್ಕೆ ಆಗಮಿಸಿದರು. ಅಲ್ಲಿ ಮಹಿಳೆಯರು ದರ್ಶನದ ಭಾಗ್ಯ ಪಡೆದರು. ಬಾಲಕಿಯರು ತಂಡಗಳ ರೂಪದಲ್ಲಿ ಪ್ರಾರ್ಥನಾ ಕವಿತೆಗಳನ್ನು ಮತ್ತು ಇತರ ಗೀತೆಗಳನ್ನು ಪ್ರಸ್ತುತಪಡಿಸಿದರು. ಹುಝೂರ್ ಪ್ರೀತಿಪೂರ್ವಕವಾಗಿ ಬಾಲಕಿಯರಿಗೆ ಚಾಕ್ಲೇಟ್ ನೀಡಿದರು.

ಅನಂತರ ಹುಝೂರ್ ಮಸೀದಿಯ ಹೊರ ಭಾಗದಲ್ಲಿ ಒಂದು ಬಾದಾಮಿನ ಸಸಿ ನೆಟ್ಟರು. ಅನಂತರ ಕಾರ್ಯಕ್ರಮದನ್ವಯ ಹುಝೂರ್ ಮಸೀದಿಯ ಹೊರಗಿನ ಭಾಗದಲ್ಲಿ ಹಾಕಲಾಗಿದ್ದ ಮಾರ್ಕಿಯೊಳಗೆ ಪ್ರವೇಶ ಮಾಡಿದರು ಅಲ್ಲಿ "ಬೈತುಲ್ ವಾಹಿದ್" ಮಸೀದಿಯ ಉದ್ಘಾಟನಾ ನಿಮಿತ್ತ ಸಮಾರಂಭದ ಆರಂಭವು ಪವಿತ್ರ ಖುರಆನ್ ಪಠಣದೊಂದಿಗೆ ಆಯಿತು. ಅದನ್ನು ನಾಲ್ಕನೆ ತರಗತಿಯ ಜಾಮಿಯಾ ಅಹ್ಮದಿಯಾ ಜರ್ಮನಿಯ ವಿದ್ಯಾರ್ಥಿ ಅಝೀಝುಂ ಕಾಶಿಫ್ ಅಹ್ಮದ್ ಜಂಜೂಆ ನೆರವೇರಿಸಿದರು. ಅನಂತರ ಅದರ ಜರ್ಮನ್ ಅನುವಾದ ಅಝೀಝುಂ ಮುಸದ್ದಿಖ್ ಅಹ್ಮದ್ ಜಂಜೂಆ ಪ್ರಸ್ತುತಪಡಿಸಿದರು. ಅನಂತರ ಮುಕರ್ರಮ್ ಅಮೀರ್ ಸಾಹಿಬ್ ಜರ್ಮನಿ ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸುತ್ತ ಹೇಳಿದರು.

HANAU ನಗರ ಎರಡು ನೂರು ವರ್ಷಗಳ ಹಿಂದೆ ಎರಡು ವಿಭಿನ್ನ ಕ್ಷೇತ್ರಗಳಲ್ಲಿ ವಿಭಜಿಸಲ್ಪಟ್ಟಿತ್ತು. 1903 ರಲ್ಲಿ ಅದನ್ನು ನಗರದ ಸ್ಥಾನ ಕೊಡಲಾಯಿತು. ಅದರ ಒಂದು ಭಾಗದಲ್ಲಿ ಹಾಲೆಂಡಿನಿಂದ ಜನರು ಬಂದು ನೆಲೆಸಿದ್ದಾರೆ. ಈ ನಗರದ ವಿಶೇಷತೆ ಎಂದರೆ ಇಲ್ಲಿ ಬಹಳಷ್ಟು ವಿದ್ವಾಂಸರು ಸಾಹಿತಿಗಳಿದ್ದಾರೆ. ನೆಪೋಲಿಯನ್ ಸಹ ಇಲ್ಲಿ ಕೆಲ ಅವಧಿ ನೆಲೆ ನಿಂತಿದ್ದನು.

ಎರಡನೇ ಮಹಾಯುದ್ಧದಲ್ಲಿ ಈ ನಗರ ಸಂಪೂರ್ಣ ನಾಶಗೊಂಡಿತ್ತು ಮತ್ತು ಕೇವಲ 10 ಸಾವಿರ ಜನಸಂಖ್ಯೆ ಈ ನಗರದಲ್ಲಿ ಉಳಿದುಕೊಂಡಿದ್ದರು. ಈಗ ಈ ನಗರದ ಜನಸಂಖ್ಯೆ 90 ಸಾವಿರ ಆಗಿದೆ. ನಗರವು ಬೆಳೆಯತೊಡಗಿದೆ. ನಮ್ಮ ಮಸೀದಿಯೂ ಈ ಪ್ರಗತಿಯ ಒಂದು ಭಾಗವಾಗಿದೆ.

ಈ ನಗರದಲ್ಲಿ ಜಮಾಅತ್ 2001 ರಿಂದ ಅಸ್ತಿತ್ವದಲ್ಲಿದೆ. 370 ಜನಸಂಖ್ಯೆ ಒಳಗೊಂಡಿದೆ. ಇಲ್ಲಿ ಜಮಾಅತ್ ಹೊಸ ವರ್ಷ ಆರಂಭದಲ್ಲಿ ಸ್ವಚ್ಛತಾ ಕಾರ್ಯ, Charity walk, benefit game, ವಿಶ್ವವಿದ್ಯಾನಿಲಯಗಳಲ್ಲಿ ಲೆಕ್ಚರ್, ಗಿಡ ನಡುವಿಕೆ ಹಾಗೂ ಇತರ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ.

ಮಸೀದಿಯ ಬಗ್ಗೆ ಅಮೀರ್ ಸಹಿಬ್ ಜರ್ಮನಿ ಹೇಳಿದರು. ಇದಕ್ಕಿಂತ ಮುಂಚೆ ಇಲ್ಲಿಯ ಸ್ಥಳದಲ್ಲಿ ಒಂದು Aldi market ಇತ್ತು. ಹೊಸದಾಗಿ ಮಸೀದಿ ನಿರ್ಮಾಣಕ್ಕಾಗಿ ತುಂಬ ಶ್ರಮ ಪಡಬೇಕಾಯಿತು.

ಈ ಭೂಭಾಗದ ವಿಸ್ತೀರ್ಣ ಸುಮಾರು 6000 ಚ.ಮೀ ಇದೆ. ಈ ಎಲ್ಲ ಭೂಭಾಗ ಮತ್ತು ಕಟ್ಟಡದ ಖರೀದಿ ಮತ್ತು ಈ ಕಟ್ಟಡದಲ್ಲಿ ಬದಲಾವಣೆ ಹಾಗೂ ಹೊಸ ನಿರ್ಮಾಣ ಕಾರ್ಯಗಳ ಮೇಲೆ ಒಟ್ಟು ಖರ್ಚು 1.1 ಮಿಲಿಯನ್ ಯೂರೋ ಆಗಿದೆ. ಈ ಮಸೀದಿಗೆ ಎರಡು ಎತ್ತರವಾದ ಗೋಪುರಗಳಿವೆ. ಅದರ ಎತ್ತರ 12 ಮೀಟರ್ ಆಗಿದೆ. ಮಸೀದಿಯ ಹೊರಭಾಗದಲ್ಲಿ 104 ವಾಹನಗಳಿಗಾಗಿ ವ್ಯವಸ್ಥಿತ ಪಾರ್ಕಿಂಗ್ ಇದೆ. ಈ ಜಾಗ 13 ಸೆಪ್ಟೆಂಬರ್ 2012 ರಲ್ಲಿ ಖರೀದಿಸಲಾಯಿತು. 22 ಏಪ್ರಿಲ್ 2014 ರಂದು ನಿರ್ಮಾಣ ಕಾರ್ಯ ಪ್ರಾರಂಭಿಸಲಾಯಿತು. ಇಂದು ಅದರ ಉದ್ಘಾಟನೆ ಆಗುತ್ತಿದೆ.

ನಂತರ HANAU ನಗರದ ಲಾರ್ಡ್ ಮೇಯರ್ CLAUS KAMINSKY ಸಾಹಿಬ್ ತಮ್ಮ ಪರಿಚಯ ಭಾಷಣ ಪ್ರಸ್ತುತ ಪಡಿಸುತ್ತಾ ಹೇಳಿದರು. ಗೌರವಾನ್ವಿತ ಖಲೀಫತುಲ್ ಮಸೀಹ್ ನನಗೆ ಇಂದು HANAU ನಗರದಲ್ಲಿ ಅಹ್ಮದಿಯಾ ಜಮಾಅತಿನ ಮಸೀದಿಯ ಉದ್ಘಾಟನೆ ಆಗುತ್ತಿದ್ದನ್ನು ನೋಡಿ ತುಂಬ ಸಂತೋಷವಾಗಿದೆ. ನಾನು ಈ ಸಂದರ್ಭದಲ್ಲಿ ಉಪಸ್ಥಿತನಾಗಿದ್ದೇನೆ. ಪ್ರಾರಂಭದಿಂದಲೇ ಅವರು ಮತ್ತು ಆಯೋಜಕರು ಮಸೀದಿ ನಿರ್ಮಾಣ ಕಾರ್ಯ ಕುರಿತು ನೆರೆಹೊರೆಯವರನ್ನು ಮತ್ತು ಅಕ್ಕಪಕ್ಕದ ಫರ್ಮ್‌ಗಳವರೊಂದಿಗೆ ನೆಮ್ಮದಿ ಹಾಗೂ ಭರವಸೆಯನ್ನು ಹುಟ್ಟು ಹಾಕಿದರು ಮತ್ತು ಅವರ ಆತಂಕಗಳನ್ನು ನಿವಾರಿಸಿದರು. ಆತಂಕ ದೂರ ಮಾಡಲು ಸರಳವಾದ ಕಾರಣವೆಂದರೆ ಅಹ್ಮದಿಯಾ ಜಮಾಅತ್ ಅತ್ಯಂತ ಸಮಾನತೆ ಮತ್ತು ಪ್ರೀತಿಯಿಂದ ವ್ಯವಹರಿಸುವ ಜಮಾಅತ್ ಆಗಿದೆ.

**(ಮುಂದುವರಿಯುವುದು)**

## ಉಖ್ದೆ ನಿಕಾಹ್ ಮಂಗ್‌ನಿ (ವಿವಾಹ ನಿಶ್ಚಯ)

ಒಂದು ಹದೀಸಿನಲ್ಲಿ ಹೀಗೆ ವರದಿ ಆಗಿದೆ: ಹಝ್ರತ್ ಮುಗ್ಯೈರ(ರ) ಹೇಳುತ್ತಾರೆ: ಅವರು ಒಂದು ಕಡೆ ವಿವಾಹ ನಿಶ್ಚಯಕ್ಕಾಗಿ ಸಂದೇಶ ಕಳುಹಿಸುತ್ತಾರೆ. ಆಗ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು: ಆ ಕನ್ಯೆಯನ್ನು ನೋಡಿರಿ ಏಕೆಂದರೆ ಆಕೆಯನ್ನು ನೋಡಿದರೆ ನಿಮ್ಮ ಮತ್ತು ಅವರ ನಡುವೆ ಹೊಂದಾಣಿಕೆ ಹಾಗೂ ಸ್ನೇಹ ಸಂಭವ ಹೆಚ್ಚಾಗಿರುತ್ತದೆ. **(ತಿರ್ಮಿಝಿ, ಕಿತಾಬುನ್ನಿಕಾಹ್)**

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಅ) ಹೇಳುತ್ತಾರೆ:

ಈ ಅನುಮತಿಯನ್ನು ಇಂದಿನ ಸಮಯದಲ್ಲಿ ಜನರು ತಪ್ಪು ಎಂದು ಭಾವಿಸಿಕೊಂಡಿದ್ದಾರೆ. ಅದರ ತಾತ್ಪರ್ಯ ವೇನೆಂದರೆ ಪರಸ್ಪರ ತಿಳುವಳಿಕೆ ಮಾಡುವ ಸಲುವಾಗಿ ಪ್ರತಿ ಸಮಯ ಪ್ರತ್ಯೇಕವಾಗಿ ಕುಳಿತುಕೊಳ್ಳಬಹುದು ಪ್ರರ್ಯಾಟನೆ ಮಾಡಬಹುದು ಎನಿಸಿಕೊಂಡಿದ್ದಾರೆ. ಮನೆಗಳಲ್ಲಿಯೂ ಗಂಟೆಗಟ್ಟಲೆ ಪ್ರತ್ಯೇಕವಾಗಿ ಕುಳಿತುಕೊಳ್ಳುವುದು ಸಹ ತಪ್ಪಾಗಿದೆ. ಅದರ ತಾತ್ಪಯವೂ ಕೇವಲ ಪರಸ್ಪರ ಮುಂದಿದ್ದು ಒಬ್ಬರಿನ್ನೊಬ್ಬರ ರೂಪ ನೋಡಿಕೊಂಡರೆ ಅರ್ಥ ಮಡಿಕೊಳ್ಳಲು ಸುಲಭವಾಗುತ್ತದೆ, ಮಾತನಾಡುವುದರಿಂದ ಒಂದಿಷ್ಟು ಸ್ವಭಾವ ತಿಳಿದುಬರುತ್ತದೆ. ಇಂದಿನ ಪರಿಸ್ಥಿತಿಗಳಲ್ಲಿ ಕುಟುಂಬದವರು ಜೊತೆಯಲ್ಲಿ ಕುಳಿತುಕೊಂಡು ಊಟ ಮಾಡಿದರೂ ತಪ್ಪೇನು ಇಲ್ಲ. ಊಟ ಮಾಡುವಾಗಲೂ ಒಬ್ಬರು ಮತ್ತೊಬ್ಬರ ಸ್ವಭಾವ ಅರಿತುಕೊಳ್ಳಬಹುದು. ಇಷ್ಟವಿಲ್ಲದ ಮಾತೇನಾದರೂ ಕಂಡರೆ ನಂತರದ ಜಗಳಗಳಿಂದ ತಪ್ಪಿಸಿಕೊಳ್ಳಬಹುದಾಗಿದೆ ಮತ್ತು ಎಲ್ಲ ವಿಷಯಗಳು ಸರಿಕಂಡರೆ ಹೊಂದಾಣಿಕೆ ಹಾಗೂ ಪ್ರೀತಿಯೂ ಈ ಸಂಬಂಧದಲ್ಲಿ ಇನ್ನು ಹೆಚ್ಚಾಗುತ್ತದೆ...... ಕೆಲವು ಜನರು ಕೆಲವೊಮ್ಮೆ ಅವರ ಸ್ವಭಾವ ಹೇಗಿರುತ್ತೆಂದರೆ ಯಾರದಾದರು ಸಂಬಂಧ ನಿಶ್ಚಯವಾದರೆ ಅವರು ಆ ಸಂಬಂಧದಲ್ಲಿ ಬಿರುಕು ಉಂಟು ಮಾಡಲು ಪ್ರಯತ್ನಿಸುತ್ತಾರೆ. ಅವರು ಹೀಗೆ ಪರಸ್ಪರ ನೋಡಿಕೊಂಡರೆ ಇಂತಹ ಅವಕಾಶ ದೊರೆಯಲಿಕ್ಕಿಲ್ಲ. ಜನರು ಒಬ್ಬರಿನ್ನೊಬ್ಬರನ್ನು ನೋಡಿದ ಪರಿಣಾಮದಿಂದಾಗಿ ತಿಳುವಳಿಕೆ ಉಂಟಾಗಿರುತ್ತದೆ ಆದರೆ ಕೆಲ ಜನರು ವಿವಾಹಕ್ಕಿಂತ ಮುಂಚೆ ಹುಡುಗ ಹುಡುಗಿಯರಿಗೆ ಅಥವಾ ನಿಶ್ಚಯದ ಸಮಯ ಪರಸ್ಪರ ಮುಂದೆ ಕುಳಿತುಕೊಳ್ಳಲು ಇಷ್ಟಪಡುವುದಿಲ್ಲ. ಅದಕ್ಕೆ ಗೌರವದ ಪ್ರಶ್ನೆಯನ್ನಾಗಿ ಮಾಡಿಕೊಳ್ಳುತ್ತಾರೆ. ಇಸ್ಲಾಮ್ ಧರ್ಮದ ಶಿಕ್ಷಣವು ಒಂದು ಸಮತೋಲನದ ಶಿಕ್ಷಣವಾಗಿದೆ. ಯಾವುದಕ್ಕೂ ಅತಿಯಾಗಿ ವರ್ತಿಸಲು ಇಷ್ಟ ಪಡುವುದಿಲ್ಲ. ಹೀಗೆ ಅದರೆಯೇ ಸಮಾದಲ್ಲಿ ಶಾಂತಿ ಉಂಟಾಗಬಹುದು ಮತ್ತು ನಮಾಜದಿಂದ ಗೊಂದಲಗಳನ್ನು ದೂರಮಾಡಬಹುದು. (ಖುತ್‌ಬಾತೆ ಮಸ್‌ರೂರ್, ಸಂಪುಟ–2, ಪುಟ–934–935, ಮುದ್ರಣ ಖಾದಿಯಾನ್)

**(ನಾಝಿರ್ ಇಸ್ಲಾಹ್ ವ ಇರ್‌ಶಾದ್ ಮರ್‌ಕಝೀಯ ಖಾದಿಯಾನ್)**

## ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್ ತೋಟಗಾರಿಕೆ ವಿಭಾಗದಲ್ಲಿ (ಶೋಬ ತಝೀಯೀನ್) ಸೇವೆಸಲ್ಲಿಸ ಬಯಸುವವರು ಗಮನಿಸಿರಿ

ತೋಟಗಾರಿಕೆ ವಿಭಾಗ (ಶೋಬ ತಝಯೀನ್) ಖಾದಿಯಾನಿನಲ್ಲಿ ಹೊಸ ಮಂಜೂರಾದ Based Grass Cutter machine ಚಾಲಕನ ಹುದ್ದೆಗಾಗಿ ಅಭ್ಯರ್ಥಿ ಬೇಕಾಗಿರುತ್ತದೆ. ಈ ಚಾಲಕ ಹುದ್ದೆ ಬಯಸುವರು ತಮ್ಮ ಅರ್ಜಿಯನ್ನು ಎರಡು ತಿಂಗಳು ಒಳಗಾಗಿ 'ನಝಾರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್'ನ ಹೆಸರಿನಲ್ಲಿ ಕಳುಹಿಸಬಹುದಾಗಿದೆ.

**ಶರತ್ತುಗಳು ಕೆಳಗಿನಂತಿವೆ:**

1. ಅಭ್ಯರ್ಥಿಯ ಬಳಿ Driving Licence ಮತ್ತು Drivingನ ಅನುಭವ ಅನಿವಾರ್ಯವಾಗಿರುತ್ತದೆ.
2. ಅಭ್ಯರ್ಥಿ ಅಲ್ಪ ಸ್ವಲ್ಪವಾದರೂ Technical ಕೆಲಸ ತಿಳಿದಿರಬೇಕು. ಏಕೆಂದರೆ ಅಗತ್ಯಗನುಗುಣವಾಗಿ ಆ ಕಟ್ಟರ್ ಮಿಶಿನನ್ನು ಸರಿಪಡಿಸಿಕೊಳ್ಳಬಹುದಾಗಿದೆ.
3. ಅಭ್ಯರ್ಥಿ Tractor Trolly ಓಡಿಸಲು ತಿಳಿದಿರಬೇಕು.
4. ಅಭ್ಯರ್ಥಿ ವಿಧೇಯ, ಪ್ರಾಮಾಣಿಕನಾಗಿರಬೇಕು, ಸಮಯ ಬೀರಿದಾಗ ಹೆಚ್ಚಾಗಿ ಕೆಲಸಕ್ಕೂ ಸಿದ್ಧನಾಗಿರಬೇಕು.
5. ಅಭ್ಯರ್ಥಿಗೆ ಯಾವ ಶಿಕ್ಷಣ ಅರ್ಹತೆ ಬೇಕಾಗಿರುವುದಿಲ್ಲ.
6. ಅಭ್ಯರ್ಥಿಗೆ ಜನನ ಪ್ರಮಾಣ ಪತ್ರಿಕೆಯನ್ನು ಪ್ರಸ್ತುತಪಡಿಸುವುದು ಅನಿವಾರ್ಯವಾಗಿರುತ್ತದೆ.
7. ಸಂದರ್ಶನದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಮಾತ್ರ ಚಾಲಕ ಸೇವೆಗೆ ಆಯ್ಕೆ ಮಾಡಿಕೊಳ್ಳಲಾಗುವುದು.
8. ನೂರ್ ಆಸ್ಪತ್ರೆ ಖಾದಿಯಾನಿನಿಂದ Medical Fitness Certificate ಪಡೆದುಕೊಂಡವರನ್ನು ಮಾತ್ರ ಚಾಲಕ ಸೇವೆಗೆ ಅರ್ಹರೆಂದು ಪರಿಗಣಿಸಲಾಗುವುದು.
9. ಚಾಲಕ ಅಭ್ಯರ್ಥಿಗೆ 2ನೇ ದರ್ಜೆ ಸಮಾನ ಭತ್ಯೆ ಹಾಗೂ ಇತರ ಸವಲತ್ತುಗಳನ್ನು ನೀಡಲಾಗುವುದು.
10. ಖಾದಿಯಾನ್‌ಗೆ ಆಮದ್ ರಫತ್‌ನ ವ್ಯಚ್ಚ ಅಭ್ಯರ್ಥಿ ಸ್ವತಃ ನೋಡಿಕೊಳ್ಳ ಬೇಕಾಗುತ್ತದೆ.
11. ಅಭ್ಯರ್ಥಿಯು ಆಯ್ಕೆಗೊಂಡಿದ್ದಲ್ಲಿ ಖಾದಿಯಾನಿನಲ್ಲಿ ವಸತಿ ವ್ಯವಸ್ಥೆಯು ಖುದ್ದಾಗಿ ಮಾಡಿಕೊಳ್ಳುವುದಾಗಿದೆ.

**ಟಿಪ್ಪಣಿ: ನಮೂದಿತ ಅರ್ಜಿಯೂ ನಝಾರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್‌ನಿಂದ ಪಡೆಯಬಹುದು.**

**(ನಾಝಿರ್ ದೀವಾನ್ ಖಾದಿಯಾನ್)**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ನಝಾರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್.**

**Phone: 01872-501130, (Mob): 9877138347, 9646351280**

**Email: diwan@qadian.in**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly BADAR Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.1, Thursday, 03 September 2020, Issue No. 34

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹುಝೂರ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 33ರ ವರದಿಯ ಉಳಿದ ಭಾಗ)**

**27 ನೇ ಬುಧವಾರ 2015**

ಹುಝೂರ್ ಅನ್ವರ್(ಅಬಅ) ಮುಂಜಾವಿನ ನಾಲ್ಕೂವರೆ ಗಂಟೆಗೆ ಆಗಮಿಸಿ ಫಜ್ರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು. ನಂತರ ಲಂಡನ್ ಕೇಂದ್ರ, ರಬ್ವಾ, ಖಾದಿಯಾನ್ ಹಾಗೂ ಲೋಕದಾದ್ಯಂತದ ದೇಶಗಳ ಜಮಾಅತುಗಳಿಂದ ಬಂದ ಅಂಚೆಗಳನ್ನು, ಪತ್ರಗಳನ್ನು ಮತ್ತು ವರದಿಗಳನ್ನು ಪರಿಶೀಲಿಸಿ ನಿರ್ದೇಶನಗಳನ್ನು ನೀಡಿದರು. ಈ ಅಂಚೆಯ ಹೊರತು ಜರ್ಮನಿ ಜನರಿಂದಲೂ ದಿನನಿತ್ಯ ನೂರಾರು ಸಂಖ್ಯೆಯಲ್ಲಿ ಪತ್ರಗಳು ಬರುತ್ತಿವೆ ಅದನ್ನು ಹುಝೂರ್ ಪರಿಶೀಲಿಸುತ್ತಾರೆ ಮತ್ತು ನಿರ್ದೇಶನಗಳನ್ನು ನೀಡುತ್ತಾರೆ.

**: ಕುಟುಂಬಗಳ ಭೇಟಿ :**

ಕಾರ್ಯಕ್ರಮದನ್ವಯ ಹನ್ನೊಂದೂವರೆ ಗಂಟೆಗೆ ಹುಝೂರ್ ತಮ್ಮ ಕಚೇರಿಗೆ ಆಗಮಿಸಿದರು ಮತ್ತು ಕುಟುಂಬಗಳ ಭೇಟಿಯನ್ನು ಪ್ರಾರಂಭಿಸಿದರು.

ಇಂದು ಮುಂಜಾನೆಯ ಈ ಅಧಿವೇಶನದಲ್ಲಿ 41 ಕುಟುಂಬಗಳ 138 ಜನರು ಮತ್ತು 30 ಜನರು ವೈಯಕ್ತಿಕವಾಗಿ ಭೇಟಿ ಮಾಡುವ ಭಾಗ್ಯ ಪಡೆದರು. ಹೀಗೆ ಸಾಮೂಹಿಕವಾಗಿ 168 ಜನರು ತಮ್ಮ ಪ್ರೀತಿಯ ನೇತಾರರೊಡನೆ ಭೇಟಿಯಾಗುವ ಭಾಗ್ಯ ಪಡೆದರು.

ಈ ಎಲ್ಲಾ ಕುಟುಂಬಗಳು ಮತ್ತು ಇತರರು ಹುಝೂರ್‌ರೊಡನೆ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಹುಝೂರ್ ಪ್ರೀತಿಯಿಂದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಲೇಖನ (pen) ನೀಡಿದರು. ಸಣ್ಣ ವಯಸ್ಸಿನ ಬಾಲಕ ಬಾಲಕಿಯರಿಗೆ ಚಾಕ್ಲೇಟುಗಳನ್ನು ನೀಡಿದರು.

ತಮ್ಮ ಪ್ರೀತಿಯ ಇಮಾಮರನ್ನು ಭೇಟಿ ಮಾಡಲು ಬಂದ ಈ ಕುಟುಂಬಗಳು ಜರ್ಮನಿಯ ವಿವಿಧ ಜಮಾಅತುಗಳಿಂದ ಬಂದವರಾಗಿದ್ದರು. ಅವರಲ್ಲಿ ಕೆಲ ಕುಟುಂಬಗಳು ಮತ್ತು ಬಂಧುಗಳು ಬಹುದೂರದ ಪ್ರಯಾಣ ಬೆಳೆಸಿ ಬಂದು ತಲುಪಿದ್ದರು. KASSEL ನಿಂದ ಬಂದವರು 200 ಕಿ.ಮೀ OSNABRUCK ನಿಂದ ಬಂದವರು 330 ಕಿ.ಮೀ. ಮುನ್ಷೆನ್ (MUNCHEN) ನಿಂದ ಬಂದವರು 395 ಕಿ.ಮೀ HANNOVER ನಿಂದ ಬಂದವರು 550 ಕಿ.ಮೀ ದೂರದ ಪ್ರಯಾಣ ಬೆಳೆಸಿ ತಮ್ಮ ಪ್ರೀತಿಯ ಇಮಾಮರನ್ನು ಭೇಟಿ ಮಾಡಲು ಬಂದು ತಲುಪಿದ್ದರು. ಇಲ್ಲಿ ಕೆಲ ಕ್ಷಣಗಳನ್ನು ಕಳೆದದ್ದು ಅದು ಜೀವನ ಪರ್ಯಂತದ ಬಂಡವಾಳವಾಗಿತ್ತು. ಅವರಿಗೆ ಮತ್ತು ಅವರ ಮಕ್ಕಳಿಗಾಗಿ ಅದು ಸ್ಮರಣೀಯ ಕ್ಷಣಗಳಾಗಿದ್ದವು. ಅಲ್ಲಾಹನು ಆ ಭಾಗ್ಯ ಅವರಿಗೆ ಮತ್ತು ಅವರ ಮಕ್ಕಳಿಗೆ ಶುಭಕರವಾಗಿ ಮಾಡಲಿ.

ಭೇಟಿಗಳ ಈ ಕಾರ್ಯಕ್ರಮವು 1.15 ಗಂಟೆಯವರೆಗೆ ನಡೆಯಿತು. ಅನಂತರ ಹುಝೂರ್ ಮುಕರ್‌ರಮ್ ಆಬಿದ್ ವಹೀದ್ ಖಾನ್ ಸಾಹಿಬ್ "in charge press and media office" ಮತ್ತು Addl ವಕೀಲುತ್ತಬ್‌ಶೀರ್ ಲಂಡನ್ ಅವರು ಒಬ್ಬರ ನಂತರ ಇನ್ನೊಬ್ಬರನ್ನು ಕರೆಯಿಸಿಕೊಂಡರು. ಮತ್ತು ವಿವಿಧ ಕಾರ್ಯಗಳ ಕುರಿತು ವಿಚಾರಿಸಿ ನಿರ್ದೇಶನಗಳನ್ನು ನೀಡಿದರು. ಅನಂತರ 2.30 ಗಂಟೆಗೆ ತಮ್ಮ ವಸತಿ ನಿಲಯಕ್ಕೆ ತೆರಳಿದರು.

**HANAU ಎಂಬ ಸಣ್ಣ ನಗರದಲ್ಲಿ "ಬೈತುಲ್ ವಾಹಿದ್" ಮಸೀದಿಯ ಉದ್ಘಾಟನೆ**

ಇಂದು ಕಾರ್ಯಕ್ರಮದನ್ವಯ HANAU ನಗರದಲ್ಲಿ "ಬೈತುಲ್ ವಾಹಿದ್" ಮಸೀದಿಯ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿತ್ತು.

5.15 ಗಂಟೆಗೆ ಹುಝೂರ್ ಪ್ರಯಾಣ ಬೆಳೆಸಲು ತಮ್ಮ ವಸತಿನಿಲಯದಿಂದ ಹೊರಗೆ ಬಂದು ದುಆ ಮಾಡಿಸಿದರು. ನಂತರ ಪ್ರವಾಸದ ತಂಡವು ಬೈತುಲ್ ಸಬೂಹ್‌ದಿಂದ HANAU ನಗರಕ್ಕೆ ಹೊರಟಿತು. ಫ್ರಂಕ್‌ಫರ್ಟ್‌ಯಿಂದ HANAU ನಗರದ ದೂರ 35 ಕಿ.ಮೀ ಆಗಿದೆ. 45 ನಿಮಿಷಗಳ ಪ್ರಯಾಣದ ನಂತರ ಹುಝೂರ್ "ಬೈತುಲ್ ವಹಿದ್" ಮಸೀದಿಗೆ ಆಗಮಿಸಿದರು.

ಸ್ಥಳೀಯ ಜಮಾಅತಿನ ಜನರು ಪುರುಷರು, ಸ್ತ್ರೀಯರು, ಯುವಕರು, ವೃದ್ಧರು, ಬಾಲಕ ಬಾಲಕಿಯರು ಮುಂಜಾನೆಯಿಂದಲೇ ತಮ್ಮ ಪ್ರೀತಿಯ ನೇತಾರರ ಶುಭಾಗಮನದ ಸಿದ್ಧತೆಯಲ್ಲಿ ತೊಡಗಿದ್ದರು. ಅವರಿಗೆ ಇಂದಿನ ದಿನ ಯಾವುದೇ ಹಬ್ಬಕ್ಕಿಂತ ಕಡಿಮೆ ಏನಾಗಿರಲಿಲ್ಲ. ಹುಝೂರ್ ರವರ ಪವಿತ್ರ ಪಾದಗಳು ಆ ನೆಲದಲ್ಲಿ ಪ್ರಥಮ ಬಾರಿಗೆ ಬೀಳುತ್ತಿದ್ದವು. ಪ್ರತಿಯೊಬ್ಬನು ಅತೀವ ಸಂತೋಷದಿಂದ ತಮ್ಮ ಪ್ರೀತಿಯ ಇಮಾಮರ ಆಗಮನವನ್ನು ನಿರೀಕ್ಷಿಸುತ್ತಿದ್ದನು.

ಹುಝೂರ್ ಅನ್ವರ್ ಅವರ ವಾಹನವು ಹೊರಗಿನ ದ್ವಾರದಿಂದ ಮಸೀದಿ ಆವರಣಕ್ಕೆ ಬರುತ್ತಿದ್ದಂತೆಯೇ ಜಮಾಅತ್ ಬಾಂಧವರು ಪೂರ್ಣ ಉತ್ಸಾಹದಿಂದ ಘೋಷಣೆಗಳನ್ನು ಹಾಕಿದರು. ಬಾಲಕ ಬಾಲಕಿಯರ ತಂಡಗಳು ತಮ್ಮ ಕೈಗಳಲ್ಲಿ ಲಿವಾಯೆ ಅಹ್ಮದಿಅತ್ ಮತ್ತು ಜರ್ಮನಿಯ ರಾಷ್ಟ್ರೀಯ ಧ್ವಜ ಹಾರಾಡಿಸುತ್ತ ಪ್ರಾರ್ಥನಾ ಕವಿತೆಗಳನ್ನು ಮತ್ತು ಸ್ವಾಗತ ಗೀತೆಗಳನ್ನು ಪ್ರಸ್ತುತಪಡಿಸಿದರು.

ಪ್ರತಿಯೊಬ್ಬ ಕಿರಿಯ, ಹಿರಿಯರು ತಮ್ಮ ಕೈಯೆತ್ತಿ ತಮ್ಮ ಪ್ರೀತಿಯ ಖಲೀಫರ ಶುಭಾಗಮನ ಕೋರುತ್ತಿದ್ದರು. ಮಹಿಳೆಯರೂ ತಮ್ಮ ಪ್ರೀತಿಯ ಇಮಾಮರ ದರ್ಶನದ ಭಾಗ್ಯ ಪಡೆಯುತ್ತಿದ್ದರು.

HANAU ಜಮಾಅತಿನ ಅಧ್ಯಕ್ಷರಾದ ಮುಕರ್‌ರಮ್ ಮುಬಾರಕ್ ಅಹ್ಮದ್ ಚಟ್ಟ ಸಾಹಿಬ್, ಸ್ಥಳೀಯ ಅಮೀರರಾದ ಮುಕರ್‌ರಮ್ ಇಹ್‌ಸಾನುಲ್ ಹಖ್ ಸಾಹಿಬ್ ಮತ್ತು ಸಂಘಟನೆಯ ಮುಬ್ಬಲಿಗರಾದ ಮುಕರ್‌ರಮ್ ಅರ್‌ಬಾಬ್ ಅಹ್ಮದ್ ಸಾಹಿಬ್ ಹುಝೂರರಿಗೆ ಹಸ್ತಲಾಘವ ಮಾಡುತ್ತಾ ಶುಭಾಗಮನ ಕೋರಿದರು.

ಈ ಸಂದರ್ಭದಲ್ಲಿ HANAU ನಗರದ CLAUS KAMINSKY ಸಾಹಿಬ್ ಮತ್ತು ನೇಷ್ನಲ್ ಪಾರ್ಲಿಮೆಂಟಿನ ಸದಸ್ಯರುಗಳಾದ FARU MULLAR ಸಾಹಿಬ್, FARU SCHULZ ASCHE ಸಾಹಿಬ, FRAU CHRISTINE BUCHHOLZ ಸಾಹಿಬ ಸಹ ಈ ಸಮಾರಂಭಕ್ಕೆ ಆಗಮಿಸಿದ್ದರು. ಇವರೆಲ್ಲರೂ ಹುಝೂರ್ ಅನ್ವರ್(ಅಬಅ) ಅವರನ್ನು ಸ್ವಾಗತಿಸುತ್ತ ಶುಭಾಗಮನ ಕೋರಿದರು.

ಅನಂತರ ಹುಝೂರ್ ಮಸೀದಿಯ ಹೊರಾಂಗಣದ ಗೋಡೆಯಲ್ಲಿ ಸ್ಥಾಪಿಸಲಾದ ಹಲಗೆಯನ್ನು ಅನಾವರಣಗೊಳಿಸಿ ದುಆ ಮಾಡಿಸಿದರು. ಅನಂತರ ಹುಝೂರ್ ಮಸೀದಿಯ ಒಳ ಪ್ರವೇಶಿಸಿ ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿ ಕೊಟ್ಟರು. ಅದರೊಂದಿಗೆ ಈ ಮಸೀದಿಯ ಉದ್ಘಾಟನೆಯು ಕಾರ್ಯರೂಪಕ್ಕೆ ಬಂದಿತ್ತು.

ನಮಾಝುಗಳ ನಿರ್ವಹಣೆಯ ನಂತರ ಹುಝೂರ್ ಮಸೀದಿ ಅದಕ್ಕೆ ಹೊಂದಿಕೊಂಡಿರುವ ಸಭಾಂಗಣ ಮತ್ತು ಇತರ ಕಚೇರಿಗಳನ್ನು ವೀಕ್ಷಿಸಿದರು. ಪುರುಷರ ಸಭಾಂಗಣ, ಮಹಿಳೆಯರಿಗೆ ಪ್ರತ್ಯೇಕವಾಗಿರುವ ಸಭಾಂಗಣ ಹಾಗೂ ಒಂದು Multi purpose Hall ಇದೆ. ಈ ಮೂರು ಸಭಾಂಗಣಗಳಲ್ಲಿ ಸಾಮೂಹಿಕವಾಗಿ ಸುಮಾರು ಒಂದು ಸಾವಿರ ಜನರು ನಮಾಝ್ ನಿರ್ವಹಿಸಬಹುದಾಗಿದೆ, ಅದಲ್ಲದೆ ಇಲ್ಲಿಯ ಜಮಾಅತಿನ ಅಧ್ಯಕ್ಷರು ಮತ್ತು ಖುದ್ದಾಮ್, ಅನ್ಸಾರ್‌ಗಳ ಕಚೇರಿಗಳಲ್ಲದೆ ಒಂದು ಅಡುಗೆ ಕೋಣೆ ಮತ್ತು ಗ್ರಂಥಾಲಯ ಸಹ ನಿರ್ಮಿಸಲಾಗಿದೆ. ಲಜ್ನ ಅವರಿಗಾಗಿ ಮೂರು ಪ್ರತ್ಯೇಕ ಕಚೇರಿಗಳಿವೆ.

ಇದಕ್ಕಿಂತ ಮುಂಚೆ ಈ ಸ್ಥಳ super market ಆಗಿದ್ದಿತು. ಅದನ್ನು ಹಲವು ಬದಲಾವಣೆ ತಂದು ಮಸೀದಿಯ ರೂಪದಲ್ಲಿ ಪರಿವರ್ತಿಸಿದರು.

*(ಉಳಿದ ವರದಿ ಪುಟ ಸಂಖೆ 09 ರಲ್ಲಿ ಓದಿರಿ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
NATIONAL TOLL FREE
1800-103-2131

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.